Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ-17 ಸಂಚಿಕೆ-7 ಫೆಬ್ರವರಿ 13-19, 2023 ಪುಟ 16 ರೂ. 10/-
Volume-17 Issue-7 February 13-19, 2023 Pages:16 Price: 10/-



ರಾಜ್ಯಪಾಲರಿಂದ ಸರ್ಕಾರಕ್ಕೆ ಬಹುಪರಾಕ್



ತ್ರಿಪುರಾದಲ್ಲಿ ಪ್ರಜಾಪ್ರಭುತ್ವಕ್ಕೆ ದನಿಯೊತ್ತೋಣ

'ಪಠಾಣ್' ಯಶಸು #BoycottBollywood ಗ್ಯಾಂಗಿನ ಸೋಲಿನ ಸೂಚನೆಯೇ?




ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ನಾಶಕ್ಕೆ ಸರ್ಕಾರ ಮುಂದಾಗಿದೆಯೇ?

ಮಂಡ್ಯದಿಂದ ಬೆಂಗಳೂರಿಗೆ ಕೃಷಿಕೂಲಿಕಾರರ ಪಾದಯಾತ್ರೆ



'ವೀರ' ಸಾವರ್ಕರ್–ಏಳು ಮಿಥ್ಯೆಗಳು

ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಡಾ.ಶಮ್ಸುಲ್ ಇಸ್ಲಾಮ್ ರವರ 'ಸಾವರ್ಕರ್ ಅನ್‌ಮಾಸ್ಕ್ಡ್' ಸಾವರ್ಕರ್‌ರವರನ್ನು ಕುರಿತ ಏಳು ಮಿಥ್ಯೆಗಳನ್ನು ದಾಖಲೆಗಳ ಬೆಳಕಿನಲ್ಲಿ ಪರಿಶೀಲಿಸುತ್ತದೆ.



ಭಾಗ–16

ಡಾ. ಶಮ್ಸುಲ್‌ಇಸ್ಲಾಂ
ಅನು: ಟಿ.ಸುರೇಂದ್ರರಾವ್

ಮಿಥ್ಯೆ 1 : 'ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ'!
ಈ ಮಿಥ್ಯೆ ಎಂತಹ ಅರೆ ಸತ್ಯಗಳು ಮತ್ತು ಸುಳ್ಳುಗಳಿಂದ ಕೂಡಿದೆ ಎಂಬುದನ್ನು ಓದಿದ್ದೀರಿ. ತನ್ನ ರಾಜಕೀಯ ಜೀವನದ ಮೊದಲ ಘಟ್ಟದಲ್ಲಿ ಕೋಮು ಸಾಮರಸ್ಯದ ಸ್ವತಂತ್ರ ಭಾರತದ ಆದರ್ಶಕ್ಕಾಗಿ ತುಡಿಯುತ್ತಿದ್ದ ಕ್ರಾಂತಿಕಾರಿಯಾಗಿದ್ದ ಸಾವರ್ಕರ್, ಸೆಲ್ಯುಲರ್ ಜೈಲಿನಲ್ಲಿನ ಕಾರಾಗೃಹವಾಸ ಮತ್ತು ಅಲ್ಲಿನ ಘೋರ ಯಾತನೆ ಕಂಡು ಕ್ಷಮಾಯಾಚನೆಯ ಅರ್ಜಿಯೊಂದಿಗೆ ಆರಂಭಿಸಿದ ಎರಡನೇ ಘಟ್ಟದಲ್ಲಿ ಬ್ರಿಟಿಷ್ ದೊರೆಗಳ ಒಡೆದು ಆಳುವ ಯೋಜನೆಯಲ್ಲಿ ನೆರವಾದರು, ಧರ್ಮದ ಹೆಸರಿನಲ್ಲಿ ದೇಶಾತೀತ ಸ್ವಾಮಿನಿಷ್ಠೆಯನ್ನು ಪ್ರದರ್ಶಿಸಿದರು, ರಾಷ್ಟ್ರೀಯ ಆಂದೋಲನ ಅಂಗೀಕರಿಸಿದ್ದ ತ್ರಿವರ್ಣ ಬಾವುಟವವನು ವಿರೋಧಿಸಿದರು, ಬ್ರಿಟಿಷರ ಬಂಟರಾಗಿದ್ದ ಹಿಂದೂ ರಾಜರುಗಳ ಮಹಾಸಮರ್ಥಕರಾಗಿದ್ದರು ಎಂಬುದನ್ನು ಓದಿದ್ದೀರಿ.

ಮಿಥ್ಯೆ 2 : ಸಾವರ್ಕರ್ ತಮ್ಮ ಬದುಕಿನ ಬಹುಭಾಗವನ್ನು ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿ ಕಳೆದರು!
ಸಾವರ್ಕರ್ ನಿಜವಾಗಿಯೂ ಕ್ರಾಂತಿಕಾರಿಯಾಗಿದ್ದಾಗ ಅವರಿಗೆ ಬ್ರಿಟಿಷರು ಎರಡು ವಿಭಿನ್ನ ಪ್ರಕರಣಗಳಲ್ಲಿ ಒಟ್ಟು 50 ವರ್ಷ ಗಡೀಪಾರಿನ ಶಿಕ್ಷೆ ವಿಧಿಸಿದ್ದು ನಿಜ. ಆದರೆ ಅದರಲ್ಲಿ ಅವರು ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿ ಶಿಕ್ಷೆ ಅನುಭವಿಸಿದ್ದು ಕೇವಲ 10 ವರ್ಷ. ಆದರೆ ಸಾವರ್ಕರ್ ಅವರ ಸಮಕಾಲೀನರಲ್ಲಿ ಅವರಂತೆ ಮಾಫಿ ಪಡೆಯದ, ಮಾಫಿ ಕೇಳದ ಕ್ರಾಂತಿಕಾರಿಗಳ ದೊಡ್ಡ ಪಟ್ಟಿಯೇ ಸಿಗುತ್ತದೆ. ಅಂತಹ ಕರಾಳ ಪರಿಸ್ಥಿತಿಯಲ್ಲೂ ಹೋರಾಟ ಮುಂದುವರೆಸಿದ, ಜೈಲಿನಲ್ಲೇ ಅಕಾಲಿಕ ವೃದ್ಧರಾದವರ, ಹುತಾತ್ಮರಾದವರ ದೊಡ್ಡ ಪಟ್ಟಿಯೇ ಇದೆ. ಅಂಥಹ ಒಬ್ಬರ ಹೆಸರೂ ಸಾವರ್ಕರ್ ಭಕ್ತರಿಗೆ ಗೊತ್ತಿರಲು ಸಾಧ್ಯವಿಲ್ಲ. ಅಂಥಹ ಕೆಲವು ಸಾಹಸಿಗಳನ್ನು ಲೇಖಕರು ಈ ಅಧ್ಯಾಯದಲ್ಲಿ ನೆನಪಿಸಿಕೊಂಡಿದ್ದಾರೆ. ಹಿಂದಿನ ಎರಡು ಸಂಚಿಕೆಗಳಲ್ಲಿ ಎಂಟು ಕ್ರಾಂತಿಕಾರಿಗಳ ಬಗ್ಗೆ ಓದಿದ್ದೀರಿ. ಇಲ್ಲಿ ಇನ್ನೂ ಇಬ್ಬರ ಬಗ್ಗೆ ಓದಿ.

ವಸಾಹತುಶಾಹಿ ಆಳರಸರ ವಿರುದ್ಧ ಸೆಟೆದು ನಿಂತ ವೀರ ಕ್ರಾಂತಿಕಾರಿಗಳು

ನಂದ ಗೋಪಾಲ್

ಸ್ವರಾಜ್ ಅಲಹಾಬಾದ್ ಪತ್ರಿಕೆಯ ಸಂಪಾದಕ ನಂದ ಗೋಪಾಲ್ ಅವರನ್ನು ಸ್ವರಾಜ್ಯ ಪ್ರಕರಣದಲ್ಲಿ ವಿಚಾರಣೆ ನಡೆಸಿ ಹತ್ತು ವರ್ಷಗಳ ಕಾಲ ಬಂಧನದಲ್ಲಿ ಇಡಲಾಗಿತ್ತು. ಜೈಲಿನ ಭೀಕರ ದೌರ್ಜನ್ಯದ ವಿರುದ್ಧ ನಂದ ಗೋಪಾಲ್ ನಡೆಸಿದ ವೀರೋಚಿತ ಹೋರಾಟ ಕುರಿತು ಬರೀಂದ್ರ ಕುಮಾರ್ ಅವರು **ದಿ ಟೇಲ್ ಆಫ್ ಮೈ ಎಕ್ಸೈಲ್** ಪುಸ್ತಕದಲ್ಲಿ ವಿವರವಾಗಿ ಹೇಳಿದ್ದಾರೆ:

ಅವರನ್ನು ಎಣ್ಣೆ ಗಿರಣಿ ಬಳಿ ಕರೆದುಕೊಂಡು ಹೋದಾಗ ದೊಡ್ಡ ರಂಪ ಮಾಡಿದರು. ಆರಂಭದಲ್ಲೇ, ಬಹಳ ಸ್ಪಷ್ಟವಾಗಿ ಹೇಳಿದರು 'ಎಣ್ಣೆ ಗಾಣವನ್ನು ಅಷ್ಟು ಬೇಗ ತಿರುಗಿಸುವುದಕ್ಕೆ ನನಗೆ ಆಗೋದಿಲ್ಲ.' ಎಂದು. ಹಾಗಾಗಿ ಗಿರಣಿ ಬಹಳ ನಿಧಾನವಾಗಿ ತಿರುಗಿತು. ಅದರ ಪರಿಣಾಮವಾಗಿ 10 ಗಂಟೆಯ ಹೊತ್ತಿಗೂ ಅಗತ್ಯದ ಮೂರನೇ ಒಂದು ಭಾಗದ ಎಣ್ಣೆಯೂ ಉತ್ಪಾದನೆಯಾಗಲಿಲ್ಲ. ಆ ಸಮಯದಲ್ಲಿ ಸಾಮಾನ್ಯ ಖೈದಿಗಳು ಬಂದು ತಮ್ಮ ಊಟವನ್ನು 5–6 ನಿಮಿಷದಲ್ಲೇ ಮುಗಿಸಿ ಉಳಿದ ಕೆಲಸವನ್ನು ಮಾಡಿದರು. ಅಲ್ಲಿಯ ನಿಯಮದ ಪ್ರಕಾರ 10 ಗಂಟೆಯಿಂದ 12 ಗಂಟೆಯವರೆಗಿನ ಅವಧಿಯು ಊಟ ಹಾಗೂ ವಿಶ್ರಾಂತಿಗಾಗಿ ಮೀಸಲಾಗಿತ್ತು. ಆದರೆ ವಾಸ್ತವದಲ್ಲಿ ಖೈದಿಗಳಾರೂ ವಿಶ್ರಾಂತಿ ಪಡೆಯದೆ ಸತತವಾಗಿ ಕೆಲಸಮಾಡಿ ಮುಗಿಸಿ ನಂತರದಲ್ಲಿ ತಮ್ಮ ಮನಃತೃಪ್ತಿಯಾಗುವಷ್ಟು ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಿದ್ದರು. ಆದರೆ ನಂದ ಗೋಪಾಲ್ ಅವರಿಗೆ ಅಂತಹ ಯಾವ ಭೀತಿಯೂ ಇರಲಿಲ್ಲ.

ಸಣ್ಣ ಅಧಿಕಾರಿಯೊಬ್ಬ ಬಂದು ಬೇಗ ಊಟ ಮುಗಿಸು ಎಂದ. ನಂದ ಗೋಪಾಲ್ ಅವನತ್ತ ನೋಡಿ ಮುಗುಳ್ನಗೆ ಬೀರಿ ಬೇಗ ಬೇಗ ಊಟ ಮಾಡುವುದರಿಂದ ಹೊಟ್ಟೆಗೆ ಆಗಬಹುದಾದ ಅಪಾಯದ ಬಗ್ಗೆ ಹೇಳಿದರು ಮತ್ತು ತಾನು ಹತ್ತು ವರ್ಷಗಳ ಕಾಲ ಸರ್ಕಾರದ ಅತಿಥಿಯಾಗಿ ಇರಬೇಕಾದ್ದರಿಂದ ತನ್ನ ಆರೋಗ್ಯ ಹಾಳುಮಾಡಿಕೊಂಡು ಸರ್ಕಾರಕ್ಕೆ ಕೆಟ್ಟ ಹೆಸರು ತರಲು ತನಗೆ ಇಷ್ಟವಿಲ್ಲ ಎಂದರು. ಈ ವಿಷಯ ಜೈಲರನಿಗೆ ತಲುಪಿ ಅವನು ಬಂದು ನಂದ ಗೋಪಾಲ್ ಅವರು ನಿಧಾನವಾಗಿ ಒಂದೊಂದೇ ತುತ್ತನ್ನು 32 ಹಲ್ಲುಗಳಿಂದಲೂ ಅಗಿದು ಅಗಿದು ತಿನ್ನುತ್ತಿರುವುದನ್ನು ನೋಡಿದ. ಕೋಪಗೊಂಡ ಜೈಲರ್ 'ಅಷ್ಟೂ ಕೆಲಸವನ್ನು ಸರಿಯಾದ ಸಮಯಕ್ಕೆ ಮಾಡಿ ಮುಗಿಸದಿದ್ದರೆ ಕುದುರೆ ಚಾಟಿಯಿಂದ ಹೊಡೆತ ತಿನ್ನಬೇಕಾಗುತ್ತದೆ' ಎಂದು ಹೇಳಿದ. ನಂದ ಗೋಪಾಲ್ ತಣ್ಣಗೆ ಒಂದು ನಗೆ ಬೀರಿ ಬಹಳ ವಿನೀತರಾಗಿ ಮತ್ತೊಮ್ಮೆ ಆರೋಗ್ಯದ ಬಗ್ಗೆ ಪಾಠ ಮಾಡಿದರು. ಅದೂ ಅಲ್ಲದೇ, 10 ರಿಂದ 12 ಗಂಟೆಯವರೆಗೆ ವಿಶ್ರಾಂತಿ ಎಂದು ನಿಗದಿ ಮಾಡಿರುವುದು ಸರ್ಕಾರ, ಆ ಸರ್ಕಾರದ ಆದೇಶವನ್ನು ಉಲ್ಲಂಘಿಸಲು ತಾನು ಇಷ್ಟಪಡುವುದಿಲ್ಲ ಎಂದೂ ಹೇಳಿದರು. ಜೈಲರ್ ಕೂಡ ಆ ಆದೇಶವನ್ನು ಉಲ್ಲಂಘಿಸದೆ ಇರುವಂತೆ ನೋಡಿಕೊಳ್ಳುವುದು ನನ್ನ ಜವಾಬ್ದಾರಿ ಕೂಡ ಎಂದರು. ಜೈಲರನ ಇಡೀ ವ್ಯಕ್ತಿತ್ವ ಕೃತಜ್ಞತೆಯಿಂದ ತುಂಬಿಹೋಯಿತು! ಕೋಪದಿಂದ ಸಿಡಿಮಿಡಿಗೊಂಡರೂ, ಮತ್ತೊಮ್ಮೆ ಯೋಚಿಸಿ ನೋಡಿ ಮರ್ಯಾದೆಯಿಂದ ಹಿಂದೆಸರಿದ.

ಊಟ ಮುಗಿಸಲು ತನ್ನದೇ ಸಮಯ ತೆಗೆದುಕೊಂಡ ನಂದ ಗೋಪಾಲ್ ತಮ್ಮ ಸೆಲ್‌ಗೆ ಹಿಂತಿರುಗಿದರು. ದಿಕ್ಕುತೋರದ ಸಣ್ಣ ಅಧಿಕಾರಿ ನಂದ ಗೋಪಾಲ್ ಈಗ ಕೆಲಸ ಶುರುಮಾಡುತ್ತಾರೆ ಎಂದು ಆಲೋಚಿಸಿದ್ದರು. ಆದರೆ, ಸೆಲ್‌ಗೆ ಹಿಂತಿರುಗಿದ ಅಸಾಧಾರಣ ವ್ಯಕ್ತಿ ನಂದ ಗೋಪಾಲ್ ನೆಲದ ಮೇಲೆ ತಮ್ಮ ಹಾಸಿಗೆ ಬಿಚ್ಚಿಕೊಂಡು ಮಲಗೇ ಬಿಟ್ಟರು. ಬೈಗುಳಗಳ ಮಳೆಗರೆದರೂ ಅವರ ನಿದ್ದೆ ಅಬಾಧಿತವಾಗಿತ್ತು. ವಿನಮ್ರ ಪ್ರತಿರೋಧದ ವಿಷಯದಲ್ಲಿ ಅವರು ಗಾಂಧೀಜಿಗೇ ಗುರುವಾಗಿದ್ದವರು. 12 ಗಂಟೆಗೆ ಎದ್ದವರು ಒಂದು ಗಂಟೆ ಕಾಲ ಗಾಣವನ್ನು ತಿರುಗಿಸಿದರು. . .ಅರ್ಧ ಕೆಲಸ ಆಗಿತ್ತಷ್ಟೆ. ಉಳಿದ ಕೆಲಸವನ್ನು ಯಾರು ಮಾಡುತ್ತಾರೆ? ನಂದ ಗೋಪಾಲ್ ಹೇಳಿದರು 'ಯಾರಿಗೆ ಮಾಡಬೇಕೆನ್ನಿಸುತ್ತದೋ ಅವರು ಮಾಡಲಿ, ಇಡೀ ದಿನ ಗಾಣವನ್ನು ತಿರುಗಿಸಲು ನಾನಂತೂ ಎತ್ತು ಅಲ್ಲ. ನನಗೆ ಸಿಗುತ್ತಿರುವ ಪಡಿತರವು ಒಂದೂವರೆ ಆಣೆಯೂ ಇಲ್ಲ, ಹಾಗಿರುವಾಗ 30 ಪೌಂಡ್ ಎಣ್ಣೆ ತೆಗೆಯಲು ಹೇಗೆ ಸಾಧ್ಯ? ನಂದ ಗೋಪಾಲ್ ಅವರಿಂದ 30 ಪೌಂಡ್ ಎಣ್ಣೆ ತೆಗೆಸಲು ಸಾಧ್ಯವೇ ಇಲ್ಲ ಎಂದು ತಿಳಿದ ಸೂಪರಿಂಟೆಂಡೆಂಟ್, ಮುಂದಿನ ಆದೇಶದ ವರೆಗೂ ಬಾಯಿ ಮುಚ್ಚಿಕೊಂಡು ಸುಮ್ಮನೇ ಇರುವಂತೆ ಅವರ ಕೆಳಗಿನವರಿಗೆ ಹೇಳಿದ.

ಗಮನಿಸಬೇಕಾದ ಮುಖ್ಯ ಅಂಶವೆಂದರೆ, ನಂದಗೋಪಾಲ್ ಅವರ ಧೈರ್ಯ ಸೆಲ್ಯುಲರ್ ಜೈಲಿನಲ್ಲಿರುವ ರಾಜಕೀಯ ಖೈದಿಗಳ ಮೊದಲ ಮುಷ್ಕರಕ್ಕೆ ಕಾರಣವಾಯಿತು. ಆದರೆ ಅಧಿಕಾರಿಗಳು ಕೂಡ ಸುಮ್ಮನೆ ಕುಳಿತುಕೊಳ್ಳಲಿಲ್ಲ. ಅದರ ಹಿಂದೆಯೇ ಸಾಲು ಸಾಲು ಶಿಕ್ಷೆಗಳು ಬಂದವು. ನಂದ ಗೋಪಾಲ್ ಅವರನ್ನು ಏಕಾಂಗಿಯಾಗಿ ಮಾಡಿ ಅತ್ಯಂತ ಅಮಾನುಷ ಕ್ರೌರ್ಯಕ್ಕೆ ತುತ್ತಾಗಿಸಿದರು. ಆದರೆ ಅವರು ಆ ದಮನವನ್ನು ಎಂದಿಗೂ ಪ್ರಶ್ನಿಸದೇ ಇರಲಿಲ್ಲ.

ನಂದ ಗೋಪಾಲ್ ಮತ್ತು ಹೃಷಿಕೇಷ್ ಕಾಂಜಿಲಾಲ್ (ಅಲಿಪುರ್ ಬಾಂಬ್ ಪ್ರಕರಣದಲ್ಲಿ 10 ವರ್ಷಗಳ ಶಿಕ್ಷೆಗೆ ಒಳಗಾದವರು) ಅವರು ಕ್ರಡೊಕ್ ಅವರಿಗೆ ತಮ್ಮ ಅರ್ಜಿಯನ್ನು ನವಂಬರ್ 15, 1913 ರಂದು ಸಲ್ಲಿಸಿರುವುದು ನಿಜವೇ ಆದರೂ, ಅದು ಕ್ಷಮಾದಾನ ಬೇಡಿ ಸಲ್ಲಿಸಿದ ಅರ್ಜಿಗಳಾಗಿರಲಿಲ್ಲ. ಸೆಲ್ಯುಲರ್ ಜೈಲಿನಲ್ಲಿ ಕೂಡ ಭಾರತೀಯ ಜೈಲು ನಿಯಮಗಳನ್ನು ಅನುಸರಿಸಿಯೇ ಮಾನವೀಯ ಶಿಕ್ಷೆ ನೀಡಿ ಎಂದು ನ್ಯಾಯಯುತವಾಗಿಯೇ ಒತ್ತಾಯಿಸಿದ್ದರು.

ನಾನಿ ಗೋಪಾಲ್ ಮುಖರ್ಜಿ

ಹದಿನಾರರ ಹರೆಯದ ಹುಡುಗನಾಗಿದ್ದ ನಾನಿ ಗೋಪಾಲ್ ಮುಖರ್ಜಿ ಡಾಲ್‌ಹೌಸಿ ಸ್ಕ್ವೇರ್ ಬಾಂಬ್ ಪ್ರಕರಣದಲ್ಲಿ 15 ವರ್ಷಗಳ ಶಿಕ್ಷೆಗೆ ಒಳಗಾಗಿದ್ದ. ಅಷ್ಟು ಚಿಕ್ಕ ವಯಸ್ಸಿನವನಾಗಿದ್ದರೂ ಅವನನ್ನು ಎಣ್ಣೆ ಹಿಂಡುವ ಕಟುವಾದ ಕೆಲಸಕ್ಕೆ ಹಾಕಿದ್ದರು. ಸೆಲ್ಯುಲರ್ ಜೈಲಿನ ಉಪವಾಸ ಮುಷ್ಕರದಲ್ಲಿ ಮೊದಲು ಭಾಗವಹಿಸಿದ ಪ್ರಮುಖರಲ್ಲಿ ಅವನು ಒಬ್ಬನಾಗಿದ್ದ. ಅವನನ್ನು ಬೇಡಿ ತೊಡಿಸಿಯೇ ನಿಲ್ಲಿಸಿದ್ದರು. ಸೆಲ್ಯುಲರ್ ಜೈಲಿನ ಅಧಿಕಾರಿಗಳು ಅವನಿಗೆ ಹೆಚ್ಚು ಶಿಕ್ಷೆ ವಿಧಿಸಿದ ಹಾಗೆಯೂ ಅವನು ಸಿಟ್ಟೇಗೇಳುತ್ತಿದ್ದ. ಅವನಿಗೆ ಸಣ್ಣ ಚೀಲದ ಬಟ್ಟೆಗಳನ್ನು ಕೊಡುತ್ತಿದ್ದರು. ಅವನು ಒಟ್ಟಿನಲ್ಲಿ ಬಟ್ಟೆ ತೊಡುವುದನ್ನೇ ಬಿಟ್ಟುಬಿಟ್ಟ. ಅವನ ಮೈಮೇಲೆಯೇ ಬಟ್ಟೆ ಹೊಲೆದು ಬಲವಂತವಾಗಿ ಹಾಕುತ್ತಿದ್ದರು, ಆದರೆ ಅವನು ಅವುಗಳನ್ನು ಹರಿದು ಹಾಕುತ್ತಿದ್ದ. ಅದಕ್ಕೆ ಶಿಕ್ಷೆಯಾಗಿ ಅವನ ಕೈ ಮತ್ತು ಕಾಲುಗಳಿಗೆ ಸರಪಳಿ ತೊಡಿಸಲಾಗಿತ್ತು. ಆದರೆ ಅವನು ಅದರ ಬೀಗವನ್ನು ಹೇಗೋ ಮುರಿದು ಹಾಕುತ್ತಿದ್ದ. ಯಾವ ಪ್ರಶ್ನೆ ಕೇಳಿದರೂ ಉತ್ತರಿಸುತ್ತಿರಲಿಲ್ಲ ಮತ್ತು ಅಧಿಕಾರಿಗಳು ಬಂದಾಗ ನಿಂತುಕೊಳ್ಳುತ್ತಿರಲಿಲ್ಲ. ಅವನನ್ನು ಏಕಾಂಗಿ ಸೆರೆಗೆ ಒಳಪಡಿಸಲಾಯಿತು, ಅದರಿಂದ ಅವನು ಹೊರಗೇ ಬರುತ್ತಿರಲಿಲ್ಲ. ಅವನು ಸ್ನಾನ ಮಾಡಲು ನಿರಾಕರಿಸಿದ ಮತ್ತು ಅದರ ಪರಿಣಾಮವಾಗಿ ತೆಂಗಿನ ಕತ್ತದಿಂದ ಅವನ ಮೈಯನ್ನು ಉಜ್ಜಿ ಬಲಾತ್ಕಾರದ ಸ್ನಾನ ಮಾಡಿಸಲಾಗುತ್ತಿತ್ತು. ಅವರು ಎಷ್ಟು ಬಲವಾಗಿ ಉಜ್ಜುತ್ತಿದ್ದರೆಂದರೆ ಅವನ ಮೈಯೆಲ್ಲಾ ರಕ್ತದಿಂದ ಕೆಂಪಾಗುತ್ತಿತ್ತು. ಆದರೂ ಅವನು ಶರಣಾಗಲಿಲ್ಲ.

ಅವನು ಹಗಲಿಡೀ ನಗ್ನನಾಗಿಯೇ ಇರುತ್ತಿದ್ದ ಮತ್ತು ರಾತ್ರಿ ಹೊತ್ತಿನಲ್ಲಿ ಹೊದೆಯಲು ಕೊಡುತ್ತಿದ್ದ ಚಾದರವನ್ನೂ ಅವರು ಕೊಡಲಿಲ್ಲ. ಮೊದಮೊದಲು ಅವನು ಅವುಗಳನ್ನು ಬಿಸಾಕುತ್ತಿದ್ದ. ಹಾಗಾಗಿ ಅವನು ಹಗಲೂ ರಾತ್ರಿ ಎರಡೂ ಹೊತ್ತು ಜೈಲು ಸೆಲ್ಲಿನ ನೆಲದ ಮೇಲೇ ಬರಿ ಮೈಯಲ್ಲಿ ಮಲಗುತ್ತಿದ್ದ. ಜೈಲಿನ ಅಧಿಕಾರಿಗಳು ತನ್ನನ್ನು ರಾಜಕೀಯ ಖೈದಿಗಳಂತೆ ಕಾಣಬೇಕು ಎನ್ನುವುದು ಅವನ ವಾದವಾಗಿತ್ತು.

ಯಾವ ರೀತಿಯ ಆಹಾರ ಕೊಡುತ್ತಿದ್ದರು ಎನ್ನುವುದು ಅವನಿಗೆ ಬಹಳ ಸಣ್ಣ ವಿಷಯವಾಗಿತ್ತು, ಅದರ ಬಗ್ಗೆ ಅವನು ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಆದರೆ ಎಲ್ಲಾ ರಾಜಕೀಯ ಖೈದಿಗಳಂತೆ ತನ್ನನ್ನೂ ಪರಿಗಣಿಸಬೇಕೆನ್ನುವುದು ಅವನಿಗೆ ಮರ್ಯಾದೆಯ ಹಾಗೂ ಗೌರವದ ಪ್ರಶ್ನೆಯಾಗಿತ್ತು. ನಾವು ರಾಜಕೀಯ ಖೈದಿಗಳು, ನಾವೇನು ಕಳ್ಳರೋ, ದರೋಡೆಕೋರರೋ ಅಥವಾ ಡಕಾಯಿತರೋ ಅಲ್ಲವಲ್ಲ ಎಂಬುದು ಅವನ ವಾದಸರಣಿಯಾಗಿತ್ತು. ಆ ವಿಷಯವನ್ನು ಒಟ್ಟಿಗೇ ನಿರ್ಧಾರ ಮಾಡಬೇಕು. ಚೀಫ್ ಕಮಿಷನರ್ ಅವನಿಗೆ ಹೇಳಿದರು 'ಅದನ್ನು ನಿನಗೆ ಎಂದೂ ನೀಡುವುದಿಲ್ಲ.' ಎಂದು. ಒಂದು ಚೌಕಟ್ಟಿನಲ್ಲಿ ಕಟ್ಟಿಹಾಕಿ ಅವನನ್ನು ಬೆತ್ತದಿಂದ ಹೊಡೆಯಲಾಗುತ್ತಿತ್ತು. ಬೇರೆ ಜೈಲಿಗೆ ಕಳಿಸಿದರೆ ಅವನನ್ನು ಪಳಗಿಸಬಹುದೆಂದು ಭಾವಿಸಿ ಅವನನ್ನು ಮತ್ತೊಂದು ಸಣ್ಣ ಜೈಲಿಗೆ ಕಳಿಸಲಾಯಿತು. ಅವರ ಲೆಕ್ಕಾಚಾರ ತಪ್ಪಾಗಿತ್ತು, ಅಲ್ಲಿ ಅವನು ತಕ್ಷಣವೇ ಉಪವಾಸ ಮುಷ್ಕರ ಶುರುಮಾಡಿದ. ಆ ಜೈಲಿನಲ್ಲಿ ಒಂದು ತುತ್ತು ಆಹಾರವನ್ನೂ ಅವನು ಮುಟ್ಟಲಿಲ್ಲ. ಆದರೆ ಒಂದಿಷ್ಟು ಗಮನವನ್ನೂ ಇವನಿಗೆ ಅಲ್ಲಿ ನೀಡಲಿಲ್ಲ. ಅವನು ತಿನ್ನಲಿಲ್ಲ, ಮಾತನಾಡಲಿಲ್ಲ. ಅನ್ನ ನೀರು ಇಲ್ಲದೇ ನೆಲದ ಮೇಲೆಯೇ ಮಲಗಿರುತ್ತಿದ್ದ. ಅವನನ್ನು ಮತ್ತೆ ಸೆಲ್ಯುಲರ್ ಜೈಲಿಗೆ ಕರೆತರಲಾಯಿತು, ಆದರೆ ಅವನು ಜಪ್ಪೆನ್ನಲಿಲ್ಲ. ಐದಾರು ದಿನಗಳು ಹೀಗೆಯೇ ಕಳೆದ ನಂತರ ಜೈಲಿನ ನಿಯಮದ ಪ್ರಕಾರ, ಟ್ಯೂಬಿನ ಮೂಲಕ ಅವನಿಗೆ ಬಲವಂತದಿಂದ ಆಹಾರ ತುರುಕಲಾಯಿತು. ಮೂಗಿನಿಂದ ಹಾಲನ್ನು ಹೀರುವಂತೆ ಮಾಡಲಾಯಿತು.

(ಮುಂದುವರೆಯುವುದು)

ಸಂಪಾದಕೀಯ

ರಾಜ್ಯಪಾಲರಿಂದ ಸರ್ಕಾರಕ್ಕೆ ಬಹುಪರಾಕು

ಫೆಬ್ರುವರಿ 10 ರಂದು ನಡೆದ ವಿಧಾನ ಮಂಡಲದ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಜ್ಯಪಾಲರ ಥಾವರ್ ಚಂದ ಗೆಹಲೋತ್ ಮಾಡಿದ ಭಾಷಣವು ನಿರೀಕ್ಷೆಯಂತೆ ಬೊಮ್ಮಾಯಿ ಸರ್ಕಾರದ ಬೆನ್ನು ತಟ್ಟಲು, ಅದನ್ನು ಹಾಡಿ ಹೋಗಲು ಬಳಸಿಕೊಂಡದ್ದು ಸ್ಪಷ್ಟವಾಗಿತ್ತು. 'ನಮಸ್ಕಾರ' ಎಂದು ಕನ್ನಡದಲ್ಲಿ ತಮ್ಮ ಭಾಷಣವನ್ನು ಆರಂಭಿಸಿದ ಅವರು ಉಳಿದ 34 ಪುಟಗಳ ಭಾಷಣವನ್ನು ಹಿಂದಿಯಲ್ಲಿ ಓದಿ ಮುಗಿಸಲು ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ತೆಗೆದುಕೊಂಡರು.

15ನೇ ವಿಧಾನ ಮಂಡಲದ ಜಂಟಿ ಸದನವನ್ನು ಉದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣ ತೀರಾ ನಿರಸವಾಗಿತ್ತು. ಅದರಲ್ಲಿ ಯಾವ ಹೊಸ ಘೋಷಣೆ ಇರಲಿಲ್ಲ. ಯಾವುದೇ ವಿವಾಸ್ಪದ ಅಂಶಗಳನ್ನು ಇತ್ಯರ್ಥ ಪಡಿಸುವ ಉದ್ದೇಶವನ್ನು ಪ್ರಸ್ತಾಪಿಸಲಾಗಿರಲಿಲ್ಲ. ಕೇವಲ ಸರ್ಕಾರದ ಯೋಜನೆಗಳನ್ನು ಪ್ರಸಂಶಿಸಿ ಪ್ರಗತಿಯ ವರದಿಯನ್ನು ನೀಡುವುದಕಷ್ಟೇ ಸೀಮಿತವಾಗಿತ್ತು. ನಾಡಿನ ಜನರ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ಯಾವ ಪ್ರಸ್ತಾಪವೂ ಅದು ಒಳಗೊಂಡಿರಲಿಲ್ಲ. ರೈತರು, ಕಾರ್ಮಿಕರು, ಬಡವರು, ದುರ್ಬಲ ವರ್ಗಕ್ಕೆ ಸೇರಿದವರ ಕಲ್ಯಾಣಕ್ಕೆ ತಮ್ಮ ಸರ್ಕಾರ ಬದ್ಧವಾಗಿದೆ ಎಂದು ಹೇಳಿದ ರಾಜ್ಯಪಾಲರು ಪರೋಕ್ಷವಾಗಿ ಕಳೆದ 4 ವರ್ಷಗಳಲ್ಲಿ ಭ್ರಷ್ಟಾಚಾರ ಹಾಗೂ ಕೋಮು ಸಂಘರ್ಷವನ್ನು ಬಿಟ್ಟರೆ ಬೇರೆ ಏನನ್ನು ಮಾಡಲಾಗಿಲ್ಲ ಎಂದು ತಮ್ಮ ಭಾಷಣದಲ್ಲಿ ಪರೋಕ್ಷವಾಗಿ ಒಪ್ಪಿಕೊಂಡಿದ್ದಾರೆ.

ರಾಜ್ಯಪಾಲರ ಭಾಷಣದೊಂದಿಗೆ ಆರಂಭವಾದ 11 ದಿನಗಳ ಬಜೆಟ್ ಅಧಿವೇಶನದ 4 ದಿನಗಳ ಕಾಲ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಚರ್ಚೆ ನಡೆಯಲಿದೆ. ಫೆಬ್ರುವರಿ 17 ರಂದು ರ ರಾಜ್ಯ ಬಜೆಟ್ ಮಂಡನೆಯಾಗಲಿದೆ. ಭಾಷಣದ ಅಂಶಗಳು ತೀವ್ರ ಚರ್ಚೆಗೆ ಒಳಗಾಗುವ ಸಾಧ್ಯತೆ ಇದೆ. ಸರ್ಕಾರದ ಸಾಧನೆಯನ್ನೇ ರಾಜ್ಯಪಾಲರು ಬಣ್ಣಿಸಿದಂತಿತ್ತು. ರಾಜ್ಯದ ಅಭಿವೃದ್ಧಿಗೆ ಸರ್ಕಾರದ ಬಳಿ ಯಾವ ದೂರ ದೃಷ್ಟಿಯೂ ಇರಲಿಲ್ಲ ಎಂದು ಚರ್ಚೆಯಲ್ಲಿ ಬಯಲಿಗೆ ಬರಲಿದೆ. ಭಾಷಣದಲ್ಲಿನ ಅಂಕಿ ಅಂಶಗಳು ಸತ್ಯಕ್ಕೆ ದೂರವಾಗಿವೆ ಎಂಬುವುದು ಬಯಲಾಗಲಿದೆ. ಸುಳ್ಳುಗಳನ್ನು ಸತ್ಯ ಎಂದು ರಾಜ್ಯಪಾಲರ ಮೂಲಕ ಹೇಳಲು ಪ್ರಯತ್ನಪಟ್ಟದ್ದು ನಾಚಿಕೆಗೇಡಿನ ಸಂಗತಿಯಾಗಿದೆ. ಭ್ರಷ್ಟಾಚಾರದ ವಿಷಯದಲ್ಲಿ ರಾಜ್ಯಪಾಲರು ಸರ್ಕಾರದ ಕಿವಿ ಹಿಂಡಿ ಬುದ್ಧಿ ಹೇಳಬೇಕಾಗಿತ್ತು. ಆದರೆ ಕೇಂದ್ರ ಸರ್ಕಾರದ ರಬ್ಬರ್ ಸ್ಟಾಂಪ್ ಆಗಿರುವ ರಾಜ್ಯಪಾಲರು ಭ್ರಷ್ಟಾಚಾರಕ್ಕೆ ಕುಮಕ್ಕು ನೀಡಿದಂತಾಗಿದೆ.

ಇತ್ತೀಚಿಗೆ ಕರಾವಳಿ ಜಿಲ್ಲೆಗಳಲ್ಲಿ, ಅಲ್ಲದೆ ಕೊಡಗು, ಹುಬ್ಬಳ್ಳಿ ಮೊದಲಾದ ಕಡೆ ಹಿಂದುತ್ವ ಪಡೆಗಳು ಭಯಾನಕ ಪರಿಸ್ಥಿತಿಯನ್ನು ಸೃಷ್ಟಿಸುತ್ತಿವೆ. ಅಮಾಯಕರನ್ನು ಕೊಲ್ಲಲಾಗುತ್ತದೆ. ಆದರೆ ಈ ಆತಂಕದ ಬೆಳವಣಿಗೆ ನಮ್ಮ ರಾಜ್ಯಪಾಲರನ್ನು ಕಾಡುತ್ತಿಲ್ಲ. ಈ ಕ್ರೂರ ಶಕ್ತಿಗಳ ವಿರುದ್ಧ ರಾಜ್ಯಪಾಲರು ಧ್ವನಿ ಎತ್ತುವುದಿಲ್ಲ. ಸರ್ಕಾರಕ್ಕೆ ಹಾಗೂ ಪೊಲೀಸರಿಗೆ ಎಚ್ಚರಿಕೆ ನೀಡುವುದಿಲ್ಲ.

ಕರ್ನಾಟಕವು ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವ ಮುಂಚೂಣಿ ರಾಜ್ಯ ಎಂದು ರಾಜ್ಯಪಾಲರು ಬೊಮ್ಮಾಯಿ ಸರ್ಕಾರವನ್ನು ಹಾಡಿ ಹೊಗಳುತ್ತಿರುವುದು ಖೇದದ ಸಂಗತಿಯಾಗಿದೆ. ಶಾಂತಿ ಸೌಹಾರ್ದತೆ ಇಲ್ಲದ ಒಂದು ಸಮಾಜ ಪ್ರಗತಿ ಪಥದಲ್ಲಿ ಸಾಗುವುದು ಹೇಗೆ ಸಾಧ್ಯ? ಕಾರ್ಪೊರೇಟ್ ಕಂಪನಿಗಳ ಅಧಿಪತ್ಯವನ್ನು ಬೆಳೆಸಲು ಬದ್ಧವಾಗಿರುವ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಜನರನ್ನು ಒಡೆದ ಆಳುವ ನೀತಿಯನ್ನು ಜಾರಿಗೆ ತರಲು ಅಷ್ಟೇ ಬದ್ಧವಾಗಿದೆ. ಇಂತಹ ಸರ್ಕಾರ ಬೀಸುವ ಮೋಸದ ಬಲೆಗೆ ನಮ್ಮ ಜನ ಸಿಕ್ಕಿಹಾಕಿಕೊಳ್ಳದಂತೆ ಎಚ್ಚರ ವಹಿಸಬೇಕಾಗಿರುವುದು ಸಮಯದ ಕರೆ. ಬಜೆಟ್ ಭರವಸೆಗಳು ನಮ್ಮನ್ನು ದಾರಿ ತಪ್ಪಿಸದಂತೆ ಎಚ್ಚರಿಕೆ ವಹಿಸುವುದು ಅತ್ಯಗತ್ಯ.





ಕಲಬುರ್ಗಿಯಲ್ಲಿ 'ಸಾವರ್ಕರ್ ಮಾಫಿನಾಮಾ' ಬೀದಿ ನಾಟಕ ಪ್ರದರ್ಶನ:

ಮೈಸೂರು ರಂಗಾಯಣದ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ನಿರ್ದೇಶನದ 'ಟಿಪ್ಪು ನಿಜಕನಸುಗಳು' ನಾಟಕ ಕಲಬುರ್ಗಿ ನಗರದ ಎಸ್.ಎಂ.ಪಂಡಿತ ರಂಗಮಂದಿರದಲ್ಲಿ ಪ್ರದರ್ಶನವಾದರೆ, ಅದನ್ನು ವಿರೋಧಿಸಿ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಸದಸ್ಯರಿಂದ ಜಗತ್ ವೃತ್ತದಲ್ಲಿ 'ಸಾವರ್ಕರ್ ಮಾಫಿನಾಮಾ' ಬೀದಿ ನಾಟಕ ಪ್ರದರ್ಶನವಾಯಿತು.

'ಟಿಪ್ಪು ಸುಲ್ತಾನ್ ಕುರಿತು ಕಲ್ಪಿತ ನಾಟಕ ರಚಿಸಿ, ರಂಗಭೂಮಿಯಲ್ಲಿ ಪ್ರಯೋಗಿಸಲಾಗುತ್ತಿದೆ' ಎಂದು ಆರೋಪಿಸಿ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಸದಸ್ಯರು 'ಸಾವರ್ಕರ್ ಮಾಫಿನಾಮಾ' ಬೀದಿ ನಾಟಕದ ಸಣ್ಣ ತುಣುಕು ಪ್ರದರ್ಶಿಸಿದರು. ಇದಕ್ಕೂ ಮುನ್ನ ಲೇಖಕ ಕೋ, ಚೆನ್ನಬಸಪ್ಪ ಅವರು ಬರೆದ 'ಅಪ್ರತಿಮ ದೇಶಭಕ್ತ ಟೀಪೂ ಸುಲ್ತಾನ್(ಟಿಪ್ಪು ಸುಲ್ತಾನ್)' ಪುಸ್ತಕ ಹಿಡಿದು ಟಿಪ್ಪು ಪರ ಘೋಷಣೆ ಕೂಗಿ, ಜಾಗೃತ ಗೀತೆಗಳನ್ನು ಹಾಡಿದರು. 'ಸಾವರ್ಕರ್ ಜೀವನ ಗಾಥೆಯ ಆಯ್ದ ಭಾಗಗಳನ್ನು ಆಧರಿಸಿ 45 ನಿಮಿಷಗಳ ಬೀದಿ ನಾಟಕ ಪ್ರದರ್ಶನಕ್ಕೆ ಸಿದ್ಧತೆ ಮಾಡಿಕೊಂಡಿದ್ದೆವು. ಆದರೆ, ಜನದಟ್ಟಣೆ ಆಗುವುದೆಂದು ಪೊಲೀಸರು ಪೂರ್ಣಪ್ರಮಾಣದ ನಾಟಕ ಪ್ರದರ್ಶನಕ್ಕೆ ಅನುಮತಿ ನೀಡಲಿಲ್ಲ. ಹೀಗಾಗಿ ಸಾವರ್ಕರ್ ಜೈಲಿನಲ್ಲಿ ಕ್ಷಮಾಪಣೆ ಕೇಳುವ 10 ನಿಮಿಷಗಳ ದೃಶ್ಯವನ್ನಷ್ಟೇ ಪ್ರದರ್ಶಿಸಲು ಸಾಧ್ಯವಾಯಿತು' ಎಂದು ಜನವಾದಿ ಮಹಿಳಾ ಸಂಘಟನೆಯ ಅಧ್ಯಕ್ಷೆ ಮೀನಾಕ್ಷಿ ಬಾಳಿ ಹೇಳಿದ್ದಾರೆ.

'ಪೊಲೀಸ್ ಅಧಿಕಾರಿಗಳು ಒತ್ತಡಕ್ಕೆ ಒಳಗಾಗಿ 'ಸಾವರ್ಕರ್ ಮಾಫಿನಾಮಾ' ಬೀದಿ ನಾಟಕದ ಪೂರ್ಣಪ್ರಮಾಣದ ಪ್ರದರ್ಶನಕ್ಕೆ ಅವಕಾಶ ನೀಡದೆ ನಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ದಮನಗೊಳಿಸಿದ್ದಾರೆ' ಎಂದಿರುವ ಚಿಂತಕಿ ಕೆ. ನೀಲಾ ಅವರು, ನಮ್ಮ ಚುನಾವಣೆಯ ಪ್ರಮುಖ ಅಸ್ತ್ರ ಸಾವರ್ಕರ್ ಮತ್ತು ಟಿಪ್ಪು ಎಂದು ಇತ್ತೀಚೆಗೆ ಬಿಜೆಪಿ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಮಾತನಾಡುವ ಮೂಲಕ ವಿವಾದ ಸೃಷ್ಟಿಸಿದ್ದರು. ಅದರಂತೆ ಅವರು ಟಿಪ್ಪು ಕುರಿತು ಸುಳ್ಳು ವಿಚಾರಗಳನ್ನು ಹೇಳುತ್ತಿದ್ದಾರೆ. ಕೋಮುಗಲಭೆ ಎಬ್ಬಿಸಿ ಮತ ವಿಭಜಿಸುವ ಹುನ್ನಾರ ಅಡಗಿದೆ ಎಂದು ಆರೋಪಿಸಿದರು.

ಬೀದಿ ನಾಟಕದ ಪೈಕಿ ಅಂಡಮಾನ್ ಜೈಲಿನಲ್ಲಿ ಬಂಧಿಯಾಗಿದ್ದ ಸಾವರ್ಕರ್ ಅವರು ಬ್ರಿಟಿಷ್ ಅಧಿಕಾರಿಗೆ ಕ್ಷಮಾಪಣೆ ಕೇಳುವ ತುಣುಕೊಂದನ್ನು ವಿನಾಯಕ ದಾಮೋದರ ಸಾವರ್ಕರ್ ಪಾತ್ರದಲ್ಲಿ ಕೋದಂಡರಾಮ, ಬ್ರಿಟಿಷ್ ಅಧಿಕಾರಿಗಳಾಗಿ ಮಲ್ಲಿಕಾರ್ಜುನ ಕನ್ನ, ಸಂಗಯ್ಯ ಕರ್ಣ ಮತ್ತು ಶರಣಗೌಡ ಮಾಲಿ ಪಾಟೀಲ ಅಭಿನಯಿಸಿದರು.

ಹೋರಾಟಗಾರರಾದ ಅರ್ಜುನ ಭದ್ರೆ, ಜಗದೇವಿ ನೂಲಕರ್, ಗುಲಾಬೂರಾಣಿ, ಸುಧಾಮ ಧನ್ನಿ, ಮರೆಪ್ಪ ಹಳ್ಳಿ, ಮಲ್ಲಣ್ಣ ಮಸ್ಕಿ, ಮಲ್ಲಿಕಾರ್ಜುನ ಹಳ್ಳಿ, ಬಸವರಾಜ, ಪಾಂಡುರಂಗ ಮಾವಿನಕರ್, ಸಿದ್ರಾಮ, ಪ್ರಭು ಖಾನಾಪುರೆ, ಡಾ.ಅಶೋಕ, ಸಂಗಯ್ಯ ಎಸ್.ಹಳ್ಳದಮಠ, ಶರಣಬಸಪ್ಪ ಮಮಶೆಟ್ಟಿ ಇದ್ದರು.

ಅಖಿಲ ಭಾರತ ವಿಶ್ವವಿದ್ಯಾಲಯಗಳ ಶಿಕ್ಷಕೇತರ ನೌಕರರ ಒಕ್ಕೂಟ, ಗಾಂಧಿ ವಿಚಾರ ವೇದಿಕೆ, ಜನರಂಗ, ರಂಗ ಗುಡಿಸಲು, ಕಲಬುರಗಿ ಆರ್ಟ್ ಸೆಂಟರ್, ಇಂಡಿಯನ್ ಕಲ್ಚರಲ್ ಸೆಂಟರ್, ಸೂರ್ಯ ನಗರಿ, ಬೀದಿ ನಾಟಕ ತಂಡ, ಸಿಯುಕೆ ಸಂಶೋಧನಾ ವಿದ್ಯಾರ್ಥಿ ಸಂಘಟನೆ ಸೇರಿ ಹಲವು ಸಂಘಟನೆಗಳ ಪ್ರಮುಖರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.



ಸಂಜೀವಿನಿ ನೌಕರರು ಮತ್ತು ಫಲಾನುಭವಿಗಳ ಹಕ್ಕೊತ್ತಾಯಗಳನ್ನು ಈಡೇರಿಸಲು ಒತ್ತಾಯಿಸಿ ಪ್ರತಿಭಟನೆ

ಗ್ರಾಮ ಪಂಚಾಯತ್ ಹಾಗೂ ನಗರ ಮತ್ತು ಪಟ್ಟಣಗಳ ವಾರ್ಡ್ ಮಟ್ಟಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಮಹಿಳಾ ಸಬಲೀಕರಣದ ಸಂಜೀವಿನಿ ಯೋಜನೆ ಜಾರಿಗಾಗಿ ಕಾರ್ಯ ನಿರ್ವಹಿಸುವ ನೌಕರರು ಮತ್ತು ಫಲಾನುಭವಿ ನೌಕರರು ಬೆಳಗಿನಿಂದ ಸಂಜೆಯತನಕ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೆ ಗವ್ರವಧನ ಎಂಬ ಅಲ್ಪಪ್ರಮಾಣದ ವೇತನ ನಿಗದಿಪಡಿಸಿ ಬಿಟ್ಟಿ ಚಾಕರಿ ಮಾಡಿಸಿಕೊಳ್ಳಲಾಗುತ್ತಿದೆ. ನಮಗೆ ಗೌರವಧನದ ಬದಲಾಗಿ ವೇತನ ನಿಗದಿಪಡಿಸಿ, ಸೌಲಭ್ಯಗಳನ್ನು ಒದಗಿಸಬೇಕೆಂದು ಕರ್ನಾಟಕ ರಾಜ್ಯ ಸಂಜೀವಿನಿ ನೌಕರರ ಹಾಗೂ ಫಲಾನುಭವಿಗಳ ಸಂಘ ಫ್ರೀಡಂ ಪಾರ್ಕಿನಲ್ಲಿ ಪ್ರತಿಭಟನೆ ನಡೆಸಿ ಮನವಿಯನ್ನು ಸಲ್ಲಿಸಿ ಒತ್ತಾಯಿಸಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಹಾಗೂ ಕೌಶಲ್ಯ ಅಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆ ಸಚಿವ ಡಾ. ಸಿ.ಎಸ್. ಅಶ್ವತ್ಥ ನಾರಾಯಣ ಅವರುಗಳಿಗೆ ಮನವಿ ಸಲ್ಲಿಸಿರುವ ಕರ್ನಾಟಕ ರಾಜ್ಯ ಸಂಜೀವಿನಿ ನೌಕರರ ಹಾಗೂ ಫಲಾನುಭವಿಗಳ ಸಂಘವು ಸೇವೆಯಲ್ಲಿರುವ ನಮ್ಮಗಳಿಗೆ ಸರಕಾರದಿಂದ ಯಾವುದೇ ವೇತನಗಳಿಲ್ಲದೇ ಗೌರವಧನವೆಂಬ ಅಣಕದ ವೇತನಕ್ಕೆ ದುಡಿಯುವ ದುರ್ಬರ ಪರಿಸ್ಥಿತಿ ನಮ್ಮದಾಗಿದೆ. ನಿರ್ವಹಿಸುತ್ತಿರುವ ಕೆಲಸಗಳೆಲ್ಲವೂ ಬಹುತೇಕ ಬಿಟ್ಟಿ ಚಾಕರಿಯಾಗಿದೆ. ನಾಲ್ಕು ಗೋಡೆಯೊಳಗೆ ದುಡಿಯುವ ಬಿಟ್ಟಿ ಚಾಕರಿಯ ಬಂಧನದಿಂದ ಹೊರಬಂದು ಮುಖ್ಯವಾಹಿನಿಯ ದುಡಿಮೆಯಲ್ಲಿ ತೊಡಗಿಸಿಕೊಂಡರೂ, ಸರಕಾರವೇ ಗೌರವ ವೇತನವೆಂದು ನವನಾಮಕರಣ ಮಾಡಿ ಚಾಕರಿ ಮಾಡಿಸುತ್ತಿದೆ. ಪುರುಷ ಪ್ರಧಾನ ಸಮಾಜದಂತೆಯೇ ಸರಕಾರವು ನಮ್ಮನ್ನು ನಡೆಸಿಕೊಳ್ಳುತ್ತಿರುವುದು ತೀವ್ರ ಖಂಡನೀಯ. ಇದನ್ನು ಈ ಕೂಡಲೇ ತಡೆದು ನಮ್ಮಗಳಿಗೆ ವೇತನವನ್ನು ನಿಗದಿಸುವಂತೆ ಸಂಘವು ಆಗ್ರಹಿಸಿದೆ.

ನಾವು ಮಹಿಳಾ ಸಬಲೀಕರಣದ ಕಾರ್ಯದಲ್ಲಿ ತೊಡಗಿಸಿಕೊಂಡು ಅಹರ್ನಿಸಿ ದುಡಿಯುತ್ತಿದ್ದೇವೆ. ಮುಖ್ಯವಾಗಿ, ಪುಸ್ತಕ ಬರಹಗಾರರು, ಸಂಪನ್ಮೂಲ ವ್ಯಕ್ತಿ ಸಹಾಯಕರು ಮತ್ತು ವಿವಿಧ ಸಖಿ ಕಾರ್ಯಕರ್ತರು, ಸ್ವ ಸಹಾಯ ಸಂಘಗಳ ಪ್ರತಿನಿಧಿಗಳು ಮತ್ತು ಮಹಿಳಾ ಒಕ್ಕೂಟದ ಮುಖ್ಯ ಕಾರ್ಯಕರ್ತರಾಗಿ ದುಡಿಮೆ ಮಾಡುತ್ತಿದ್ದೇವೆ. ಕಳೆದ ಆರು ತಿಂಗಳಿನಿಂದ ಬಾಕಿ ಉಳಿಸಿಕೊಂಡಿರುವ ವೇತನವನ್ನ ತಕ್ಷಣವೇ ಬಿಡುಗಡೆ ಮಾಡಬೇಕು ಮತ್ತು ನಮ್ಮಗಳ ವೇತನವನ್ನು ನೇರವಾಗಿ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕು. ಈಗಾಗಲೇ ಮೂರು ನಾಲ್ಕು ಬಾರಿ ಒಂದು ವಾರ ಕಾಲ ಬೇರೆಬೇರೆ ವಿಷಯಗಳಿಗೆ ಸಂಬಂಧಿಸಿ ನಾವು ಗಣತಿ ಕಾರ್ಯದಲ್ಲಿ ತೊಡಗಿದ್ದು ಯಾವುದೇ ಭತ್ಯೆಯನ್ನು ನೀಡಿರುವುದಿಲ್ಲ. ದಿನ ಭತ್ಯೆ 500 ರೂ. ಗಳಂತೆ ಗಣತಿ ಕಾರ್ಯದ ಎಲ್ಲಾ ದಿನಗಳಿಗೆ ತಕ್ಷಣವೇ ಹಣವನ್ನು ಬಿಡುಗಡೆ ಮಾಡಬೇಕು ಎಂದು ಸರ್ಕಾರಕ್ಕೆ ಸಲ್ಲಿಸಿರುವ ಮನವಿಯಲ್ಲಿ ತಿಳಿಸಲಾಗಿದೆ.

ಲೂಟಿಕೋರ ಕಾರ್ಪೋರೇಟ್ ಕಂಪನಿಗಳ ಪರವಾದ ಆರ್ಥಿಕ ನೀತಿಗಳನ್ನು ಬಲವಾಗಿ ಜಾರಿಗೊಳಿಸುತ್ತಿರುವ ಈ ಸಂದರ್ಭದಲ್ಲಿ, ಕೇಂದ್ರ ಹಾಗೂ ರಾಜ್ಯ ಸರಕಾರಗಳ ಮಹಿಳಾ ಸಬಲೀಕರಣದ ನೀತಿಯೂ ಕೂಡಾ, ಮಹಿಳೆಯರನ್ನ ಸಬಲೀಕರಣಗೊಳಿಸದೇ ಅವರ ಮೇಲೆ ಮತ್ತಷ್ಟು ಹೊರೆ ಹಾಗೂ ದೌರ್ಜನ್ಯಗಳನ್ನು ಹೆಚ್ಚಿಸುತ್ತಿದೆ. ಜನ ಸಂಖ್ಯೆಯ ಅರ್ಧಭಾಗ ಮಹಿಳೆಯರಿದ್ದರೂ ಬಜೆಟ್‌ನಲ್ಲಿ ನ್ಯಾಯವಾಗಿ ಅರ್ಧದಷ್ಟು ಅನುದಾನ ಒದಗಿಸದಿರುವುದು ಮಹಿಳಾ ಸಬಲೀಕರಣದ ಒಟ್ಟು ಸಮಸ್ಯೆಗಳ ಪ್ರಮುಖ ಮೂಲವಾಗಿದೆ ಎಂದು ಕರ್ನಾಟಕ ರಾಜ್ಯ ಸಂಜೀವಿನಿ ನೌಕರರ ಹಾಗೂ ಫಲಾನುಭವಿಗಳ ಸಂಘ ತಿಳಿಸಿದೆ.

ಪ್ರತಿ ಗ್ರಾಮ ಪಂಚಾಯತ್ ಮಟ್ಟದಲ್ಲಿಯೂ ಶೌಚಾಲಯ ಹಾಗೂ ಪೀಠೋಪಕರಣ ಹಾಗೂ ಗಣಕಯಂತ್ರಗಳ ಸಹಿತ ಕಛೇರಿಗಳನ್ನು ರಾಜ್ಯದಾದ್ಯಂತ ಒದಗಿಸಬೇಕು. ತಕ್ಷಣದಿಂದಲೇ ಜಾರಿಗೆ ಬರುವಂತೆ ಪುಸ್ತಕ ಬರಹಗಾರರ ವೇತನ ರೂ.15,000 ಗಳಿಗೆ ಮತ್ತು ಸಂಪನ್ಮೂಲ ಸಹಾಯಕರಿಗೆ ಕನಿಷ್ಠ ರೂ.13,000, ವಿವಿಧ ಸಖಿ ಕಾರ್ಯಕರ್ತರಿಗೆ ರೂ. 8,000 ವೇತನವನ್ನು ಹೆಚ್ಚಿಸಬೇಕು. ಪ್ರಯಾಣ ಹಾಗೂ ದಿನ ಭತ್ಯೆ, ಮೊಬೈಲ್ ಹಾಗೂ ಅವುಗಳಿಗೆ ಅಗತ್ಯವಾದ ಕರೆನ್ಸಿ ಒದಗಿಸಬೇಕು. ಅದೇ ರೀತಿ ಭವಿಷ್ಯ ನಿಧಿ ಯೋಜನೆಯನ್ನು ಹಾಗು ಇಎಸ್‌ಐ ಸೌಲಭ್ಯ ಜಾರಿಗೊಳಿಸಬೇಕು. ಉಚಿತ ವಿಮಾ ಸೌಲಭ್ಯ ಒದಗಿಸಬೇಕು. ಪ್ರತಿಯೊಬ್ಬರಿಗೂ ನಿವೇಶನ ಸಹಿತ ಉಚಿತ ಮನೆಯನ್ನು ಒದಗಿಸಬೇಕು. ಸರಕಾರಿ ನೌಕರಿಗಳಲ್ಲಿ ಆದ್ಯತೆ ಮೇರೆಗೆ ನೌಕರಿ ಒದಗಿಸಬೇಕು ಎಂದು ಸಂಘವು ಆಗ್ರಹಿಸಿದೆ.

ಮಹಿಳಾ ಸಬಲೀಕರಣಕ್ಕಾಗಿ ಪಂಚಾಯತ್ ಹಾಗೂ ವಾರ್ಡ್ ಮಟ್ಟಗಳ ಕಛೇರಿಗಳಲ್ಲಿ ಕಾರ್ಯನಿರ್ವಹಿಸುವ ಪುಸ್ತಕ ಬರಹಗಾರರು ಮತ್ತು ಮಹಿಳೆಯರ ನಡುವೆ ನೇರ ಕಾರ್ಯ ನಿರ್ವಹಿಸುವ ಸಂಪನ್ಮೂಲ ವ್ಯಕ್ತಿ ಸಹಾಯಕರನ್ನು ಸರಕಾರಿ ನೌಕರರೆಂದು ಪರಿಗಣಿಸಿ ವೇತನವನ್ನು ನಿಗದಿಸಬೇಕು. ಅಲ್ಲಿಯವರೆಗೆ ಕನಿಷ್ಠ ವೇತನ ಒದಗಿಸಬೇಕು. ಮಹಿಳಾ ಒಕ್ಕೂಟದ ಹಾಗೂ ಸ್ವ ಸಹಾಯ ಗುಂಪುಗಳ ಪ್ರತಿನಿಧಿಗಳಿಗೆ ಮಾಸಿಕ ಪ್ರೋತ್ಸಾಹ ಧನವನ್ನು ತಲಾ 2,000 ರೂ. ನೀಡಬೇಕು. ಸ್ವ ಸಹಾಯಗುಂಪುಗಳಿಗೆ ಅವಶ್ಯವಿರುವಷ್ಟು ಐದು ವರ್ಷಗಳ ಕಾಲ ಬಡ್ಡಿ ರಹಿತ ಸಾಲ ಒದಗಿಸಬೇಕು ಎಂದು ತಿಳಿಸಲಾಗಿದೆ.

ಕಛೇರಿಗಳಲ್ಲಿ ಶೌಚಾಲಯ ಸೌಲಭ್ಯ ಹಾಗೂ ಅಗತ್ಯ ಪೀಠೋಪಕರಣಗಳು ಮತ್ತು ಗಣಕಯಂತ್ರಗಳನ್ನು ಒದಗಿಸಬೇಕು. ಮಹಿಳೆಯರ ಜನಸಂಖ್ಯೆಗನುಗುಣವಾಗಿ ಬಜೆಟ್ ಅನುದಾನವನ್ನು ಮೀಸಲಿಡಬೇಕು. ಒಂಟಿ ಮಹಿಳೆಯರು, ಗಂಡ ಸತ್ತ ಮಹಿಳೆಯರು, ಪರಿತ್ಯಕ್ತ ಮಹಿಳೆಯರು, ಅಂಗವಿಕಲ ಮಹಿಳೆಯರುಗಳಿಗೆ ಕನಿಷ್ಠ ಮಾಸಿಕ 5,000 ರೂಪಾಯಿಗಳ ನೆರವು ನೀಡಬೇಕು. ಗಂಡ ಸತ್ತ ಹಾಗೂ ಅಂಗವಿಕಲ ಮತ್ತು ದೇವದಾಸಿ ಯುವ ಮಹಿಳೆಯರ ಮರು ಮದುವೆಗೆ ಪ್ರೋತ್ಸಾಹ ಧನವನ್ನು ಒದಗಿಸಬೇಕು ಎಂದು ಆಗ್ರಹಿಸಿದೆ.



ಕಾರ್ಮಿಕರ ಪರವಾದ ರಾಜ್ಯ ಬಜೆಟ್ ಮಂಡನೆಗೆ ಆಗ್ರಹಿಸಿ ಪ್ರತಿಭಟನೆ

ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ಜನವಿರೋಧಿ,ರೈತ ಮತ್ತು ಕಾರ್ಮಿಕ ವಿರೋಧಿ ಬಜೆಟ್ ವಿರುದ್ಧ ಹಾಗೂ ಮುಂಬರುವ ರಾಜ್ಯ ಬಜೆಟ್ ಅನ್ನು ಕಾರ್ಮಿಕರ ಪರವಾಗಿ ಮಂಡಿಸಲು ಆಗ್ರಹಿಸಿ 10 ಫೆಬ್ರವರಿ 2023 ರಂದು ರಾಜ್ಯಾದ್ಯಂತ ಪ್ರತಿಭಟನೆ ನಡೆಸುವ ಸಿಐಟಿಯು ಕರೆಯ ಭಾಗವಾಗಿ ಮಂಗಳೂರು ನಗರದ ಕ್ಲಾಕ್ ಟವರ್ ಬಳಿಯಲ್ಲಿ ಪ್ರತಿಭಟನಾ ಪ್ರದರ್ಶನವನ್ನು ನಡೆಸಲಾಯಿತು.



ಪ್ರತಿಭಟನಾ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದ ಸಿಐಟಿಯು ದ.ಕ. ಜಿಲ್ಲಾಧ್ಯಕ್ಷರಾದ ಜೆ. ಬಾಲಕೃಷ್ಣ ಶೆಟ್ಟಿಯವರು, 'ಬಣ್ಣ ಬಣ್ಣದ ಘೋಷಣೆಗಳ ಮೂಲಕ ದೇಶದ ಜನರನ್ನು ಮರಳುಗೊಳಿಸಿ ಅಧಿಕಾರಕ್ಕೇರಿದ ನರೇಂದ್ರ ಮೋದಿ ಸರಕಾರ, ಇಂದು ಜನಸಾಮಾನ್ಯರ, ರೈತರ ಮತ್ತು ಕಾರ್ಮಿಕರ ಹಿತಾಸಕ್ತಿಗಳನ್ನು ಕಡೆಗಣಿಸಿ ಕಾರ್ಪೊರೇಟ್ ಕಂಪೆನಿಗಳ ಪರವಾಗಿ ದೃಢವಾಗಿ ನಿಂತಿದೆ ಎಂಬುದಕ್ಕೆ ಪ್ರಸಕ್ತ ಬಜೆಟ್ ಸೇರಿದಂತೆ ಸರಕಾರದ ಪ್ರತಿಯೊಂದು ಹೆಜ್ಜೆಯಲ್ಲೂ ಸಾಬೀತಾಗಿದೆ..ದೇಶದ ಪ್ರತಿಯೊಂದು ಸಂಪತ್ತನ್ನು ಅಂಬಾನಿ, ಅದಾನಿಗಳ ಕೈಗೊಪ್ಪಿಸಿದ ನರೇಂದ್ರ ಮೋದಿ ಸರಕಾರ ಲೂಟಿಕೋರ ಸರಕಾರವಾಗಿದೆ. ರಾಜ್ಯದಲ್ಲೂ ಪ್ರಜಾಪ್ರಭುತ್ವ ಆಶಯಗಳಿಗೆ ವಿರುದ್ಧವಾಗಿ ಅಕ್ರಮವಾಗಿ ಅಧಿಕಾರಕ್ಕೇರಿದ ಬಿಜೆಪಿ 40% ಕಮಿಷನ್ ಸರಕಾರವೆಂದು ಸಾಬೀತುಪಡಿಸಿ ರಾಜ್ಯದ ಖಜಾನೆಯನ್ನು ಲೂಟಿಮಾಡುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು ಮಾತನಾಡಿ, 'ಅತ್ಯುತ್ತಮ ಬಜೆಟ್ ಎಂದು ಪುಂಗಿ ಊದಿದ ಕೇಂದ್ರ ಸರಕಾರದ ಬಜೆಟ್‌ನ್ನು ಬಿಡಿಸಿ ನೋಡಿದಾಗ ಅದು ಎಷ್ಟೊಂದು ಜನವಿರೋಧಿಯಾಗಿದೆ ಎಂಬುದು ಗೊತ್ತಾಗುತ್ತದೆ. ಶಿಕ್ಷಣ, ಆರೋಗ್ಯ, ಉದ್ಯೋಗ, ಕೈಗಾರಿಕಾ ಕ್ಷೇತ್ರಗಳಿಗೆ ತೀರಾ ಕಡಿಮೆ ಹಣವನ್ನು ಮೀಸಲಿಟ್ಟು, ಬಂಡವಾಳಶಾಹಿಗಳಿಗೆ ಸಾಕಷ್ಟು ಹಣವನ್ನು ವ್ಯಯಿಸಲು ಮುಂದಾಗಿರುವ ನರೇಂದ್ರ ಮೋದಿ ಸರಕಾರ ಜನತೆಯ ಕೊಂಡುಕೊಳ್ಳುವ ಶಕ್ತಿಯನ್ನು ನಾಶಮಾಡಲು ಹೊರಟಿದೆ. ರಾಜ್ಯ ಬಿಜೆಪಿ ಸರಕಾರ ಮುಂಬರುವ ಬಜೆಟ್ ನಲ್ಲಿ ಕಾರ್ಮಿಕರ ಹಿತಾಸಕ್ತಿಯನ್ನು ಕಡೆಗಣಿಸಿದರೆ ತೀವ್ರ ಪರಿಣಾಮವನ್ನು ಎದುರಿಸಬೇಕಾದೀತು' ಎಂದು ಎಚ್ಚರಿಕೆ ನೀಡಿದರು.

ಸಿಐಟಿಯು ಜಿಲ್ಲಾ ನಾಯಕರಾದ ಸುಕುಮಾರ್ ಹಾಗೂ ಜಿಲ್ಲಾ ರೈತ ನಾಯಕರಾದ ಸದಾಶಿವ ದಾಸ್ ರವರು ಮಾತನಾಡುತ್ತಾ, 'ಬಾಯಿ ಬಿಟ್ಟರೆ ಹಸಿ ಹಸಿ ಸುಳ್ಳುಗಳನ್ನು ಹೇಳುತ್ತಾ ಜನತೆಯನ್ನು ದಾರಿ ತಪ್ಪಿಸುತ್ತಿರುವ ಬಿಜೆಪಿ ಸಂಘಪರಿವಾರ ಸುಳ್ಳುಗಳ ಕಾರ್ಖಾನೆಯಾಗಿದೆ. ಜನರ ಬದುಕಿನ ಪ್ರಶ್ನೆಗಳು ಮುನ್ನೆಲೆಗೆ ಬರದಂತೆ ತಡೆದು ಭಾವನಾತ್ಮಕ ವಿಚಾರಗಳನ್ನೇ ಪ್ರಚಾರಪಡಿಸಿ ಕೋಮು ಧ್ರುವೀಕರಣಗೊಳಿಸಲು ಪ್ರಯತ್ನಿಸುತ್ತಿದೆ' ಎಂದು ಆರೋಪಿದರು.

ಪ್ರತಿಭಟನೆಯ ನೇತೃತ್ವವನ್ನು ಸಿಐಟಿಯು ಜಿಲ್ಲಾ ನಾಯಕರಾದ ಪದ್ಮಾವತಿ ಶೆಟ್ಟಿ, ಸುಂದರ ಕುಂಪಲ, ನೋಣಯ್ಯ ಗೌಡ, ವಸಂತಿ ಕುಪ್ಪೆಪದವು, ರಾಧಾ ಮೂಡಬಿದ್ರೆ, ಗಿರಿಜಾರವರು ವಹಿಸಿದ್ದರು. ಸಿಐಟಿಯು ಜಿಲ್ಲಾ ಮುಖಂಡರಾದ ಜಯಂತ್ ನಾಯ್ಕ್, ವಾರಿಜಾ, ಭವಾನಿ, ಅಶೋಕ್ ಶ್ರೀಯಾನ್, ಭಾರತಿ ಬೋಳಾರ, ಜಯಲಕ್ಷ್ಮಿ, ವಿಲ್ಲಿ ವಿಲ್ಸನ್, ಕೃಷ್ಣಪ್ಪ ಬೆಳುವಾಯಿ, ನಾಗೇಶ್ ಕೋಟ್ಯಾನ್, ಯುವಜನ ಮುಖಂಡರಾದ ಬಿಕೆ ಇಮ್ತಿಯಾಜ್, ಸಂತೋಷ್ ಬಜಾಲ್, ನವೀನ್ ಕೊಂಚಾಡಿ, ವಿದ್ಯಾರ್ಥಿ ನಾಯಕರಾದ ಮಾಧುರಿ ಬೋಳಾರ, ಸಮುದಾಯ ಸಂಘಟನೆಯ ವಾಸುದೇವ ಉಚ್ಚಿಲ್ ಮುಂತಾದವರು ಉಪಸ್ಥಿತರಿದ್ದರು.

ಬಳಿಕ ಸಿಐಟಿಯು ಉನ್ನತ ಮಟ್ಟದ ನಿಯೋಗವೊಂದು ದ.ಕ. ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ವಿವಿಧ ವಿಭಾಗದ ಕಾರ್ಮಿಕರ 30 ಬೇಡಿಕೆಗಳನ್ನು ಒಳಗೊಂಡ ಮನವಿಯನ್ನು ಸಲ್ಲಿಸಲಾಯಿತು.

ನಿವೃತ್ತ ಬಿಸಿಯೂಟ ನೌಕರರಿಗೆ ಇಡಿಗಂಟು ಜಾರಿಗೊಳಿಸಲು ಆಗ್ರಹಿಸಿ ಅನಿರ್ದಿಷ್ಟಾವಧಿ ಧರಣಿ



ಶಾಲಾ ಮಕ್ಕಳಿಗೆ ಮಧ್ಯಾಹ್ನದ ಹೊತ್ತು ಬಿಸಿಯೂಟ ತಯಾರಿಸುವ ಮಹಿಳಾ ನೌಕರರು ಲಕ್ಷಾಂತರ ಸಂಖ್ಯೆಯಲ್ಲಿ ರಾಜ್ಯದಲ್ಲಿದ್ದಾರೆ. ಸದ್ಯ ಈ ಯೋಜನೆಯಲ್ಲಿ ದುಡಿಯುತ್ತಿದ್ದ ಸುಮಾರು 6,500ಕ್ಕೂ ಹೆಚ್ಚಿನ ನೌಕರರನ್ನು 60 ವರ್ಷ ವಯಸ್ಸಾಗಿದೆ ಎಂದು ಯಾವ ಪರಿಹಾರವನ್ನು ವಿತರಣೆ ಮಾಡದೇ ವಜಾಗೊಳಿಸಿರುವ ಕ್ರಮದ ವಿರುದ್ಧ ಅನಿರ್ದಿಷ್ಟಾವಧಿ ಧರಣಿ ಆರಂಭವಾಗಿದೆ.

ಸಿಐಟಿಯು ಸಂಯೋಜಿತ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ಕಾರ್ಯಕರ್ತರು ಇಂದಿನಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಧರಣಿಯಲ್ಲಿ ಕುಳಿತಿದ್ದಾರೆ.

ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಮಾಲಿನಿ ಮೆಸ್ತಾ ಮಾತನಾಡಿ, ಸರ್ಕಾರಿ ಯೋಜನೆಯ ಜಾರಿಯ ಭಾಗವಾಗಿ ಕೆಲಸಗಾರರನ್ನಾಗಿ ನೇಮಕ ಮಾಡಿಕೊಂಡರು. ಇಷ್ಟು ವರ್ಷಗಳ ಕಾಲ ದುಡಿಮೆ ಮಾಡಿಕೊಂಡು ಬಂದ ನೌಕರರಿಗೆ 60 ವರ್ಷ ವಯಸ್ಸಾಗಿದೆ ಎಂದು ಏಕಾಏಕಿಯಾಗಿ ಸೇವೆಯಿಂದ ಕಿತ್ತು ಹಾಕಿರುವ ರಾಜ್ಯ ಸರ್ಕಾರದ ನಡೆ ಅಮಾನವೀಯವಾದದ್ದು. ನಿವೃತ್ತಗೊಂಡ ಎಲ್ಲಾ ನೌಕರರಿಗೆ ರಾಜ್ಯ ಸರ್ಕಾರ ಕನಿಷ್ಠ 1 ಲಕ್ಷ ರೂಪಾಯಿಗಳ ಇಡಿಗಂಟು(ಪರಿಹಾರ) ಜಾರಿಗೆ ತರಬೇಕೆಂದು ಆಗ್ರಹಿಸಿದರು.

ಕೇಂದ್ರೀಕೃತ ಅಡುಗೆ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರ ಮುಂದಾಗಿದೆ. ಇದು ಶೈಕ್ಷಣಿಕ ದೃಷ್ಟಿಯಿಂದ ಸರಿಯಾದ ಕ್ರಮವಲ್ಲ. ಈ ಯೋಜನೆಯಲ್ಲಿ ಯಾವುದೇ ಖಾಸಗಿ ಸಂಸ್ಥೆಗಳಿಗೆ ಜವಾಬ್ದಾರಿ ಕೊಡಬಾರದು. ನಮ್ಮ ರಾಜ್ಯ ಶಿಕ್ಷಣ ಇಲಾಖೆಯ ಶಿಫಾರಸಿನಂತೆ ರೂ.6000 ಮತ್ತು ರೂ.5000 ಹೆಚ್ಚಳ ಮಾಡಬೇಕು. ಬೇಸಿಗೆ ಮತ್ತು ದಸರಾ ರಜೆಗಳನ್ನು ವೇತನ ಸಹಿತ ಪರಿಗಣಿಸಿ ವಿತರಿಸಬೇಕೆಂದು ಹೇಳಿದರು.

ಅಕ್ಷರ ದಾಸೋಹ ಯೋಜನೆ 2001–2002ರ ಸಾಲಿನಿಂದ ಜಾರಿಯಲ್ಲಿದೆ. ಯೋಜನೆಗೆ ಜಾರಿಗಾಗಿ ಯಾವ ಷರತ್ತುಗಳನ್ನು ವಿಧಿಸದೆ ಸುಮಾರು 1 ಲಕ್ಷ 19 ಸಾವಿರ ನೌಕರರು ನೇಮಕ ಮಾಡಿಕೊಳ್ಳಲಾಯಿತು. ಈಗಾಗಲೇ ಯಾವ ಸೌಲಭ್ಯ ವಿತರಣೆ ಮಾಡದೇ, 60 ವರ್ಷ ಮೇಲ್ಪಟ್ಟವರನ್ನು ನಿವೃತ್ತಗೊಳಿಸುತ್ತಾ ಹೋದರೆ, ಬಿಸಿಯೂಟ ನೌಕರರ ಭವಿಷ್ಯ ಅತಂತ್ರವಾಗಲಿದೆ.

2022ರ ಮಾರ್ಚ್ 31ರಂದು ಬಿಸಿಯೂಟ ನೌಕರರನ್ನು ಬಿಡುಗಡೆಗೊಳಿಸಲು ಹೊರಡಿಸಿರುವ ಸುತ್ತೋಲೆ ಬದಲಾಯಿಸಿ 2022 ಏಪ್ರಿಲ್ 10ಕ್ಕೆ ಮರು ಆದೇಶವಾಗಬೇಕು. ಬಿಸಿಯೂಟ ಯೋಜನೆಯನ್ನು ಖಾಯಂ ಮಾಡಬೇಕು. ಖಾಯಂ ಮಾಡುವವರೆಗೂ 45 ಮತ್ತು 46ನೇ ಭಾರತೀಯ ಕಾರ್ಮಿಕ ಸಮ್ಮೇಳನದ ಶಿಫಾರಸಿನಂತೆ ಇವರನ್ನು ಕಾರ್ಮಿಕರೆಂದು ಪರಿಗಣಿಸಬೇಕು ಎಂದು ಒತ್ತಾಯಿಸಿದರು.

6 ಸಾವಿರ ಮಂದಿ ಮಹಿಳಾ ನೌಕರರನ್ನು ಕೆಲಸದಿಂದ ತೆಗೆದಿರುವ ಕ್ರಮವನ್ನು ಖಂಡಿಸಿ, 3–4 ಹಂತದಲ್ಲಿ ಹೋರಾಟವನ್ನು ಸಂಘಟಿಸಿ ಸರ್ಕಾರವನ್ನು ಎಚ್ಚರಿಸಲಾಗಿತ್ತು. ಸಂಬಂಧಪಟ್ಟ ಇಲಾಖೆಯ ಸಚಿವರು ಹಾಗೂ ಅಧಿಕಾರಿಗಳೊಂದಿಗೆ ಸಭೆಯನ್ನು ನಡೆಸಲಾಯಿತು. ಆದರೂ, ಇದರ ಬಗ್ಗೆ ಗಮನ ಹರಿಸಿಲ್ಲ. ನಮ್ಮ ಬೇಡಿಗಳು ಪರಿಗಣಿಸದೆ ಇದ್ದಲ್ಲಿ ನೌಕರರು ಇಲ್ಲಿಂದ ವಾಪಸ್ಸು ಹೋಗುವುದಿಲ್ಲ ಎಂದು ಮಾಲಿನಿ ಮೆಸ್ತಾ ತಿಳಿಸಿದರು.

ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ರಾಜ್ಯ ಅಧ್ಯಕ್ಷೆ ಲಕ್ಷ್ಮಿದೇವಿ ಮಾತನಾಡಿ ಇಲಾಖೆಯ ಅಧಿಕಾರಿಗಳು ಹಾಗೂ ಸಚಿವರ ಮಟ್ಟದಲ್ಲಿ ಜಂಟಿ ಸಭೆ ನಡೆದಿದೆ. ಆ ವೇಳೆ ಇಡಿಗಂಟು ಕೊಡಬೇಕೆಂದು 2022ರ ಅಕ್ಟೋಬರ್ 27ರಂದು ಶಿಫಾರಸ್ಸು ಮಾಡಲಾಗಿದೆ. ಇಲಾಖೆಯ ಸುತ್ತೋಲೆ ಇದನ್ನು ತಿರಸ್ಕರಿಸಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೂ ಈ ವಿಚಾರ ತಿಳಿಸಿದೆ. ಆದರೂ ಸಹ ಶಿಫಾರಸ್ಸುಗಳನ್ನು ತಿರಸ್ಕರಿಸಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

ಕಳೆದ ವರ್ಷ ನಡೆದ ಹೋರಾಟದ ಬಳಿಕೆ ಎಚ್ಚೆತ್ತುಕೊಂಡ ಬಿಜೆಪಿ ಸರ್ಕಾರ ಕಳೆದ ಬಾರಿಯ ಬಜೆಟ್ ನಲ್ಲಿ ಹೇಳಿದ 1000 ರೂ ಜಾರಿಗೆ, ಶಿಕ್ಷಣ ಇಲಾಖೆ ಕೂಡಲೇ 5000–6000 ರೂ. ಮಂಜೂರು ಮಾಡುವಲ್ಲಿ ಸರ್ಕಾರ ವಿಫಲವಾಗಿದೆ. ಸಾದಿಲ್ವಾರು ಜಂಟಿಖಾತೆ ಜವಾಬ್ದಾರಿ ಎಸ್ ಡಿ ಎಂ ಸಿ ಗೆ ವಹಿಸಿರುವುದನ್ನು ವಿರೋಧಿಸಿ ಮೊದಲಿನಂತೆ ಮುಖ್ಯ ಅಡುಗೆ ಯವರಿಗೆ ಜವಾಬ್ದಾರಿ ನೀಡಬೇಕೆಂದು ಆಗ್ರಹಿಸಿದರು.

ಸಿಐಟಿಯು ರಾಜ್ಯ ಅಧ್ಯಕ್ಷೆ ಎಸ್. ವರಲಕ್ಷ್ಮಿ ಮಾತನಾಡಿ, ಅಕ್ಷರ ದಾಸೋಹ ನೌಕರರಿಗೆ ಘನತೆಯ ಬದುಕಿನ ಹಕ್ಕನ್ನು ಕಲ್ಪಿಸಿಕೊಳ್ಳಲು ರೂ. 1 ಲಕ್ಷ ಮೊತ್ತದ ಇಡಿಗಂಟು ಕೊಡಬೇಕು. ಡಿಸೆಂಬರ್ ನಲ್ಲಿ ಬೆಳಗಾವಿ ನಡೆದ ಚಳಿಗಾಲದ ವಿಧಾನಮಂಡಲ ಅಧಿವೇಶನದ ವೇಳೆ ಧರಣಿ ನಡೆಸಲಾಯಿತು. ಅಂದು ಇಲಾಖೆಯ ಪ್ರಧಾನ ಕಾರ್ಯದರ್ಶಿ ಮಧ್ಯಪ್ರವೇಶಿಸಿ ಸಚಿವರು ಮತ್ತು ಅಧಿಕಾರಿಗಳು, ಸಂಘಟನೆಯ ಮುಖಂಡರ ಮಧ್ಯೆ ಜಂಟಿ ಸಭೆಯನ್ನು ಏರ್ಪಿಸಲಾಗುವುದು, 2023ರ ಜನವರಿ 05ರಂದು ದಿನಾಂಕವನ್ನು ನಿಗದಿಪಡಿಸಲಾಯಿತು. ಆದರೂ ಸಭೆಯೂ ನಡೆಯಲಿಲ್ಲ ಮತ್ತು ನೌಕರರ ಸಮಸ್ಯೆಯೂ ಬಗೆಹರಿಯಲಿಲ್ಲ. ಹಾಗಾಯೇ ಸರ್ಕಾರಕ್ಕೆ ತಿಳಿಸಲು ಇಂದು ಹೋರಾಟಕ್ಕೆ ಮುಂದಾಗಿದ್ದೇವೆ ಎಂದರು.

ಶಾಲೆಗಳಲ್ಲಿ ಗ್ರೂಪ್ "ಡಿ" ನೌಕರರು ಇಲ್ಲದಿರುವುದರಿಂದ ಅಕ್ಷರ ದಾಸೋಹ ನೌಕರರಿಂದಲೇ ಶಾಲಾ ಸ್ವಚ್ಛತೆ, ಕೈತೋಟ ನಿರ್ವಹಣೆ, ಶಾಲಾ ಸಮಯದಲ್ಲಿ ಗಂಟೆ ಬಾರಿಸುವುದು ಇನ್ನಿತರ ಕೆಲಸಗಳನ್ನು ನಿರ್ವಹಿಸುವಂತೆ ಶಾಲಾ ಸಿಬ್ಬಂದಿಗಳೆಂದು ನೇಮಿಸಿ ಆದೇಶಿಸಬೇಕು. ಬಿಸಿಯೂಟ ನೌಕರರನ್ನು ನೇರವಾಗಿ ಇಲಾಖೆಯ ಅಡಿಯಲ್ಲಿಯೇ ಮೇಲ್ವಿಚಾರಣೆ ನಡೆಸಬೇಕು. ಪ್ರತಿ ಶಾಲೆಯಲ್ಲಿ ಇಬ್ಬರು ಅಡುಗೆ ಸಿಬ್ಬಂದಿಗಳು ಇರುವಂತೆ ನೇಮಿಸಿಕೊಳ್ಳಬೇಕು. ಬಿಸಿಯೂಟ ಯೋಜನೆಯನ್ನು ಯಾವುದೇ ಖಾಸಗಿ ಸಂಸ್ಥೆಗಳಿಗೆ ಯಾವುದೇ ಸ್ವರೂಪದ ಜವಾಬ್ದಾರಿ ಕೊಡಬಾರದೆಂದು ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ಆಗ್ರಹವಾಗಿದೆ.

ಬಿಸಿಯೂಟ ಯೋಜನೆಯನ್ನು ಖಾಯಂ ಮಾಡಬೇಕು. ಖಾಯಂ ಮಾಡುವ ತನಕ 45 ಮತ್ತು 46ನೇ ಭಾರತೀಯ ಕಾರ್ಮಿಕ ಸಮ್ಮೇಳನದ ಶಿಫಾರಸ್ಸಿನಂತೆ ಅಕ್ಷರ ದಾಸೋಹ ಮಹಿಳೆಯರನ್ನು ಕಾರ್ಮಿಕರೆಂದು ಗುರುತಿಸಬೇಕು. ಶಾಲಾ ಅವಧಿಯ ನಂತರ ನರೇಗಾ ಯೋಜನೆ ಅಡಿ ಶಾಲಾ ಕೈತೋಟದ ಕೆಲಸ ಇವರಿಗೆ ನೀಡಿ ಈ ಯೋಜನೆಯಿಂದ ವೇತನ ನೀಡಬೇಕು.

ಸಿಐಟಿಯು ರಾಜ್ಯ ಪದಾಧಿಕಾರಿ ಹಾಗೂ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘದ ರಾಜ್ಯ ಅಧ್ಯಕ್ಷ ಎಂ.ಬಿ. ನಾಡಗೌಡ ಮಾತನಾಡಿ, ನಮ್ಮ ಸಂಘಟನೆಯ ಅಕ್ಷರ ದಾಸೋಹ ನೌಕರರ ಹೋರಾಟಕ್ಕೆ ಬೆಂಬಲ ನೀಡಲಿದೆ. ನಿಮ್ಮ ನ್ಯಾಯಯುತ ಬೇಡಿಕೆಗಳನ್ನು ಸರ್ಕಾರ ಪರಿಗಣಿಸಲೇಬೇಕು ಮತ್ತು ನೌಕರರ ಜೀವನವನ್ನು ಉತ್ತಮಗೊಳಿಸಿಕೊಳ್ಳಲು ಸರ್ಕಾರ ಆದ್ಯತೆ ನೀಡಬೇಕು. ನೌಕರರಿಗೆ ಭವಿಷ್ಯ ನಿಧಿ ನೀಡುವಲ್ಲಿ ಸರ್ಕಾರ ಕಾಳಜಿ ವಹಿಸುವುದಿಲ್ಲ. ಆದರೆ, ಶಾಸಕರು, ಮಂತ್ರಿಗಳು, ಜನಪ್ರತಿನಿಧಿಗಳು ತಮ್ಮ ಸಂಬಳ, ಭತ್ಯೆ, ಪ್ರಯಾಣ ವೆಚ್ಚ ಇತ್ಯಾದಿ ಸೌಲಭ್ಯಗಳನ್ನು ಹೆಚ್ಚಿಸಿಕೊಳ್ಳುತ್ತದೆ. ನೌಕರರಿಗೆ ನೀಡಲು ಮಾತ್ರ ಹಣವಿಲ್ಲ ಎನ್ನುವುದು ಅವರಿಗೆ ನಾಚಿಕೆಯಾಗಬೇಕೆಂದು ಹೇಳಿದರು.

ಸಿಐಟಿಯು ರಾಜ್ಯ ಪದಾಧಿಕಾರಿ ಹಾಗೂ ಅಂಗನವಾಡಿ ನೌಕರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಸುನಂದ ಹೆಚ್.ಎಸ್. ಮಾತನಾಡಿ, ಅಕ್ಷರ ದಾಸೋಹ ನೌಕರರ ಹೋರಾಟ ನ್ಯಾಯಯುತವಾಗಿದೆ. ಅಂಗನವಾಡಿ ನೌಕರರ ಬಲಿಷ್ಠ ಹೋರಾಟದಿಂದ ಒಂದಷ್ಟು ಉತ್ತಮ ಸೌಲಭ್ಯಗಳನ್ನು ಜಾರಿಮಾಡಿಕೊಳ್ಳಲು ಸಾಧ್ಯವಾಗಿದೆ. ಅದೇ ರೀತಿ ಅಕ್ಷರ ದಾಸೋಹ ನೌಕರರು ಸಹ ಹೋರಾಟಕ್ಕೆ ಮುಂದಾಗಿದ್ದಾರೆ. ಈಗಾಗಲೇ ಹಲವು ಬಾರಿ ಹೋರಾಟ ಮಾಡಿ ಸರ್ಕಾರಕ್ಕೆ ಮನವಿ ಸಲ್ಲಿಸಿ ಭರವಸೆ ಪಡೆದಿದ್ದಾರ ವಿನಃ ಬೇಡಿಕೆಗಳು ಮಾತ್ರ ಈಡೇರಿಲ್ಲ. ಈಗಲೂ ನೌಕರರು ತುಂಬಾ ತಾಳ್ಮೆಯಿಂದ ಧರಣಿಯಲ್ಲಿ ಭಾಗಿಯಾಗಿದ್ದಾರೆ. ಕೂಡಲೇ ಸರ್ಕಾರ ನೌಕರರ ಬೇಡಿಕೆಗಳನ್ನು ಪರಿಗಣಿಸಬೇಕು. ಇಲ್ಲವಾದಲ್ಲಿ ವಿಧಾನಸೌಧಕ್ಕೆ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಸಿದರು.

ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ರಾಜ್ಯ ಖಜಾಂಚಿ ಮಹಾದೇವಮ್ಮ, ಸಿಐಟಿಯು ರಾಜ್ಯ ಮುಖಂಡರಾದ ಯಮುನಾ ಗಾಂವ್ಕರ್, ಆರ್ ಎಸ್ ಬಸವರಾಜು, ಜಿ. ರಾಮಕೃಷ್ಣ, ವಸಂತ ಆಚಾರಿ ಮತ್ತಿತರ ಮುಖಂಡರು ಮಾತನಾಡಿದರು.





ಮದ್ರಾಸ್ ಹೈಕೋರ್ಟ್ ನ್ಯಾಯಮೂರ್ತಿಯಾಗಿ ವಿಕ್ಟೋರಿಯಾ ಗೌರಿ ನೇಮಕ: ಹೆಚ್ಚು ಗೊಂದಲದ ನಡೆಗಳು;

ವಿಕ್ಟೋರಿಯಾ ಗೌರಿಯವರ ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧದ 'ದ್ವೇಷ ಭಾಷಣ'ಗಳಿಗೆ ಸಂಬಂಧಿಸಿದ ರಿಟ್ ಅರ್ಜಿಗಳನ್ನು ವಜಾಗೊಳಿಸಿದ ಸುಪ್ರೀಂ ಕೋರ್ಟ್, ಗೌರಿಯವರನ್ನು ಮದ್ರಾಸ್ ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕ ಮಾಡಿರುವುದು ಅತ್ಯಂತ ಗೊಂದಲದ ಸಂಗತಿಯಾಗಿದೆ.

ವಕೀಲರಾಗಿದ್ದ ಲಕ್ಷ್ಮಣ ಚಂದ್ರ ವಿಕ್ಟೋರಿಯಾ ಗೌರಿ ಅವರನ್ನು ಮದ್ರಾಸ್ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಾಧೀಶರನ್ನಾಗಿ ನೇಮಕ ಮಾಡಲು ಸುಪ್ರೀಂ ಕೋರ್ಟ್ ಕೊಲಿಜಿಯಂನ ನಿರ್ಧಾರ ಮತ್ತು ರಾಷ್ಟ್ರಪತಿಯವರಿಗೆ ಶಿಫಾರಸು ಮಾಡಿದ್ದು, ರಾಷ್ಟ್ರಪತಿಯವರಿಂದ ನೇಮಕ ಇವೆಲ್ಲವೂ, ಗೌರಿ ಅವರ ಸಾರ್ವಜನಿಕ ಹೇಳಿಕೆಗಳು ಮತ್ತು ಅವರ 'ದ್ವೇಷದ ಮಾತು'ಗಳ ಪೂರ್ವಾಪರಗಳನ್ನು ಪರಿಗಣಿಸಿದರೆ ಅತ್ಯಂತ ಗೊಂದಲದ ಸಂಗತಿಯಾಗಿದೆ.

ಗೌರಿಯವರ ಟ್ವಿಟರ್ ಖಾತೆಯಲ್ಲಿನ ಬಯೋಡೆಟಾ ಪ್ರಕಾರ, ಅವರು ಬಿಜೆಪಿ ಮಹಿಳಾ ಮೋರ್ಚಾದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಪ್ರತಿಯೊಬ್ಬರೂ ಯಾವುದೇ ರಾಜಕೀಯ ಪಕ್ಷದ ಸದಸ್ಯರಾಗಿ ಅಥವಾ ಬೇರೆ ರೀತಿಯಲ್ಲಿ ರಾಜಕೀಯ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಹಕ್ಕನ್ನು ಹೊಂದಿದ್ದಾರೆ. ಆದರೆ, ಸಂವಿಧಾನದ ಮೂಲ ಮೌಲ್ಯಗಳ ವಿರುದ್ಧ ಸಾರ್ವಜನಿಕ ಹೇಳಿಕೆಗಳನ್ನು ನೀಡುವ ಮತ್ತು ದ್ವೇಷ ಭಾಷಣದಂಥ ಘೋರ ಅಪರಾಧವನ್ನು ಮಾಡುವ ವ್ಯಕ್ತಿಗಳನ್ನು ನ್ಯಾಯಾಧೀಶರ ಸ್ಥಾನಕ್ಕೆ ಮಾಡುವ ಶಿಫಾರಸಿಗೆ ಇದು ಸಮರ್ಥನೆಯಾಗುವಿದಿಲ್ಲ. ವಿಶೇಷವಾಗಿ 'ದ್ವೇಷ ಭಾಷಣ'ಗಳು ಮತ್ತು ಇದರ ವಿರುದ್ಧ ಪೋಲೀಸರು ಮತ್ತು ಕಾರ್ಯಾಂಗದ ನಿಷ್ಕ್ರಿಯತೆಯ ಕುರಿತು ಸುಪ್ರೀಂ ಕೋರ್ಟ್ ಗಂಭೀರವಾದ ಅವಲೋಕನವನ್ನು ಮಾಡುತ್ತಿರುವ ಈ ಸಮಯದಲ್ಲಿ ಈ ನೇಮಕ ಖಂಡಿತವಾಗಿಯೂ ಸಮರ್ಥನೀಯವಲ್ಲ.

ಮದ್ರಾಸ್ ಹೈಕೋರ್ಟ್‌ನ ವಕೀಲರು, ಸುಪ್ರೀಂ ಕೋರ್ಟ್ ಕೊಲಿಜಿಯಂ ಮತ್ತು ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿ, ಕೊಲಿಜಿಯಂ ಮಾಡಿರುವ ಶಿಫಾರಸನ್ನು ಹಿಂಪಡೆಯಬೇಕು ಮತ್ತು ರಾಷ್ಟ್ರಪತಿಗಳು ಆ ಕಡತವನ್ನು ಹಿಂದಿರುಗಿಸಬೇಕು ಎಂದು ಒತ್ತಾಯಿಸಿದರು. ಗೌರಿ ಅವರು ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರ ವಿರುದ್ಧ ಮಾಡಿದ 'ದ್ವೇಷ ಭಾಷಣಗಳನ್ನು' ಮನವಿ ಪತ್ರದಲ್ಲಿ ಉಲ್ಲೇಖ ಮಾಡಿದ್ದಾರೆ. ಗೌರಿ ಅವರನ್ನು ಹೈಕೋರ್ಟ್ ನ್ಯಾಯಮೂರ್ತಿಯನ್ನಾಗಿ ನೇಮಕ ಮಾಡದಂತೆ ತಡೆಯಬೇಕು ಎಂದು ಈ ವಕೀಲರು ಸುಪ್ರೀಂ ಕೋರ್ಟ್‌ಗೆ ಮೊರೆ ಹೋಗಿದ್ದಾರೆ.

ವಿಕ್ಟೋರಿಯಾ ಗೌರಿ ಅವರು ಮಾಡಿದ 'ದ್ವೇಷ ಭಾಷಣಗಳು 'ಗುಪ್ತಚರ ಇಲಾಖೆ (ಐಬಿ) ಯಿಂದ ಮಾಹಿತಿ ಹೊದಗಿಸಲಾಗಿದೆಯೇ ಅಥವಾ ಶಿಫಾರಸು ಮಾಡುವಾಗ ಕೊಲಿಜಿಯಂಗೆ ಇದು ತಿಳಿದಿದೆಯೇ ಎಂಬುದು ಹೆಚ್ಚು ಸ್ಪಷ್ಟವಾಗಿಲ್ಲದಿದ್ದರೂ, ಸರ್ಕಾರವು ರಾಷ್ಟ್ರಪತಿಗಳಿಂದ ನೇಮಕದ ಆದೇಶವನ್ನು ಜಾರಿಗೊಳಿಸಲು ಆತುರದ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವುದರಿಂದ ಸುಪ್ರೀಂ ಕೋರ್ಟ್ ಅರ್ಜಿಯನ್ನು ತುರ್ತು ವಿಚಾರಣೆಗೆ ತೆಗೆದುಕೊಳ್ಳಬೇಕು ಎಂದು ಹಿರಿಯ ವಕೀಲರಾದ ರಾಜು ರಾಮಚಂದ್ರನ್ ರವರಿಂದ ಸಲ್ಲಿಕೆಯಾದ ರಿಟ್ ಅರ್ಜಿಯಲ್ಲಿ ಪ್ರಸ್ತಾಪಿಸಲಾಗಿತ್ತು (ಅಷ್ಟರಲ್ಲಿ ರಾಷ್ಟ್ರಪತಿಗಳ ಆದೇಶವನ್ನು ಪ್ರಕಟಿಸಲಾಯಿತು).

'ವಕೀಲರು ನೀಡಿದ ತಡವಾಗಿ ಬಂದ ಮಾಹಿತಿಗಳ ಆಧಾರದ ಮೇಲೆ ದೂರನ್ನು ಕೊಲಿಜಿಯಂ ಗಮನಕ್ಕೆ ತೆಗೆದುಕೊಂಡಿದೆ' ಎಂದು ಮುಕ್ತ ನ್ಯಾಯಾಲಯದಲ್ಲಿ ಸಿಜೆಐ ನ್ಯಾಯಮೂರ್ತಿ ಡಿ ವೈ ಚಂದ್ರಚೂಡ್ ಹೇಳಿದ್ದಾರೆ. ಗುಪ್ತಚರ ಇಲಾಖೆಯು ಈ 'ದ್ವೇಷ ಭಾಷಣ'ಗಳ ವಿಷಯವನ್ನು ಕೊಲಿಜಿಯಂನಿಂದ ದೂರವಿಟ್ಟಿರುವ ಸೂಚನೆ ಇದಾಗಿದೆ. ಆದ್ದರಿಂದ ಕೊಲಿಜಿಯಂನ ಸಮಾಲೋಚನೆಯು ದುರ್ಬಲಗೊಂಡಿತು ಮತ್ತು ಯಾವುದೇ ಪರಿಣಾಮಕಾರಿ ಸಮಾಲೋಚನೆ ಇರಲಿಲ್ಲ.

ಈಗ ರಿಟ್ ಅರ್ಜಿಯನ್ನು ಸುಪ್ರೀಂ ಕೋರ್ಟ್ (ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಬಿ ಆರ್ ಗವಾಯಿ ಅವರ ಪೀಠ) ವಜಾಗೊಳಿಸಿದೆ. ಸಂಬಂಧಿತ ದ್ವೇಷ ಭಾಷಣದ ಮಾಹಿತಿಗಳು ಶಿಫಾರಸು ಮಾಡಿದ ಕೊಲಿಜಿಯಂಗೆ ತಿಳಿದಿಲ್ಲ ಎಂದು ಭಾವಿಸಲು ಯಾವುದೇ ಕಾರಣವಿಲ್ಲ. ಇದು ಹೆಚ್ಚು ಗೊಂದಲದ ಸಂಗತಿಯಾಗಿದೆ ಮತ್ತು ಇಲ್ಲಿ ಪಾರದರ್ಶಕತೆಯ ಕೊರತೆ ಕಾಣಿಸುತ್ತದೆ. ಮೇಲಾಗಿ ಇದು ಸರ್ಕಾರ ಮತ್ತು ಗುಪ್ತಚರ ಇಲಾಖೆಯ ವರದಿಯನ್ನು ಸೂಕ್ತತೆಗೆ ಸಂಬಂಧಿಸಿದಂತೆ ಸಂಪೂರ್ಣವಾಗಿ ಅವಲಂಬಿಸುವ ದುರ್ಬಲತೆಯ ಸ್ಪಷ್ಟವಾದ ವಿವರಣೆಯಾಗಿದೆ. ರಿಟ್ ಅರ್ಜಿಯನ್ನು ವಜಾಗೊಳಿಸುವಾಗ ಪೀಠದ ಪರಿಗಣನೆಗೆ ಕಾರಣಗಳೊಂದಿಗೆ ತೀರ್ಪು ಬರದಿದ್ದರೂ ಈಗ ಇದು ಸಾರ್ವಜನಿಕ ಚರ್ಚೆಯ ವಿಷಯವಾಗಿದೆ.

ವಿಶೇಷ ಪರಿಸ್ಥಿತಿಗೆ ವಿಶೇಷವಾದ ಪರಿಹಾರದ ಅಗತ್ಯವಿದೆ. ನ್ಯಾಯಾಂಗದ ಸ್ವಾತಂತ್ರ್ಯ ಮತ್ತು ಅದರಲ್ಲಿರುವ ಜನರ ನಂಬಿಕೆಯನ್ನು ಹಾಳುಮಾಡುವ ಇಂತಹ ಅಸಾದಾರಣ ಸಮಸ್ಯೆಗಳನ್ನು ಪರಿಹರಿಸಲು ಸಾಧನಗಳನ್ನು ಹುಡುಕುವುದು ನ್ಯಾಯಾಧೀಶರು, ವಕೀಲರು ಮತ್ತು ನ್ಯಾಯಾಂಗದ ಎಲ್ಲಾ ಮಧ್ಯಸ್ಥಗಾರರ ಸಾಮೂಹಿಕ ಕರ್ತವ್ಯ.. ಇಲ್ಲದಿದ್ದರೆ ಅದು ನ್ಯಾಯಾಂಗದ ಸ್ವಾತಂತ್ರ್ಯದೊಂದಿಗೆ ಮಧ್ಯಪ್ರವೇಶಿಸುವ ಪ್ರಯತ್ನವನ್ನು ತೀವ್ರಗೊಳಿಸಲು ಮತ್ತು ಅದನ್ನು 'ಬದ್ಧ ನ್ಯಾಯಾಂಗ'ವನ್ನಾಗಿ ಮಾಡಲು ಕಾರ್ಯಾಂಗಕ್ಕೆ ಧೈರ್ಯ ತುಂಬುತ್ತದೆ.

ಸೂಕ್ತತೆ (ನ್ಯಾಯಾಧೀಶರಾಗಲು ಇರಬೇಕಾದ ಅರ್ಹತೆ ಅಥವಾ ಸೂಕ್ತ ಗುಣಗಳು) ಮತ್ತು ಗುಪ್ತಚರ ಇಲಾಖೆಯ ವರದಿಗಳ ವಿಷಯದಲ್ಲಿ ಕಾರ್ಯಾಂಗ ತಮ್ಮ ಕಾರ್ಯಸೂಚಿಗೆ ಸರಿಹೊಂದುವಂತಹ ಆಯ್ಕೆಗಳೊಂದಿಗೆ ವ್ಯವಹರಿಸುತ್ತಿದೆ. ಸುಪ್ರೀಂ ಕೋರ್ಟ್ ನ ಕೊಲಿಜಿಯಂ ಸರ್ಕಾರಕ್ಕೆ ಮಾಡಿದ ಶಿಫಾರಸುಗಳ ಪಟ್ಟಿ ಸರ್ಕಾರದ ಮುಂದೆ ತುಂಬಾ ದೀರ್ಘಕಾಲದಿಂದ ಬಾಕಿ ಉಳಿದಿದೆ. ಕಾರ್ಯಾಂಗವು ಗುಪ್ತಚರ ಇಲಾಖೆಯ ವರದಿಯಲ್ಲಿನ ಕೆಲವು ಹಾನಿಕರವಲ್ಲದ ಅವಲೋಕನಗಳನ್ನು ಕೊಲಿಜಿಯಂ ಶಿಫಾರಸನ್ನು ಅವಮಾನಿಸಲು ಮತ್ತು/ಅಥವಾ ಕೊಲಿಜಿಯಂ ಮತ್ತೆ ಮತ್ತೆ ಮಾಡುವ ಶಿಫಾರಸುಗಳ ಹೊರತಾಗಿಯೂ ಅವುಗಳನ್ನು ಮುಂದೂಡಲು ಉಪಯೋಗಿಸಿಕೊಳ್ಳುತ್ತಿದೆ. ಆದರೆ, ಇತರ ಕೆಲವು ಪ್ರಕರಣಗಳಲ್ಲಿ, ಇಂದಿನ ಪ್ರಕರಣದಲ್ಲಿರುವಂತೆ ನೇಮಕಾತಿಯ ವಿಷಯದಲ್ಲಿ ಸೂಕ್ತತೆ/ ಗುಪ್ತಚರ ಇಲಾಖೆಯ ವರದಿಯ ಕುರಿತು ವಿಚಾರಣೆಗೆ ಗಮನ ಕೊಡದೆ ಅವರು ತ್ವರಿತವಾಗಿ ಕ್ರಮ ಕೈಗೊಳ್ಳುತ್ತದೆ.

ಗೌರಿ ಅವರದು ಹೆಚ್ಚುವರಿ ನ್ಯಾಯಾಧೀಶರ ನೇಮಕಾತಿ ಮಾತ್ರ ಆಗಿದ್ದು, ನ್ಯಾಯಾಧೀಶರ ದೃಢೀಕರಣದ ಸಮಯದಲ್ಲಿ ಸಮಸ್ಯೆಯನ್ನು ಪರಿಶೀಲಿಸಬಹುದು ಎಂದು ಪೀಠದ ಅವಲೋಕನವು ಸಮಾಧಾನ ಪಡುವದು ಅಥವಾ ಈ ಸಮಸ್ಯೆಗೆ ಪರಿಹಾರವಲ್ಲ.

ಈ ಸಂದರ್ಭದಲ್ಲಿ ಅಖಿಲ ಭಾರತ ವಕೀಲರ ಒಕ್ಕೂಟ ತಮಿಳುನಾಡು ಸಮಿತಿಯಿಂದ ನೇಮಕಾತಿ ವಿರುದ್ಧ ಪ್ರತಿಭಟನೆ ನಡೆಸಿರುವುದು ಸಮರ್ಥನೀಯ. ಸಂವಿಧಾನ ಉಳಿಸಲು, ಪ್ರಜಾಪ್ರಭುತ್ವ ಉಳಿಸಲು ನ್ಯಾಯಾಂಗದ ಸ್ವಾತಂತ್ರ್ಯ ಮತ್ತು ಅದರಲ್ಲಿ ಜನರ ನಂಬಿಕೆಯನ್ನು ರಕ್ಷಿಸುವುದು ವಕೀಲರಾಗಿ ನಮ್ಮ ಸಾಮೂಹಿಕ ಕರ್ತವ್ಯ ಮತ್ತು ಜವಾಬ್ದಾರಿಯಾಗಿದೆ.

ಪಿ.ವಿ. ಸುರೇಂದ್ರನಾಥ್: ಪ್ರಧಾನ ಕಾರ್ಯದರ್ಶಿ (ಅಖಿಲ ಭಾರತ ವಕೀಲರ ಒಕ್ಕೂಟ– AILU)







ತ್ರಿಪುರ ರಾಜ್ಯದಲ್ಲಿ ಚುನಾವಣೆಗಳನ್ನು ಹೈಜಾಕ್ ಮಾಡಿ ಪ್ರಜಾಪ್ರಭುತ್ವದ ಕತ್ತು ಹಿಚುಕಲು ಹೊರಟಿರುವ ಸರ್ವಾಧಿಕಾರಿ ಬಿಜೆಪಿ ಸರ್ಕಾರದ ನಡವಳಿಕೆಯನ್ನು ಖಂಡಿಸಿ, ನ್ಯಾಯಸಮ್ಮತವಾಗಿ ಚುನಾವಣೆ ನಡಸಬೇಕು ಎಂದು ಒತ್ತಾಯಿಸಿ ಹೋರಾಟ ನಿರತ ತ್ರಿಪುರದ ಜನತೆಗೆ ಸೌಹಾರ್ದ ವ್ಯಕ್ತಪಡಿಸಿ ಸಿಪಿಐ(ಎಂ) ಪಕ್ಷದ ವತಿಯಿಂದ ರಾಜ್ಯಾದ್ಯಂತ ಪ್ರತಿಭಟನೆ ನಡೆಸಲಾಯಿತು.

ಉದ್ಯೋಗ ಸೃಷ್ಟಿಗೆ ಗಮನ ನೀಡದ ಕೇಂದ್ರದ ಬಜೆಟ್:

ಸರಕಾರದ ನೀತಿ ಬದಲಾಗದಿದ್ದರೆ ಈ ಸರಕಾರವನ್ನು ಕಿತ್ತೊಗೆಯಬೇಕಿದೆ:



ಪ್ರಕಾಶ್ ಕಾರತ್

ಫೆಬ್ರವರಿ 1 ರಂದು ಮಂಡಿಸಲಾದ 2023–24ನೇ ಸಾಲಿನ ಕೇಂದ್ರ ಬಜೆಟ್, ಜನರ ಜೀವನ ಮತ್ತು ಜೀವನೋಪಾಯಗಳ ಮೇಲೆ ದೊಡ್ಡ ಹೊಡೆತ ನೀಡಿದೆ. ಜನರಿಗೆ ನೇರವಾಗಿ ಆರ್ಥಿಕ ನೆರವು ನೀಡುವ ಯೋಜನೆಗಳು ಮತ್ತು ಕಾರ್ಯಕ್ರಮಗಳ ವೆಚ್ಚವನ್ನು ದೊಡ್ಡ ಪ್ರಮಾಣದಲ್ಲಿ ಕಡಿತ ಮಾಡಲಾಗಿದೆ. ಹಲವು ವಿಚಾರಗಳನ್ನು ಕೈಬಿಟ್ಟಿರುವುದು ಇನ್ನೂ ದೊಡ್ಡ ಪಾಪವಾಗಿದೆ. ಜನರನ್ನು ಕಾಡುತ್ತಿರುವ ಪ್ರಮುಖ ಸಮಸ್ಯೆಗಳನ್ನು ಒಂದೋ ನಿರ್ಲಕ್ಷಿಸಲಾಗಿದೆ, ಇಲ್ಲವೇ ಅತಿ ಬುದ್ಧಿವಂತಿಕೆಯಿಂದ ನಿರ್ವಹಿಸಲಾಗಿದೆ. ಮಾನವ ಸಂಪನ್ಮೂಲವನ್ನು ಅನ್ಯಾಯದ ರೀತಿಯಲ್ಲಿ ನಿರ್ಲಕ್ಷಿಸಿರುವುದು, ವಿಶೇಷವಾಗಿ ಯುವಜನತೆಯನ್ನು ಬಾಧಿಸುತ್ತಿರುವ ಅತಿಯಾದ ನಿರುದ್ಯೋಗ ಸಮಸ್ಯೆಯನ್ನು ಸರಕಾರ ಕಡೆಗಣಿಸಿದಂತೆ ಆಗಿದೆ.

ಸಿಎಂಐಇ ಸಮೀಕ್ಷೆ ದತ್ತಾಂಶದ ಪ್ರಕಾರ, ಕಳೆದ 41 ತಿಂಗಳಲ್ಲಿ ನಿರುದ್ಯೋಗ ದರ ಶೇಕಡ 7ರ ಆಜುಬಾಜು ಸುಳಿದಾಡುತ್ತಿದೆ. ಕೆಲವೊಮ್ಮೆ ಅದಕ್ಕಿಂತ ಹೆಚ್ಚಾಗಿದ್ದೂ ಇದೆ. ನಗರ ಪ್ರದೇಶದ ನಿರುದ್ಯೋಗ ಸತತವಾಗಿ ಹೆಚ್ಚಾಗಿಯೇ ಇದ್ದು ಶೇಕಡ 8 ರಿಂದ 10 ರಷ್ಟಿದೆ. ಇದೊಂದು ಆಘಾತಕಾರಿಯಾದ ಅಧಿಕ ದರವಾಗಿದ್ದು ಸರಕಾರಗಳ ನಿರಂತರ ನಿರ್ಲಕ್ಷ್ಯವೇ ಇದಕ್ಕೆ ಕಾರಣ. ಕಳೆದ ಮೂರು ವರ್ಷಗಳಲ್ಲಿ ನಿರುದ್ಯೋಗಿಗಳ ಸಂಖ್ಯೆ ಒಂದು ರೀತಿಯಲ್ಲಿ ಬದಲಾಗದೆ ಹಾಗೇ ಉಳಿದುಕೊಂಡು ಬಂದಿದೆ. ಕೋವಿಡ್ ಸಾಂಕ್ರಾಮಿಕತೆಗಿಂತ ಮುನ್ನ, ಅಂದರೆ 2020ರ ಜನವರಿಯಲ್ಲಿ 41.1 ಕೋಟಿ ಇದ್ದ ನಿರುದ್ಯೋಗಿಗಳ ಸಂಖ್ಯೆ 2023ರ ಜನವರಿಯಲ್ಲಿ 40.9 ಕೋಟಿ ಆಗಿದೆ. ಈ ನಡುವೆ, ಇದೇ ಅವಧಿಯಲ್ಲಿ ಕಾರ್ಮಿಕರ ಭಾಗವಹಿಸುವಿಕೆ ದರ (ಅಂದರೆ, ಕೆಲಸ ಮಾಡುತ್ತಿರುವ ಅಥವಾ ಉದ್ಯೋಗ ಬಯಸಿದ ಕೆಲಸದ ಸಾಮರ್ಥ್ಯದ ವಯಸ್ಸಿನವರ ಪಾಲು) ಶೇ. 42.9ರಿಂದ ಶೇ. 39.8ಕ್ಕೆ ಕುಸಿದಿದೆ. ಈ ಅಂಕಿಸಂಖ್ಯೆಗಳ ಸಂಯೋಜನೆಯು ಒಂದು ಗಂಭೀರ ಪರಿಸ್ಥಿತಿಯತ್ತ ಬೆಟ್ಟು ಮಾಡುತ್ತದೆ. ಜನಸಂಖ್ಯೆಯಲ್ಲಿ ಏರಿಕೆಯಾಗಿದ್ದರೂ ಉದ್ಯೋಗಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿಲ್ಲ ಎನ್ನುವುದೇ ಆ ಕಳವಳಕಾರಿ ಸಂಗತಿ. ಕಾರ್ಮಿಕರ ಭಾಗವಹಿಸುವಿಕೆ ದರದಲ್ಲಿನ ಕುಸಿತವೆಂದರೆ ಹೆಚ್ಚೆಚ್ಚು ಜನರನ್ನು ನಿರುತ್ಸಾಹಗೊಳಿಸಲಾಗುತ್ತಿದೆ ಮತ್ತು ಶ್ರಮ ಮಾರುಕಟ್ಟೆಯಿಂದ ಹೊರಗೆ ಕಳಿಸಲಾಗುತ್ತಿದೆ ಎಂದರ್ಥ. ಇದು ಜೀವನ ಮಟ್ಟದಲ್ಲಿನ ಕುಸಿತವನ್ನು ತೋರಿಸುತ್ತದೆ.

ಆದರೆ, ಸರಕಾರ ಮತ್ತು ಅದರ ಪ್ರಧಾನ ಮಂತ್ರಿ ಮಾತ್ರ, ಪ್ರತಿ ವರ್ಷ ಎರಡು ಕೋಟಿ ಉದ್ಯೋಗಗಳನ್ನು ಸೃಷ್ಟಿಸಲಾಗುತ್ತದೆ ಎಂದೋ, ಕೇಂದ್ರ ಸರಕಾರದ ಸುಮಾರು 10 ಲಕ್ಷ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ ಎಂದೋ ಆಶ್ವಾಸನೆ ನೀಡುತ್ತಲೇ ಇದ್ದಾರೆ. ಹೀಗಾಗಿ, ಮುಂದಿನ ವರ್ಷಕ್ಕೆ ಆರ್ಥಿಕ ನೀತಿಯನ್ನು ಮುಂದಿಡುವ ಕೇಂದ್ರ ಬಜೆಟ್ ಈ ಉದ್ಯೋಗ ಬಿಕ್ಕಟ್ಟನ್ನು ಎದುರಿಸಲು ಕೆಲವಾದರೂ ಕ್ರಮಗಳನ್ನು ಕೈಗೊಳ್ಳಬಹುದೆಂದು ಜನತೆ ನಿರೀಕ್ಷಿಸಿದ್ದು ತಪ್ಪೇನೂ ಅಲ್ಲ. ಆದರೆ ತದ್ವಿರುದ್ಧವಾಗಿ ಬಜೆಟ್ ಮಂಡನೆಯಾಗಿದೆ. ನಿರುದ್ಯೋಗ ಸಮಸ್ಯೆಯಿಂದ ಸ್ವಲ್ಪ ಮಟ್ಟಿಗೆ ಪರಿಹಾರ ಒದಗಿಸುತ್ತಿದ್ದ ಕೆಲವು ಹಾಲಿ ಯೋಜನೆಗಳ ಅನುದಾನವನ್ನು ಕಡಿತಗೊಳಿಸಲಾಗಿದೆ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ (ರೇಗಾ) ಹಣವನ್ನು ಶೇಕಡ 33ರಷ್ಟು ಕಡಿಮೆ ಮಾಡಲಾಗಿದೆ; 2022–23ರಲ್ಲಿ 89,400 ಕೋಟಿ ರೂಪಾಯಿಗಳನ್ನು ರೇಗಾಕ್ಕೆ ವೆಚ್ಚ ಮಾಡಲಾಗಿದ್ದು ಅದನ್ನು ಈಗ 2023–24ಕ್ಕೆ 60,000 ಕೋಟಿ ರೂಪಾಯಿಗೆ ಇಳಿಸಲಾಗಿದೆ. ಅದೇ ರೀತಿ, ಕಳೆದ ವರ್ಷದ ಬಜೆಟ್ ಹಂಚಿಕೆಗೆ ಹೋಲಿಸಿದರೆ, ಸರಕಾರ ಮತ್ತು ಅದರ ಸಮರ್ಥಕರು, ಈ ಬಜೆಟ್‌ನ ಉದ್ಯೋಗ ಸೃಷ್ಟಿಯ ಸಾಮರ್ಥ್ಯದ ಹಲವು ಸುಳ್ಳುಗಳನ್ನು ಪ್ರಚಾರ ಮಾಡುವಲ್ಲಿ ನಿರತರಾಗಿದ್ದಾರೆ. ಉದ್ಯೋಗ ಸೃಷ್ಟಿಸಲಿರುವ ಬಂಡವಾಳ ವೆಚ್ಚಕ್ಕೆ (ಕ್ಯಾಪಿಟಲ್ ಎಕ್ಸ್‌ಪೆಂಡಿಚರ್) ಮೋದಿ ಸರಕಾರ ಹೆಚ್ಚು ಹಣವನ್ನು ಹಂಚಿಕೆ ಮಾಡಲಿದೆ ಎನ್ನುವುದು ಅಂಥ ಸುಳ್ಳುಗಳಲ್ಲಿ ಒಂದಾಗಿದೆ. ಯಾವಾಗಲೂ ಮೂಲಸೌಕರ್ಯ ಸೃಷ್ಟಿಯಂಥ ಕ್ಯಾಪಿಟಲ್ ಹೆಡ್‌ಗಳಿಗಿಂತ ಶಿಕ್ಷಣ ಅಥವಾ ಆರೋಗ್ಯದಂಥ ಸಾಮಾಜಿಕ ಬಾಬ್ತುಗಳಲ್ಲಿ ಮಾಡುವ ವೆಚ್ಚದ ಪ್ರತಿ ಯುನಿಟ್‌ಗೆ ಉದ್ಯೋಗ ಸೃಷ್ಟಿಯ ಅನುಪಾತ ಹೆಚ್ಚಿರುತ್ತದೆ ಎನ್ನುವುದು ಸಂಸ್ಥಾಪಿತ ವಾಸ್ತವವಾಗಿದೆ. ಮೋದಿ ಆಡಳಿತದಲ್ಲಿ ಅಧಿಕ ವಿದೇಶಿ ಯಂತ್ರೋಪಕರಣಗಳ ಆಮದು ಮುಂತಾದವು ಕೂಡ ಬಂಡವಾಳ ವೆಚ್ಚದ ವ್ಯಾಪ್ತಿಗೆ ಬಂದಿದೆ. ಹೀಗಾಗಿ, ಬಂಡವಾಳ ವೆಚ್ಚವು ದೇಶೀಯ ಉತ್ಪಾದನೆ ಮತ್ತು ಸ್ಥಳೀಯ ಉದ್ಯೋಗಗಳನ್ನು ಬದಿಗೊತ್ತಿ ಆಮದುಗಳನ್ನು ಹೆಚ್ಚಿಸಲು ನೆರವಾಗುತ್ತದೆ.

ರಾಷ್ಟ್ರೀಯ ಜೀವನೋಪಾಯ ಮಿಷನ್‌ಗೂ ಗಣನೀಯ ಪ್ರಮಾಣದಲ್ಲಿ ಅನುದಾನ ಕಡಿತ ಮಾಡಲಾಗಿದೆ. ನೇರ ಉದ್ಯೋಗ ಯೋಜನೆಗಳಿಗೆ ಹಣ ಕಡಿತ, ಗ್ರಾಮೀಣ ವಸತಿ ಯೋಜನೆ, ಸ್ವಚ್ಛ ಭಾರತ ಮಿಷನ್ ಮತ್ತು ಇತರ ಕಲ್ಯಾಣ ಕಾರ್ಯಕ್ರಮಗಳಿಗೆ ಅನುದಾನ ಕಡಿತವೆಂದರೆ ಈ ಯೋಜನೆಗಳಡಿ ಸೃಷ್ಟಿಯಾದ ಉದ್ಯೋಗಗಳೂ ನಷ್ಟವಾಗುತ್ತವೆ ಎಂದರ್ಥ. ಐಸಿಡಿಎಸ್‌ಗೆ ಹಣವನ್ನು ಹೆಚ್ಚಿಸದಿದ್ದರೆ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರಿಗಾಗಿ ಮಂಜೂರಾದ 2.4 ಲಕ್ಷ ಹುದ್ದೆಗಳು ಭರ್ತಿಯಾಗದೆ ಹಾಗೇ ಉಳಿಯಲಿವೆ. ಇತರ ಯೋಜನೆಗಳು ಮಾತ್ರವಲ್ಲದೆ ಇತರ ಇಲಾಖೆಗಳು ಹಾಗೂ ಸಚಿವಾಲಯಗಳ ಪರಿಸ್ಥಿತಿ ಕೂಡ ಇದೇ ಆಗಿದೆ.

ಕೈಗಾರಿಕೆಗಳಿಗೆ ಬ್ಯಾಂಕ್ ಸಾಲ ನೀಡಿಕೆಯನ್ನು ಸುಗಮಗೊಳಿಸಿದರೆ ಉತ್ಪಾದನಾ ಸಾಮರ್ಥ್ಯ ಹೆಚ್ಚಿ ಅಧಿಕ ಉದ್ಯೋಗ ಸೃಷ್ಟಿಯಾಗುತ್ತದೆ ಎನ್ನುವುದು ಈಗ ಹಬ್ಬಿಸಲಾಗುತ್ತಿರುವ ಮತ್ತೊಂದು ಸುಳ್ಳು. ಹಿಂದಿನ ಕೆಲವು ವರ್ಷಗಳ ಅನುಭವದ ಆಧಾರದಲ್ಲಿ ಹೇಳುವುದಾದರೆ, ಕಾರ್ಪೊರೇಟ್ ವಲಯಕ್ಕೆ ತೆರಿಗೆ ವಿನಾಯಿತಿ ಮತ್ತು ಉತ್ತೇಜಕಗಳ ನೀಡಿಕೆ ಮತ್ತು ಅಗ್ಗದ ಸಾಲಗಳ ವಿಸ್ತರಣೆಯು ಹೆಚ್ಚು ಉದ್ಯೋಗ ಸೃಷ್ಟಿಯಲ್ಲಿ ವಿಫಲವಾಗಿದೆ. ಕೋವಿಡ್ ಸಾಂಕ್ರಾಮಿಕತೆಯ ಎರಡು ವರ್ಷಗಳಲ್ಲಿ ಲಿಸ್ಟೆಡ್ ಕಂಪನಿಗಳ ಲಾಭಗಳು ದಾಖಲೆ ಮಟ್ಟಕ್ಕೆ ಏರಿವೆ. ಆದರೆ ಉದ್ಯೋಗ ಸೃಷ್ಟಿ ಪ್ರಮಾಣ ತೀರಾ ಕಳಪೆಯಾಗಿದೆ. ಇದರ ವಿವರಣೆ ತುಂಬಾ ಸರಳವಾಗಿದೆ. ನಿರುದ್ಯೋಗ ಮತ್ತು ಕಡಿಮೆ ಆದಾಯದಿಂದಾಗಿ ಜನರಲ್ಲಿ ಸಾಕಷ್ಟು ಕೊಳ್ಳುವ ಶಕ್ತಿ ಇಲ್ಲವಾಗಿದೆ. ಹೀಗಾಗಿ ಸರಕುಗಳು ಮತ್ತು ಸೇವೆಗಳಿಗೆ ಬೇಡಿಕೆ ಕುಸಿದಿದೆ. ಎಷ್ಟೇ ಬೋಧನೆ ಮಾಡಿದರೂ ಮತ್ತು ಎಷ್ಟೇ ಕೇಳಿಕೊಂಡರೂ ಇನ್ಸೆಂಟಿವ್ ಮತ್ತು ಸಾಲಗಳನ್ನು ಕೊಟ್ಟರೂ ಕೈಗಾರಿಕಾ ಮಾಲಿಕರು ಉತ್ಪಾದನೆಯನ್ನು ವಿಸ್ತರಿಸುವುದಿಲ್ಲ. ಹೆಚ್ಚು ಕಾರ್ಮಿಕರನ್ನು ನೇಮಕ ಮಾಡಿಕೊಳ್ಳುವುದಿಲ್ಲ. ಇಂಥ ಉದ್ಯೋಗದಾತರಿಗೆ ಸರಕಾರದ ಮೂಲಕ ಹರಿಸಲಾಗುವ ಹಣವು ಅವರ ಲಾಭದ ಪ್ರಮಾಣವನ್ನು ಹೆಚ್ಚಿಸಲು ನೆರವಾಗುತ್ತದೆಯಷ್ಟೇ.

ಅತಿ ಸಣ್ಣ ಉದ್ಯಮವಲಯಕ್ಕೆ ಹೆಚ್ಚಿನ ನೆರವಿನ ಅಗತ್ಯವಿದೆ:

ಮೊದಲು ನೋಟು ಅಮಾನ್ಯೀಕರಣ (ಡಿಮಾನಿಟೈಸೇಶನ್), ಜಿಎಸ್‌ಟಿ ಆರಂಭ ಮತ್ತು ಆನಂತರ ಕರೊನಾ ಸಾಂಕ್ರಾಮಿಕದಂಥ ಸರಣಿ ಹೊಡೆತಗಳಿಂದ ಕಂಗೆಟ್ಟ ಎಂಎಸ್‌ಎಂಇ ವಲಯದ ಪರಿಸ್ಥಿತಿ ಏನಾಗಿದೆ? ಪ್ರಸಕ್ತ ಬಜೆಟ್‌ನಲ್ಲಿ ನೀಡಲಾದ ಆಶ್ವಾಸನೆಯಂತೆ ಈ ವಲಯಕ್ಕೆ ಸುಲಭ ಸಾಲದ ಅಗತ್ಯವಿಲ್ಲವೇ? ಭಾರತದಲ್ಲಿನ 6.33 ಕೋಟಿ ಎಂಎಸ್‌ಎಂಇಗಳ ಪೈಕಿ 6.30 ಕೋಟಿ (ಅಂದರೆ ಶೇಕಡ 99) ಉದ್ಯಮಗಳು ಅತಿ ಸಣ್ಣ (ಮೈಕ್ರೋ) ಕೈಗಾರಿಕೆಗಳಾಗಿವೆ. 3.31 ಲಕ್ಷ ಯುನಿಟ್‌ಗಳು ಚಿಕ್ಕ ಘಟಕಗಳಾಗಿವೆ ಮತ್ತು 5,000 ಮಾತ್ರವೇ ಮಧ್ಯಮ ಪ್ರಮಾಣದ ಕೈಗಾರಿಕೆಗಳಾಗಿವೆ. ಮೈಕ್ರೋ ಕೈಗಾರಿಕೆಗಳು ಸುಮಾರು 11 ಕೋಟಿ ಕಾರ್ಮಿಕರನ್ನು ಹೊಂದಿವೆ, ಸಣ್ಣ ಉದ್ಯಮಗಳು 32 ಲಕ್ಷ ಹಾಗೂ ಮಧ್ಯಮ ಉದ್ಯಮಗಳು ಸುಮಾರು 2 ಲಕ್ಷ ಕಾರ್ಮಿಕರನ್ನು ನೇಮಿಸಿಕೊಂಡಿವೆ. ಆದ್ದರಿಂದ ಉದ್ಯೋಗವನ್ನು ಸೃಷ್ಟಿಸಬೇಕಾದರೆ ಅತಿ ಸಣ್ಣ ವಲಯಕ್ಕೆ ಹೆಚ್ಚಿನ ನೆರವಿನ ಅಗತ್ಯವಿದೆ. ಆದರೆ, ಎಂಎಸ್‌ಎಂಇಗೆ ನೀಡಲಾಗುವ ಸಾಲದಲ್ಲಿ ಬಹುತೇಕ ಭಾಗವನ್ನು ಮಧ್ಯಮ ಪ್ರಮಾಣದ ಉದ್ಯಮಗಳು ಕಬಳಿಸುತ್ತವೆ.

ಎಂಎಸ್‌ಎಂಇಗಳಿಗೆ ಸಾಲ ನೀಡಿಕೆ ದೊಡ್ಡ ಪ್ರಮಾಣದಲ್ಲಿ ಏರಿಕೆಯಾದ 2022ನೇ ಹಣಕಾಸು ವರ್ಷದ ಕೊನೆಯ ತ್ರೈಮಾಸಿಕದಲ್ಲಿ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಒಟ್ಟಾಗಿ 2.57 ಲಕ್ಷ ಕೋಟಿ ರೂಪಾಯಿ ಸಾಲ ಪಡೆದಿವೆ. ಆದರೆ ಅತಿ ಸಣ್ಣ ಉದ್ಯಮಗಳಿಗೆ ಕೇವಲ 68.9 ಸಾವಿರ ಕೋಟಿ ರೂಪಾಯಿ ಸಾಲ ಒದಗಿಸಲಾಗಿದೆ. ದೇಶೀಯ ಮತ್ತು ವಿದೇಶಿ ಎರಡೂ ಸೇರಿ ದೊಡ್ಡ ಉದ್ಯಮಗಳನ್ನಷ್ಟೇ ಅವಲಂಬಿಸುವ ನವ ಉದಾರವಾದಿ ಸೂತ್ರಾಂಧತೆಯಿಂದ ಮೋದಿ ಸರಕಾರ ಕುರುಡಾಗಿರುವುದು ಸ್ಪಷ್ಟವಾಗಿದೆ. ಆರ್ಥಿಕತೆಗೆ ಉತ್ತೇಜನ, ಉದ್ಯೋಗ ಸೃಷ್ಟಿ ಮತ್ತು ಆದಾಯ ಕೆಳಮುಖವಾಗಿ ಹರಿಯುವ ಭ್ರಮಾತ್ಮಕ 'ಟ್ರಿಕಲ್ ಡೌನ್'ಗೆ ಇವೆರಡು ವಿಭಾಗಗಳನ್ನಷ್ಟೇ ನೆಚ್ಚಿ ಕೊಂಡಿರುವ ಅದರ ನೀತಿ ಹಾಸ್ಯಾಸ್ಪದವಾಗಿದೆ. ಅದು ಖಂಡಿತಕ್ಕೂ ಉದ್ಯೋಗ ಬಿಕ್ಕಟ್ಟು ಎದುರಿಸಲು ಅಸಮರ್ಥವಾಗಿದೆ. ಒಂದೋ ಅದರ ನೀತಿಗಳನ್ನು ಆಮೂಲಾಗ್ರವಾಗಿ ಬದಲಾಯಿಸಬೇಕು ಇಲ್ಲವೇ ಮುಂದಿನ ಚುನಾವಣೆಗಳಲ್ಲಿ ಈ ಸರಕಾರವನ್ನು ಅಧಿಕಾರದಿಂದ ಕಿತ್ತೆಸೆಯಬೇಕು. ಇವೇ ಜನರ ಮುಂದಿರುವ ಮಾರ್ಗಗಳಾಗಿವೆ.

ಅನು: ವಿಶ್ವ

ಜನಶಕ್ತಿ ಕನ್ನಡ ವಾರಪತ್ರಿಕೆ

ಚಂದಾ ವಿವರ

ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು 560027
ಕಛೇರಿ ದೂರವಾಣಿ : 080–22234369
ಫೋನ್ : 9448578021, 9483966467

ತ್ರಿಪುರದಲ್ಲಿ ಪ್ರಜಾಪ್ರಭುತ್ವಕ್ಕಾಗಿ ದನಿಯೆತ್ತೋಣ

ಬಿಜೆಪಿಯ ಭಯೋತ್ಪಾದನೆ, ಸರ್ವಾಧಿಕಾರಿ, ಹಲ್ಲೆ, ಬೂತ್ ವಶದಂತಹ ದುರಾಚಾರವನ್ನು ಧಿಕ್ಕರಿಸೋಣ

ನಿಷ್ಪಕ್ಷಪಾತ ಚುನಾವಣೆಗಾಗಿ ಆಗ್ರಹಿಸೋಣ



ಈಗ ತ್ರಿಪುರಾದಲ್ಲಿ ವಿಧಾನಸಭಾ ಚುನಾವಣೆ ನಡೆಯುತ್ತಿದೆ. ಐದು ವರ್ಷಗಳ ಹಿಂದೆ ನಡೆಯುತ್ತಿದ್ದ ಪ್ರತಿ ಚುನಾವಣೆಯ ಸಂದರ್ಭದಲ್ಲಿ ಅಲ್ಲಿನ ಜನತೆಯು ಅತ್ಯಂತ ಸಂಭ್ರಮದಿಂದ ಚುನಾವಣೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಮತದಾನದ ದಿನವಂತೂ ಅದೊಂದು ಹಬ್ಬದ ಸ್ವರೂಪವೇ ಆಗಿರುತ್ತಿತ್ತು. ಅತ್ಯಂತ ನಿರ್ಭಯದ ಪ್ರಜಾಪ್ರಭುತ್ವೀಯ ನೆಲೆಯಲ್ಲಿ ಚುನಾವಣೆಗಳು ನಡೆದುಕೊಂಡು ಬಂದ ಪರಂಪರೆ ಅಲ್ಲಿಯದು. ಆದರೆ ಕಳೆದ ಬಾರಿಯ ಚುನಾವಣೆಯಿಂದ ಈವರೆಗೆ ತ್ರಿಪುರ ರಾಜ್ಯವು ಇನ್ನಿಲ್ಲದಂತೆ ಗಾಯಗೊಂಡು ನರಳುತ್ತಿದೆ. ಶಿಕ್ಷಣ, ಆರೋಗ್ಯ, ಉದ್ಯೋಗದಲ್ಲಿ ಅತ್ಯಂತ ಮುಂದುವರೆದ ರಾಜ್ಯವು ಇಂದು ಎಲ್ಲ ಕ್ಷೇತ್ರಗಳಲ್ಲಿಯೂ ಕುಸಿತ ಕಾಣುತ್ತಿದೆ. ಐದು ವರ್ಷಗಳ ಹಿಂದೆ ಅಲ್ಲಿ ಎಡಪಕ್ಷಗಳ ನೇತೃತ್ವದ ಸರಕಾರವಿತ್ತು. ಜನಪರವಾದ ಆಡಳಿತಕ್ಕೆ ಹೆಸರುವಾಸಿಯಾಗಿತ್ತು. ಆದಿವಾಸಿ ಬುಡಕಟ್ಟು ಜನತೆಯ ಸಮಗ್ರ ಅಭಿವೃದ್ಧಿಗಾಗಿ ಶಾಸಕಾಂಗದಷ್ಟೇ ಹಕ್ಕು ಬಾಧ್ಯತೆ ಕರ್ತವ್ಯಗಳು ಮತ್ತು ವಿಶೇಷ ಬಜೆಟ್ಟನ್ನು ಜನಾಭಿವೃದ್ಧಿಗೆ ಬಳಸುತ್ತ ಆಡಳಿತ ನಡೆಸಲಾಗುತ್ತಿತ್ತು. ಭ್ರಷ್ಟಾಚಾರವಿಲ್ಲದ ಜನಪರವಾದ ಸರಕಾರವೆಂದೇ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಕಾಂ. ಮಾಣಿಕ್ ಸರಕಾರ್ ಅವರು ಹೆಸರುವಾಸಿಯಾಗಿದ್ದರು. ಉದ್ಯೋಗಖಾತ್ರಿ ಕಾಯ್ದೆ ಜಾರಿಗೆ ಕಾರಣರಾಗಿದ್ದು ಎಡಪಕ್ಷಗಳು. ಅಂತೆಯೇ ಉದ್ಯೋಗಖಾತ್ರಿಯನ್ನು ನೂರಕ್ಕೆ ನೂರರಷ್ಟು ಭ್ರಷ್ಟಾಚಾರವಿಲ್ಲದೆ ಜನತೆಗೆ ತಲುಪಿಸಿದ್ದು ಅಂದಿನ ಎಡಪಕ್ಷಗಳ ರಾಜ್ಯ ಸರಕಾರಗಳು. ಕೇಂದ್ರ ಸರಕಾರ ಮಾತ್ರ ತ್ರಿಪುರ ರಾಜ್ಯಕ್ಕೆ ಕೊಡಬೇಕಾದಷ್ಟು ಅನುದಾನ ಕೊಡದೆ ಸತಾಯಿಸಿದ್ದು ಇದೆ. ಈ ಬಾರಿಯಂತೂ ಉದ್ಯೋಗ ಖಾತ್ರಿಗಾಗಿ ಕೇವಲ ರೂ.60,000 ಕೋಟಿ ಅನುದಾನ ಘೋಷಿಸಲಾಗಿದೆ. ಅದರಲ್ಲಿ ಖಂಡಿತ ತ್ರಿಪುರದ ಪಾಲು ದೊರೆಯದೆ ಗ್ರಾಮೀಣ ಪ್ರದೇಶದ ನಿರುದ್ಯೋಗ ಹೆಚ್ಚಲಿದೆ. ಹಿಂದಿನ ಎಡಪಕ್ಷಗಳ ಸರಕಾರವು ರಾಜ್ಯದ ಒಟ್ಟು ಆದಾಯವನ್ನು ಜನತೆಯ ಕೊಳ್ಳುವ ಶಕ್ತಿ ಹೆಚ್ಚು ಮಾಡಲು, ಉತ್ಪಾದನಾ ಪ್ರಕ್ರಿಯೆಯಲ್ಲಿ ಜನತೆಯನ್ನು ತೊಡಗಿಸಲು ಮತ್ತು ಜನಕೇಂದ್ರಿತವಾದ ಸಂಪನ್ಮೂಲ ಸೃಷ್ಟಿಗೆ ಬಳಸಿದ್ದು ಚಾರಿತ್ರಿಕ ದಾಖಲೆ. ಅದರಲ್ಲಿಯೂ ತ್ರಿಪುರ ರಾಜ್ಯವು ಶಾಂತಿ ಸೌಹಾರ್ದತೆಗೆ ಹೆಸರಾಗಿದ್ದ ರಾಜ್ಯ. ಬಾಬರಿ ಮಸಿದಿ ಕೆಡವಿದ ಸಂಘಪರಿವಾರಿಗಳು ದೇಶದಲ್ಲಿ ದಂಗೆ ಆರಂಭಿಸಿದ್ದರು. ಆದರೆ ತ್ರಿಪುರದ ಅಂದಿನ ಮುಖ್ಯ ಮಂತ್ರಿಗಳು ಮೊಹಲ್ಲಾ ಮಸಿದಿ ದರ್ಗಾಗಳಿಗೆ ಭೇಟಿಯಿತ್ತು ಮುಸ್ಲಿಂ ಸಮುದಾಯಕ್ಕೆ ನಿರ್ಭಯದ ನೆಮ್ಮದಿಯ ಬದುಕು ಕೊಟ್ಟಿದ್ದರು.ಆದ್ದರಿಂದಲೇ ತ್ರಿಪುರದಲ್ಲಿ ಕೋಮುದಂಗೆಗಳಿಗೆ ಜಾಗವೇ ಇರಲಿಲ್ಲ. ಆದರೆ ಯಾವಾಗ ಬಿಜೆಪಿಯು ತ್ರಿಪುರವನ್ನು ಗುರಿಯಾಗಿಸಿಕೊಂಡು ತನ್ನ ಕೋಮುವಾದಿ ಆಟ ಆಡಲು ಆರಂಭಿಸಿತೊ ಅಂದಿನಿಂದ ತ್ರಿಪುರ ರಾಜ್ಯದ ಜನತೆಯ ನೆಮ್ಮದಿಯನ್ನು ಕಸಿದುಕೊಂಡಿದೆ.

ಆದರೀಗ ತ್ರಿಪುರ ರಾಜ್ಯವು ಬಿಜೆಪಿಯ–ಐಪಿಎಫ್ಟಿ ಆಡಳಿತದಲ್ಲಿ ಅಕ್ಷರಶಃ ಸಂಕಟದಲ್ಲಿ ಬೇಯುತ್ತಿದೆ. ಐದು ವರ್ಷಗಳ ಹಿಂದೆ ಬಿಜೆಪಿಯು ಬೂತ್ ವಶಪಡಿಸಿಕೊಂಡು, ದೊಂಬಿ ಗಲಭೆಗಳನ್ನು ಸೃಷ್ಟಿಸಿ, ಜನರು ಮತ ಹಾಕದಂತೆ ತಡೆಯೊಡ್ಡಿ, ಜನರ ಮೇಲೆ ಮಾರಣಾಂತಿಕ ಹಲ್ಲೆ ಮಾಡಿ, ಭಯೋತ್ಪಾದನೆ ನಡೆಸಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂತು. ಈಗ ತ್ರಿಪುರ ತೀವ್ರ ನಿರುದ್ಯೋಗದಿಂದ ನರಳುತ್ತಿದೆ. ಶೇಕಡ 7% ರಷ್ಟು ನಿರುದ್ಯೋಗದಲ್ಲಿ ಹೆಚ್ಚಳವಾಗಿದೆ. ನಗರ ಪ್ರದೇಶಗಳಲ್ಲಿ ಇದರ ಪ್ರಮಾಣವು ಶೇ. 8ರಿಂದ 10ರಷ್ಟು ಏರಿಕೆ ಕಂಡಿದೆ. ರಾಜ್ಯದಲ್ಲಿ ಕೆಲಸ ದೊರಕದೆ ಜನರು ಗುಳೆ ಹೋಗುತ್ತಿದ್ದಾರೆ. ದುಡಿಮೆಯಲ್ಲಿ ಉತ್ಪಾದನಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವ ಮಾನವಸಂಪನ್ಮೂಲದ ಪ್ರಮಾಣದಲ್ಲಿ ತೀವ್ರ ಕುಸಿತ ಕಂಡಿದೆ. ವರ್ಷಕ್ಕೆ 2 ಕೋಟಿ ಉದ್ಯೋಗ ಕೊಡುತ್ತೇನೆ ಎಂದು ಹೇಳಿದ ಕೇಂದ್ರ ಸರಕಾರವು ಒಂದೇ ಒಂದು ಉದ್ಯೋಗ ಸೃಷ್ಟಿ ಮಾಡಿಲ್ಲ. ಕೇಂದ್ರ ಸರಕಾರದಡಿಯಲ್ಲಿ ಖಾಲಿ ಇರುವ 10 ಲಕ್ಷ ನೌಕರಿಗಳನ್ನು ಭರ್ತಿ ಮಾಡಿಕೊಂಡಿಲ್ಲ. ಪ್ರದಾನ ಮಂತ್ರಿಗಳು ಮಾತ್ರ ಸುಳ್ಳು ಭರವಸೆಗಳನ್ನು ಕೊಡುತ್ತಲೇ ಇದ್ದಾರೆ. ಅವರ ಹಸಿ ಸುಳ್ಳುಗಳನ್ನು ಬಯಲು ಮಾಡಿದ್ದು ಈಚೆಗೆ ಮಂಡಿಸಲಾದ ಬಜೆಟ್ಟು. ಜನಕಲ್ಯಾಣದ ಎಲ್ಲ ಯೋಜನೆಗಳಿಂದ ಅನುದಾನ ಕಡಿತ ಮಾಡಲಾಗಿದೆ. ಇದರ ನೇರ ಪರಿಣಾಮಕ್ಕೆ ತ್ರಿಪುರವೂ ಬಲಿಯಾಗಲಿದೆ. ರಾಜ್ಯದಲ್ಲಿ ಕೈಗಾರಿಕೆಗಳು, ಕೃಷಿ ಸಂಪೂರ್ಣ ಬಿಕ್ಕಟ್ಟಿನಲ್ಲಿದೆ.

ಬಿಜೆಪಿ–ಐಪಿಎಫ್ಟಿ ಆಡಳಿತದ ಸರ್ವಾಧಿಕಾರಿ ಫ್ಯಾಸಿಸ್ಟ್ ಧೋರಣೆಃ–

ರಾಜ್ಯದಲ್ಲಿ ಬಿಜೆಪಿ–ಐಪಿಎಫ್ಟಿ ಸರಕಾರವು ಸಂಪೂರ್ಣ ಸರ್ವಾಧಿಕಾರಿತ್ವ ನಡೆಸುತ್ತಿದೆ. ರಾಜ್ಯದಲ್ಲಿ ತೀವ್ರ ಮೂಢನಂಬಿಕೆ ಹುಟ್ಟು ಹಾಕುತ್ತಿದೆ. ಅಕ್ಷರಶಃ ಅದೊಂದು ದುಶ್ಯಾಸನ ರಾಜ್ಯವಾಗಿ ಮಾರ್ಪಡಿಸಲಾಗಿದೆ. ಈ ಆಡಳಿತದಲ್ಲಿ ಜನರು ಕಂಗಾಲಾಗಿದ್ದಾರೆ. ಅಲ್ಪಸಂಖ್ಯಾತರ ಮೇಲೆ ದಾಳಿಗಳು ಹೆಚ್ಚುತ್ತಿವೆ. ಪರಿಶಿಷ್ಟ ಜಾತಿ ಪಂಗಡ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ಜನತೆಗೆ ಆರ್ಥಿಕ ಸೌಲಭ್ಯಗಳನ್ನು ನಿರಾಕರಿಸಲಾಗುತ್ತಿದೆ. ರಾಜ್ಯದಲ್ಲಿ ಹೆಚ್ಚುತ್ತಿರುವ ನಿರುದ್ಯೋಗ, ಕುಸಿಯುತ್ತಿರುವ ಕೊಳ್ಳುವ ಶಕ್ತಿ ಇದೆಲ್ಲದರಿಂದ ಭವಿಷ್ಯದ ಯುವಜನತೆಯು ಅರಾಜಕತೆಯತ್ತ ಹೊರಳುವಂತಾಗಿದೆ. ಯುವಜನರನ್ನು ಮಾದಕ ನಶೆಯು ಸೆಳೆಯುವಂತೆ ಮಾಡಲಾಗಿದೆ. ಈ ವಾತಾವರಣಕ್ಕೆ ಸರಕಾರವೇ ನೇರ ಹೊಣೆಯಾಗಿದೆ. ಇಂತಹ ಅತ್ಯಂತ ಚಿಂತಾಜನಕವಾದ ಪರಿಸ್ಥಿತಿಯನ್ನು ಬಿಜೆಪಿ–ಐಪಿಎಫ್ಟಿ ಸರಕಾರವು ಸೃಷ್ಟಿ ಮಾಡಿದೆ. ಇಂತಹ ದುರಾಡಳಿತ ಕೈವಶ ಮಾಡಿಕೊಳ್ಳಲು ಕಳೆದ ಬಾರಿ ನಡೆದ ಅಸೆಂಬ್ಲಿ ಚುನಾವಣೆಯಲ್ಲಿ ಬಿಜೆಪಿಯು ತನ್ನ ಗೂಂಡಾ ಪಡೆಗಳ ಮೂಲಕ ಎಲ್ಲ ರೀತಿಯ ಅನಾಚಾರಕ್ಕೆ ಇಳಿದಿತ್ತು. ಜನರನ್ನು ಭಯಭೀತರನ್ನಾಗಿಸಿ ಅವರ ಮೇಲೆ ಹಲ್ಲೆ ಮಾಡಿ, ಕೊಲೆ, ದಬ್ಬಾಳಿಕೆ ನಡೆಸಿ, ಮನೆಯಿಂದ ಹೊರಬರಲು ಸಹ ಬಿಡದೆ ಮತಗಳನ್ನು ಹಾಕಲು ಸಹ ಬಿಡದೆ ಚುನಾವಣೆ ಎಂಬ ಪ್ರಜಾಪ್ರಭುತ್ವೀಯ ಪ್ರಕ್ರಿಯೆಯನ್ನು ಸಂಪೂರ್ಣ ಹಿಮ್ಮೆಟ್ಟಿಸಿ ಅಟ್ಟಹಾಸ ಮೆರೆದಿತ್ತು. ಸಾಮಾನ್ಯ ಜನತೆಯ ಗುಡಿಸಲುಗಳಿಗೆ, ಮನೆಗಳಿಗೆ ಬೆಂಕಿ ಇಟ್ಟಿತ್ತು. ಮಹಿಳೆಯರ ಮೇಲೆಯೂ ದೌರ್ಜನ್ಯ ನಡೆಸಿತ್ತು. ಈ ಬಾರಿಯೂ ಬಿಜೆಪಿ ಇಂತಹದೇ ಗೂಂಡಾಗಿರಿ ನಡೆಸಿ ಚುನಾವಣೆ ಗೆಲ್ಲಬೇಕೆನ್ನುತ್ತಿದೆ. ಸೌಹಾರ್ದ ಸಾಂಸ್ಕೃತಿಕ ಪರಂಪರೆಯು ತ್ರಿಪುರ ರಾಜ್ಯದ ಘನತೆಯಾಗಿದೆ. ಆದರೆ ಬಿಜೆಪಿಯು ಅಲ್ಲಿಯೂ ಕೋಮುಭಾವನೆಗಳನ್ನು ಉದ್ದೀಪನಗೊಳಿಸಿ ಸೌಹಾರ್ದತೆಗೆ ಧಕ್ಕೆ ಮಾಡುವ ಎಲ್ಲ ದುಷ್ಟ ಷಡ್ಯಂತ್ರಗಳನ್ನು ಜಾರಿ ಮಾಡುತ್ತಿದೆ. ಭ್ರಷ್ಟಾಚಾರವಂತೂ ಇನ್ನಿಲ್ಲದಂತೆ ವ್ಯಾಪಕವಾಗಿ ಹೆಡೆಯೆತ್ತಿದೆ. ಅತ್ಯಂತ ಸರಳ ಸಜ್ಜನಿಕೆಯ, ಜನತೆಯ ಪರವಾಗಿ ಧೀಮಂತಿಕೆಯಿಂದ ಆಡಳಿತ ನಡೆಸಿಕೊಂಡು ಬಂದಎಡರಂಗದ ಸರಕಾರದ ಆಡಳಿತ ಕಂಡಿದ್ದ ತ್ರಿಪುರದ ಜನತೆಯು ಇದಕ್ಕೆ ತದ್ವಿರುದ್ಧವಾಗಿ ಬಿಜೆಪಿಯ ಮತ್ತು ಸಂಘಪರಿವಾದ ಧಾಳಿಯಿಂದ ನಲುಗಿ ಹೋಗುತ್ತಿದ್ದಾರೆ. ನಿಷ್ಪಕ್ಷಪಾತವಾದ ಚುನಾವಣೆ ನಡೆದಲ್ಲಿ ಖಂಡಿತ ಖಂಡಿತ ಬಿಜೆಪಿಗೆ ಸೋಲು ಇದೆ. ಜನತೆಯು ನಿಷ್ಪಕ್ಷಪಾತವಾದ ಚುನಾವಣೆ ಬಯಸುತ್ತಾರೆ. ಪ್ರಜಾಪ್ರಭುತ್ವ ಮತ್ತೆ ಅಲ್ಲಿ ಕಾಲೂರಬೇಕೆಂಬುದು ಜನರ ಬಯಕೆಯಾಗಿದೆ. ಬಿಜೆಪಿಯ ದುರಾಡಳಿತದಿಂದ ಶಾಂತ ಮತ್ತು ಸೌಹಾರ್ದ ತ್ರಿಪುರವು ಗಾಯಗೊಂಡಿದೆ. ಈಗ ಅದಕ್ಕೆ ಪ್ರಜಾಸತ್ತಾತ್ಮಕ ಪ್ರಕ್ರಿಯೆ ಬಲಿಷ್ಠಗೊಳಿಸುವ ಮುಲಾಮು ಅಗತ್ಯವಿದೆ. ಆದ್ದರಿಂದ ಭಾರತದ ಜನತೆಯು ತ್ರಿಪುರದಲ್ಲಿ ಮತ್ತೆ ಶಾಂತಿ, ಸುವ್ಯವಸ್ಥೆ, ಪ್ರಜಾಪ್ರಭುತ್ವ, ಸೌಹಾರ್ದತೆ, ನೆಮ್ಮದಿ ಬರಲೆಂಬ ಬದ್ಧತಾಪೂರ್ಣ ಇಚ್ಛೆ ತೋರಬೇಕಿದೆ. ಭಾರತದ ಪ್ರಜೆಗಳಾದ ನಾವು ದೇಶವನ್ನು ಆರ್ಥಿಕ ಸಮೃದ್ಧಿ, ಸೌಹಾರ್ದತೆಯ ಬಹು ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆಯೊಂದಿಗೆ ಗಟ್ಟಿಗೊಳಿಸಲು ಐಕ್ಯತೆಯಿಂದ ಮುನ್ನಡೆಯಬೇಕಿದೆ. ಆದ್ದರಿಂದ ತ್ರಿಪುರದಲ್ಲಿ ನಿಷ್ಪಕ್ಷಪಾತವಾದಚುನಾವಣೆ ನಡೆಯಬೇಕೆಂದು, ಭಯೋತ್ಪಾದನಾ, ಬೂತ್ ವಶಪಡಿಸಿಕೊಳ್ಳುವುದನ್ನು ತಡೆಯಬೇಕೆಂದು, ಹಲ್ಲೆ ದೊಂಬಿಗಳು ನಡೆಯಬಾರದೆಂದು ಮತ್ತು ಜನತೆಯು ಧೈರ್ಯದಿಂದ ತಮ್ಮ ಮತದಾನದ ಹಕ್ಕನ್ನು ಜಾರಿಗೊಳಿಸಲು ಶಾಂತ ವಾತಾವರಣ ಸೃಷ್ಟಿಸಬೇಕೆಂದು ಒಕ್ಕೊರಲಿನಿಂದ ಆಗ್ರಹಿಸೋಣ.



ಮಂಡ್ಯದಿಂದ ಬೆಂಗಳೂರಿಗೆ ಕೃಷಿ ಕೂಲಿಕಾರರ ಪಾದಯಾತ್ರೆ

ಸಿದ್ದಯ್ಯ ಸಿ.

ಕೃಷಿ ಕೂಲಿಕಾರರಿಗೆ ಕಲ್ಯಾಣ ಮಂಡಳಿ, ನರೇಗಾ ಯೋಜನೆಯ ಮೂಲಕ 200 ದಿನಗಳ ಕೆಲಸ ಮತ್ತು 600 ರೂ ಕೂಲಿ, ಭಾಗ್ಯಜ್ಯೋತಿ, ಕುಟೀರ ಜ್ಯೋತಿ ಫಲಾನುಭವಿಗಳಿಗೆ 100 ಯೂನಿಟ್ ಉಚಿತ ವಿದ್ಯುತ್, ಸರ್ಕಾರಿ ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುವ ರೈತರಿಗೆ ಆರ್‌ಟಿಸಿ ನೀಡಬೇಕು ಎಂಬ ಬೇಡಿಕೆಗಳೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಇಟ್ಟು, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ನೇತೃತ್ವದಲ್ಲಿ ಮಂಡ್ಯ ಜಿಲ್ಲೆಯಿಂದ ಬೆಂಗಳೂರಿಗೆ ಪಾದಯಾತ್ರ ನಡೆಸಲಾಯಿತು. ಫೆಬ್ರವರಿ 6 ರಂದು ಪ್ರಾಂಭವಾದ ಪಾದಯಾತ್ರೆ 8ರಂದು ಬೆಂಗಳೂರಿನ ಸ್ವಾತ್ಯಂತ್ರ್ಯ ಉದ್ಯಾನವನದಲ್ಲಿ ಬಂದು ಸೇರಿತು. ಜಿಲ್ಲೆಯ ಮದ್ದೂರಿನ ಶಿವಪುರದಲ್ಲಿರುವ 'ಧ್ವಜ ಸತ್ಯಾಗ್ರಹ ಸೌಧ' ದಿಂದ ಕೃಷಿ ಕೂಲಿಕಾರರ ಪಾದಯಾತ್ರೆ ಪ್ರಾರಂಭವಾಯಿತು. ಪಾದಯಾತ್ರೆ ನಡೆಸಲು ಮಂಡ್ಯ ಜಿಲ್ಲೆಯ ಪೋಲೀಸರು ಮೊದಲಿಗೆ ಅನುಮತಿ ನಿರಾಕರಿಸಿದರು. ರಾಷ್ಟ್ರೀಯ ಹೆದ್ದಾರಿ ಮೈಸೂರು ರಸ್ತೆಯಲ್ಲಿ ವಾಹನ ಸಂಚಾರ ಅಧಿಕವಾಗಿರುವುದರಿಂದ, ಪಾದಯಾತ್ರೆಯಿಂದ ಸಂಚಾರಕ್ಕೆ ಅಡಚಣೆಯಾಗುತ್ತದೆ ಎಂಬ ಕಾರಣವನ್ನು ಪೋಲೀಸರು ಕೊಟ್ಟರು. 'ಪೋಲೀಸರ ಈ ಕ್ರಮ ಸಂವಿಧಾನ ವಿರೋಧಿ ಮತ್ತು ಹೋರಾಟದ ಹಕ್ಕುಗಳನ್ನು ಕಸಿಯುವ ಪ್ರಯತ್ನ ಇದಾಗಿದೆ' ಎಂದು ಪ್ರತಪಾದಿಸಿದ ಸಂಘದ ಮುಖಂಡರು ಪೋಲೀಸರ ಮೇಲೆ ಒಟ್ಟಡ ತಂದು ಪಾದಯಾತ್ರೆಗೆ ಅನುಮತಿ ಪಡೆಯುವುವಲ್ಲಿ ಯಶಸ್ವಿಯದರು.

ಫೆಬ್ರವರಿ 8 ರಂದು ಬೆಂಗಳೂರಿನ ಹೊರವಲಯ ಕೆಂಗೇರಿ ಬಳಿ ಪಾದಯಾತ್ರೆ ತಲುಪಿದಾಗ ಅಲ್ಲಿಂದ ಮುಂದಕ್ಕೆ ನಗರದ ಒಳಗೆ ಪಾದಯಾತ್ರೆ ನಡೆಸಲು ಪೋಲೀಸರು ಅವಕಾಶ ನೀಡಲಿಲ್ಲ. ಹೈಕೋರ್ಟ್ ಆದೇಶದ ಮೇರೆಗೆ ಬೆಂಗಳೂರಿನ ಫ್ರೀಡಂ ಪಾರ್ಕ್ ಹೊರತು ಪಡಿಸಿ ನಗರದ ಯಾವುದೇ ಪ್ರದೇಶದಲ್ಲಿ ಮೆರವಣಿಗೆ, ಪ್ರತಿಭಟನೆ, ಧರಣಿ, ರಸ್ತೆ ತಡೆ ಮಾಡುವಂತ್ತಿಲ್ಲ. ಈ ಕಾರಣ ನೀಡಿದ ಪೋಲೀಸರು ತಾವೇ ಬಸ್ಸುಗಳ ಮೂಲಕ ಪಾದಯಾತ್ರಿಗಳನ್ನು ಪ್ರತಿಭಟನಾ ಸ್ಥಳವಾದ ಫ್ರೀಡಂ ಪಾರ್ಕ್ ಗೆ ಕರೆದೊಯ್ದರು.

ಪ್ರತಿಭಟನಾ ಸ್ಥಳದಲ್ಲಿ ರಾಜ್ಯದ ಹಲವು ಜಿಲ್ಲೆಗಳಿಂದ ಬಂದಿದ್ದ ಕೃಷಿ ಕೂಲಿಕಾರರು ಜಮಾಯಿಸಿದ್ದರು. ಒಂದು ಸಾವಿರಕ್ಕೂ ಹೆಚ್ಚು ಜನರು ಸೇರಿದ್ದರು. ಸುಡುವ ಬಿಸಿಲಿನಲ್ಲೂ ಮುಖಂಡರ ಭಾಷಣಗಳನ್ನು ಆಲಿಸುತ್ತ ಕುಳಿತಿದ್ದರು.

ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘದ ರಾಷ್ಟ್ರೀಯ ಕಾರ್ಯದರ್ಶಿ ಬಿ. ವೆಂಕಟ್ ಅವರು ಮಾತನಾಡುತ್ತ, ಮಂಡ್ಯದಿಂದ ಪಾದಯಾತ್ರೆ ಮೂಲಕ ಬಂದವರನ್ನು ಕುರಿತು ಪ್ರಶಂಸೆ ವ್ಯಕ್ತಪಡಿಸಿದರು. 'ಈ ಪಾದಯಾತ್ರೆಯಲ್ಲಿ 200 ಮಹಿಳೆಯರೂ ಹೆಜ್ಜೆ ಹಾಕಿರುವುದು ಇತರ ಹೋರಾಟಗಾರರಿಗೆ ಸ್ಫೂರ್ಥಿದಾಯಕವಾಗಿದೆ. ಮುಂದೆ ನಡೆಯುವ ಕೃಷಿ ಕೂಲಿಕಾರರ ಅಖಿಲ ಭಾರತ ಸಮ್ಮೇಳನದಲ್ಲಿ ಈ ಪಾದಯಾತ್ರೆಯ ಬಗ್ಗೆ ಸಮ್ಮೇಳನಕ್ಕೆ ತಿಳಿಸುತ್ತೇನೆ. ಇದನ್ನು ದೇಶಕ್ಕೆ ಒಂದು ಮಾದರಿಯಾಗಿ ತೆಗೆದುಕೊಳ್ಳುತ್ತೇವೆ' ಎಂದಾಗ ನೆರೆದಿದ್ದವರು ಕರತಾಡನದ ಮೂಲಕ ಸಂಭ್ರಮ ವ್ಯಕ್ತಪಡಿಸಿದರು.

ಸಂಘದ ರಾಜ್ಯಾಧ್ಯಕ್ಷರಾದ ಪುಟ್ಟಮಾದು ಅವರು ಮಾತನಾಡಿ, 'ಸರ್ಕಾರ ವಿದ್ಯುತ್ ವಲಯವನ್ನು ಖಾಸಗೀಕರಣ ಮಾಡಲು ಹೊರಟಿದೆ. ಈ ಮೂಲಕ ಗ್ರಾಮೀಣ ಪ್ರದೇಶದ ಬಡಜನರು ಬಳಕೆಮಾಡುವ ವಿದ್ಯತ್ ಗೆ ಹಣ ಕೊಡಬೇಕಾದ ಪರಿಸ್ಥಿಯನ್ನು ತರಲು ಸರ್ಕಾರ ಮುಂದಾಗಿದೆ. ಸರ್ಕಾರದ ಈ ನೀತಿ ಸರಿಯಲ್ಲ. ಭಾಗ್ಯ ಜ್ಯೋತಿ, ಕುಠೀರ ಜ್ಯೋತಿ ಫಲಾನುಭವಿಗಳಿಗೆ 100 ಯೂನಿಟ್ ವರಗೆ ಉಚಿತ ವಿದ್ಯತ್ ಕೊಡಬೇಕು. ಕೃಷಿ ಪಂಪ್ ಸೆಟ್ ಗಳಿಗೆ ಬಳಕೆ ಮಾಡುವ ವಿದ್ಯುತ್ ಗೆ ಮೀಟರ್ ಅಳವಡಿಕೆ ಪ್ರಸ್ತಾಪ ಕೈ ಬಿಡಬೇಕು. ಇವುಗಳಿಗೆ ಉಚಿತ ವಿದ್ಯುತ್ ನೀಡಬೇಕು' ಎಂದರು.

ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೆರಾ ಮಾತನಾಡಿ, ನಾಲ್ಕು ದಶಕಗಳಿಂದ ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ನೀಡದೆ ವಂಚಿಸುತ್ತಾ ಬಂದಿದ್ದು, ಅವರನ್ನೆಲ್ಲ ಒಕ್ಕಲೆಬ್ಬಿಸಲು ಸರ್ಕಾರ ಪ್ರಯತ್ನ ಮಾಡುತ್ತಿದೆ. ಇದನ್ನು ನಾವು ಕಂಡಿಸುತ್ತೇವೆ. ಜನವಿರೋಧಿ, ಕಾರ್ಮಿಕ ವಿರೋಧಿ ನೀತಿಗಳನ್ನು ತಂದು ಬಂಡವಾಳಶಾಹಿಗಳನ್ನು ಸತ್ಕರಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮುಂದಾಗಿವೆ ಎಂದು ಟೀಕಿಸಿದ ಅವರು, ಈ ಸರ್ಕಾರಗಳನ್ನು ಕಿತ್ತೊಗೆಯಲು ಪಣತೊಡೋಣ ಎಂದರು.

ಜನವಾದಿ ಪುಟ 10 ಕ್ಕೆ





ರಾಜ್ಯದಲ್ಲಿ ಶೇ. 20 ರಷ್ಟು ಕೃಷಿ ಕೂಲಿಕಾರರು: ಇವರಿಗಿಲ್ಲ ವಿಶೇಷ ಸವಲತ್ತು:

ಕೃಷಿ ಕೂಲಿಕಾರರಿಗೆ ಇರುವ ಆಸ್ತಿಯೆಂದರೆ ಅವರ ರಟ್ಟೆಯ ಬಲ ಮಾತ್ರ. ಇದನ್ನು ಬಿಟ್ಟು ಬೇರೇನೂ ಆಸ್ತಿ ಅವರ ಬಳಿ ಇರುವುದಿಲ್ಲ. ಕೃಷಿ ಕೆಲಸ ಇಲ್ಲದಿದ್ದರೆ ಇವರಿಗೆ ಕೆಲಸವೂ ಇಲ್ಲ, ಕೂಲಿಯೂ ಇಲ್ಲ. 2001ರ ಜನಗಣತಿಯ ಅಂಕಿ ಅಂಶಗಳ ಪ್ರಕಾರ ರಾಜ್ಯದಲ್ಲಿ ಕೃಷಿ ಕೂಲಿಕಾರರ ಸಂಖ್ಯೆ 62 ಲಕ್ಷ. 2011ರಲ್ಲಿ 72 ಲಕ್ಷ. ಆದರೆ, ವಾಸ್ತವದಲ್ಲಿ ಇಂದು ಈ ಸಂಖ್ಯೆ ಒಂದು ಕೋಟಿ ದಾಟಿದೆ. ಇದು ರಾಜ್ಯದ ಜನಸಂಖ್ಯೆಯ ಶೇ. 20 ರಷ್ಟಾಗುತ್ತದೆ. ಕೃಷಿಕೂಲಿಕಾರರಲ್ಲಿ ದಲಿತರು, ಹಿಂದುಳಿದ ಜಾತಿ ಜನಾಂಗದವರು ಮತ್ತು ಅಲ್ಪಸಂಖ್ಯಾತರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಇಷ್ಟು ದೊಡ್ಡ ಸಂಖ್ಯೆಯಲ್ಲಿರುವ ಕೃಷಿ ಕೂಲಿಕಾರರನ್ನು ಸರ್ಕಾರ ಸದಾ ಕಡೆಗಳಿಣಿಸುತ್ತಾ ಬಂದಿವೆ.

ರಾಜ್ಯದ ಜನಸಂಖ್ಯೆಯ ಶೇ. 20ರಷ್ಟಿರುವ ಕೃಷಿ ಕೂಲಿಕಾರರು ಮತ್ತು ಗ್ರಾಮೀಣ ಕೆಲಗಾರರ ಸಾಮಾಜಿಕ ಭದ್ರತೆಗಾಗಿ ಸರಕಾರದಿಂದ ಯಾವುದೇ ಯೋಜನೆಗಳು ರೂಪುಗೊಂಡಿಲ್ಲ. ಇವರಿಗೆ ಒಂದು ನಿರ್ಧಿಷ್ಠ ದಿನಗಳ ಕೆಲಸದ ಖಾತರಿ ಇಲ್ಲ. ಜೀವನಕ್ಕೆ ಅವಶ್ಯಕವಾದ ಕನಿಷ್ಠ ವೇತನ ಇಲ್ಲ. ಬಹುತೇಕರಿಗೆ ವಾಸಿಸಲು ಸ್ವಂತ ಮನೆ ಇಲ್ಲ. ಸಮರ್ಪಕ ಪಡಿತರ ವ್ಯವಸ್ಥೆ ಇಲ್ಲ. ರಟ್ಟೆಯ ಬಲ ಕ್ಷೀಣವಾದ ನಂತರದ ಬದುಕಿಗೆ ಆಸರೆಯಾಲು ಬೇಕಾದ ನಿವೃತ್ತಿ ವೇತನ ಇಲ್ಲ. ಭವಿಷ್ಯ ನಿಧಿ ಇಲ್ಲ, ಆರೋಗ್ಯ ಸೇವೆ ಇಲ್ಲ. ಇಂತಹ ಕನಿಷ್ಟ ಮೂಲಭೂತ ಅವಶ್ಯಕತೆಗಳನ್ನು ಖಚಿತಪಡಿಸುವ ಯಾವುದೇ ಕಾನೂನುಗಳು, ಯೋಜನೆಗಳು ಕರ್ನಾಟಕ ರಾಜ್ಯದಲ್ಲಿ ಇಲ್ಲ. ಇವರು ಉಳುಮೆ ಮಾಡುತ್ತಾರಾದರೂ ಬಹುತೇಕ ಕೃಷಿ ಕೂಲಿಕಾರರಿಗೆ ತಮ್ಮದೆಂಬ ಸ್ವಂತ ಕೃಷಿ ಭೂಮಿ ಇಲ್ಲ. ಇವರ ಮಕ್ಕಳ ಶಿಕ್ಷಣಕ್ಕೆ ಸರ್ಕಾರದಿಂದ ವಿಷೇಶ ಕಾಳಜಿ ಇಲ್ಲ. ವರ್ಷಕ್ಕೆ ನೂರು ದಿನಗಳ ಕೆಲಸ ಕೊಡಲು ರೂಪಿಸಲಾಗಿರುವ ನರೇಗಾ ಯೋಜನೆಯಲ್ಲಿ ತಮ್ಮ ಹಕ್ಕುಗಳಂತೆ ಕೆಲಸ ಪಡೆಯಲು ಸಾಧ್ಯವಾಗುತ್ತಿಲ್ಲ. ಈ ಯೋಜನೆಯಲ್ಲಿ ಮಾಡಿದ ಕೆಲಸಕ್ಕೆ ಸಿಗುವ ಕೂಲಿಯೂ ಕಡಿಮೆ.

ಹೆಚ್ಚು ಭಾದೆಗೆ ಒಳಗಾಗುವವರು ಕೃಷಿ ಕೂಲಿಕಾರರು:

ಭೀಕರ ಬರಗಾಲ ಬಂತೆಂದರೆ ಹೆಚ್ಚು ಭಾದೆಗೆ ಒಳಗಾಗುವವರು ಕೃಷಿ ಕೂಲಿಕಾರರು. ಪ್ರವಾಹ ಬಂತೆಂದರೆ, ಸಾಂಕ್ರಾಮಿಕ ರೋಗ ಬಂತೆಂದರೆ ಅತಿ ಹೆಚ್ಚು ಸಂಕಷ್ಟಗಳಿಗೆ ಸಿಲುಕುವವರು ಇವರೇ. ಇಂತಹ ಸಂದರ್ಭಗಳಲ್ಲಿ ಇವರಿಗೆ ಕೂಲಿ ಸಿಗುವುದಿಲ್ಲ. ತಿನ್ನಲು ಮನೆಯಲ್ಲಿ ಆಹಾರ ಪದಾರ್ಥಗಳ ದಾಸ್ತಾನು ಇರುವುದಿಲ್ಲ. ಇಂತಹ ಸಂದರ್ಭಗಳಲ್ಲೆಲ್ಲಾ ಇವರ ಕುಟುಂಬಕ್ಕೆ ಅರೆ ಹೊಟ್ಟೆಯ ಗಂಜಿ/ರೊಟ್ಟಿಯೇ ಗತಿ. ಇದರಿಂದ ಬಹಳಷ್ಟು ಕೂಲಿಕಾರರು ಇಂದು ಅಪೌಷ್ಠಿಕತೆಯಿಂದ ನರಳುವಂತಾಗಿದೆ.

ಸರ್ಕಾರ ವರ್ಷಕ್ಕೊಮ್ಮೆ ಬಜೆಟ್ ಮಂಡಿಸುತ್ತದೆ. ಈ ಬಜೆಟ್ ಗಳಲ್ಲಿ ಇಷ್ಟು ದೊಡ್ಡ ಸಂಖ್ಯೆಯಲ್ಲಿರುವ ಕೃಷಿ ಕೂಲಿಕಾರರ ಪ್ರಸ್ತಾಪವೇ ಇರುವುದಿಲ್ಲ ಎಂಬುದೊಂದು ಆಶ್ಚರ್ಯಕರವಾದ, ಮತ್ತು ಅಷ್ಟೇ ಸತ್ಯವಾದ ವಿಷಯವಾಗಿದೆ. ಪ್ರತಿ ವರ್ಷ ಬಜೆಟ್ ಮಂಡನೆಗೂ ಮುನ್ನ ಸರ್ಕಾರ ಕೈಗಾರಿಕೋಧ್ಯಮಿಗಳು ಮತ್ತು ವಿವಿಧ ಕ್ಷೇತ್ರಗಳ ಪ್ರತಿನಿಧಿಗಳ ಜೊತೆ ಸಮಾಲೋಚನಾ ಸಭೆ ನಡೆಸುತ್ತದೆ. ಈ ಸಭೆಗೆ ಕೃಷಿ ಕೂಲಿಕಾರರ ಸಂಘಗಳ ಪ್ರತಿನಿಧಿಗಳನ್ನು ಕರೆದು, ಅವರ ಬೇಕು ಬೇಡಗಳ ಕುರಿತು ಚರ್ಚಿಸುವ ಪರಿಪಾಠವೇ ಸರಕಾರಕ್ಕೆ ಇಲ್ಲ. ಸರ್ಕಾರ ಕೃಷಿ ಕೂಲಿಕಾರರನ್ನು ಹೇಗೆ ಕಡೆಗಣಿಸಿದೆ ಎಂಬುದಕ್ಕೆ ಒಂದು ಉದಾಹರಣೆ.

ಇವರಿಗೆ ಕಲ್ಯಾಣ ಮಂಡಳಿಯೂ ಇಲ್ಲ:

ರಾಜ್ಯದಲ್ಲಿ ಮರಗಿಡಗಳಿಗೆ, ಪ್ರಾಣಿ ಪಕ್ಷಿಗಳಿಗೆ ರಕ್ಷಣೆ ಒದಗಿಸುವ ಕಾನೂನುಗಳಿವೆ. ಆದರೆ, ಕೃಷಿ ಕೂಲಿಕಾರರ ರಕ್ಷಣೆಗೆ ಅಗತ್ಯವಾದ ಕಾನೂನುಗಳಿಲ್ಲ. ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಕಲ್ಯಾಣ ಮಂಡಳಿ ಇದೆ. ಬೀಡಿ ಕಾರ್ಮಿಕರು, ಹಮಾಲಿ ಕಾರ್ಮಿಕರು, ತೋಟ ಕಾರ್ಮಿಕರು ಇವರಿಗೆ ಕಲ್ಯಾಣ ಮಂಡಳಿಗಳಿವೆ. ಈ ಮಂಡಳಿಗಳಿಂದ ಈ ಕಾರ್ಮಿಕರಿಗೆ ಒಂದಷ್ಟು ಸಾಮಾಜಿಕ ಭದ್ರತೆ ಹೊದಗಿಸಲು ಅನುಕೂಲವಾಗಿದೆ. ಇಂತಹ ಕಲ್ಯಾಣ ಮಂಡಳಿ ಕೃಷಿ ಕೂಲಿಕಾರರಿಗೆ ಇಲ್ಲ.

ಕಲ್ಯಾಣ ಮಂಡಳಿ ಎಂದರೇನು:

ಒಂದು ನಿರ್ಧಿಷ್ಟ ಕ್ಷೇತ್ರದಲ್ಲಿ ದುಡಿಯುವ ಕಾರ್ಮಿಕರ ಹಿತದೃಷ್ಟಿಯನ್ನು ಧ್ಯೇಯವಾಗಿಸಿಕೊಂಡು ನಿರ್ಮಾಣ ಮಾಡುವ ಒಂದು ಕಲ್ಯಾಣ ಮಂಡಳಿ. ಈ ಮಂಡಳಿಯ ಮೂಲಕ ಕಾರ್ಮಿಕರ ಆರೋಗ್ಯ, ಮಕ್ಕಳ ಶಿಕ್ಷಣ, ಪಿಂಚಣಿ, ಸಾಮಾಜಿಕ ಸುರಕ್ಷತೆ ಮತ್ತು ಇತರೆ ಸೌಲಭ್ಯಗಳನ್ನು ನೀಡಲಾಗುತ್ತದೆ.

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯನ್ನು ಉದಾಹರಣೆಗೆ ತೆಗೆದುಕೊಳ್ಳುವುದಾದರೆ. ಮಂಡಳಿಯಲ್ಲಿ ನೊಂದಾಯಿತರಾದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಆರೋಗ್ಯ ರಕ್ಷಣೆಗಾಗಿ ಆಸ್ಪತ್ರೆಗಳಿಗೆ ಮಾಡುವ ವೆಚ್ಚದ ನಿಗದಿತ ಪಾಲನ್ನು ಮಂಡಳಿ ಕೊಡುತ್ತದೆ. ಇಬ್ಬರು ಮಕ್ಕಳ ಪೂರ್ವ ಶಿಕ್ಷಣದಿಂದ, ಗರಿಷ್ಠ ಶಿಕ್ಷಣದ ವರೆಗೂ ಪ್ರತಿ ವರ್ಷವೂ ಶಿಷ್ಯ ವೇತನ (ರೂ. 5,000, 50,000 ದವರೆಗೂ, ಕೆಲವೊಂದು ವಿಷಯದಲ್ಲಿ ಇದಕ್ಕೂ ಮೇಲ್ಪಟ್ಟು) ದಿಂದ ಕೊಡಲಾಗುತ್ತದೆ. ಇಬ್ಬರು ಮಕ್ಕಳ ಮದುವೆ ವೆಚ್ಚಕ್ಕೆಂದು 60,000 ರೂ. ಮಹಿಳಾ ಕಾರ್ಮಿಕರಿಗೆ ಹೆರಿಗೆ ಭ್ಯತ್ಯೆ, 60 ವರ್ಷ ತುಂಬಿದ ನಂತರ 3,000 ರೂ ಪಿಂಚಣಿ, ಅವರ ಕೆಲಸಗಳಿಗೆ ಅಗತ್ಯವಿರುವ ತರಬೇತಿ ಮತ್ತು ಪರಿಕರಗಳು, ಯಂತ್ರಗಳು ವಿತರಣೆ, ಕೊರೋನಾದಂತಹ ಸಂಕಷ್ಟ ಕಾಲದಲ್ಲಿ ಆಹಾರ ಧಾನ್ಯಗಳ ವಿತರಣೆ ಮತ್ತು ಆಹಾರದ ಹಂಚಿಕೆ, ಮನೆ ಕಟ್ಟಿಕಿಕೊಳ್ಳಲು 2 ಲಕ್ಷ ನೆರವು (ಇದನ್ನು ಸದ್ಯಕ್ಕೆ ನಿಲ್ಲಿಸಲಾಗಿದೆ), ನಗರ ಪ್ರದೇಶಗಳಲ್ಲಿ ಮತ್ತು ರಾಜ್ಯ ಸಾರಿಗೆ ಬಸ್ಸುಗಳಲ್ಲಿ ನಿರ್ಧಿಷ್ಠ ದೂರದ ವರೆಗೆ ಉಚಿತ ಬಸ್ ಪ್ರಯಾಣದ ಸೌಲಭ್ಯವಿದೆ.

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಯೋಜನೆಯೂ ಕೇಂದ್ರದಲ್ಲಿ ಎಡಪಕ್ಷಗಳ ಬೆಂಬಲ ಪಡೆದಿದ್ದ ದೇವೇಗೌಡರ ಆಡಳಿತದ ಅವಧಿಯಲ್ಲಿ ಎಂಬುದನ್ನು ಮರೆಯಬಾರದು. ಈ ಯೋಜನೆಗೆ ಕಟ್ಟಡಗಳು, ಸೇತುವೆಗಳು, ಅಪಾರ್ಟ್ ಮೆಂಟ್ ಗಳು, ಕಮರ್ಷಿಯಲ್ ಬಿಲ್ಡಿಂಗ್ ಗಳು ಇವುಗಳ ನಿರ್ಮಾನದ ಸಂದರ್ಭದಲ್ಲಿ, ಇವುಗಳಿಗೆ ತಗುಲುವ ವೆಚ್ಚದ ಶೇ. ಒಂದರಷ್ಟು ಹಣವನ್ನು ಸೆಸ್ ರೂಪದಲ್ಲಿ ಈ ಕಲ್ಯಾಣ ಮಂಡಳಿಗೆ ಸಂಗ್ರಹ ಮಾಡಲಾಗುತ್ತದೆ. ಇದೇ ಹಣದ ಮೂಲಕ ಕಾರ್ಮಿಕರ ಸಾಮಾಜಿಕ ಭದ್ರತೆಗೆ ಬಳಸಿಕೊಳ್ಳಲಾಗುತ್ತದೆ. ಕರ್ನಾಟಕ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ಒಂದರಲ್ಲೇ ಈ ಮೊತ್ತ 10 ಸಾವಿರ ಕೋಟಿ ಇದೆ.

ಕೃಷಿ ಕೂಲಿಕಾರರ ಕಲ್ಯಾಣ ಮಂಡಳಿ ಸ್ಥಾಪನೆ ಮಾಡಿದರೆ ಇದಕ್ಕೆ ನಿಧಿ ಎಲ್ಲಿಂದ ಬರುತ್ತದೆ ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಇದಕ್ಕೆ ಸರ್ಕಾರವೇ ತನ್ನ ಬಜೆಟ್ ಮೂಲಕ ಹಣ ತೆಗೆದಿಡಬೇಕು. ಕೃಷಿ ಕೂಲಿಕಾರರಿಗೆ ಸಾಮಾಜಿಕ ಭದ್ರತೆ ಒದಗಿಸಲು ಕಲ್ಯಾಣ ಮಂಡಳಿ ಸ್ಥಾಪನೆ ಮಾಡಿ, ಈ ವರ್ಷದ ಬಜೆಟ್ ನಲ್ಲಿ ಇದಕ್ಕೆಂದೇ 1,000 ಕೋಟಿ ರೂ. ಹಣ ಮೀಸಲಿಡಬೇಕು ಎಂಬುದು ಸಂಘದ ಬೇಡಿಕೆ. ತಾವು ಕಟ್ಟುವ ಅಪರೋಕ್ಷ ತೆರಿಗೆಯ ಅಲ್ಪ ಪಾಲನ್ನಷ್ಟೇ ಇವರು ಕೇಳುತ್ತಿದ್ದಾರೆ.

ಮಂಡ್ಯದಿಂದ ಬೆಂಗಳೂರಿಗೆ ಕೃಷಿ ಕೂಲಿಕಾರರ ಪಾದಯಾತ್ರೆ

ಪುಟ 9 ರಿಂದ

ಮಹಿಳಾ ಸಂಘಟನೆಯ ರಾಜ್ಯ ಮುಖಂಡರಾದ ದೇವಿ ಮಾತನಾಡಿ, ನರೇಗಾ ಮೂಲಕ ಕೆಲಸ ಮಾಡುವವರು ಆನ್ ಲೈನ್ ಮೂಲಕ ಹಾಜರಾತಿ ದಾಖಲಿಸುವ ನಿಯಮ ಸರಿಯಲ್ಲ. ಕಂಪ್ಯೂಟರ್ ನಲ್ಲಿ ಹೆಬ್ಬೆಟ್ಟಿನ(ಥಮ್ಸ್) ಗುರುತು ನೀಡುವ ಮೂಲಕ ಹಾಜರಾತಿ ಪಡೆಯುವ ಪದ್ಧತಿಯೂ ಸರಿಯಲ್ಲ. ಗ್ರಾಮೀಣ ಪ್ರದೇಶದಲ್ಲಿ ಸಮರ್ಪಕ ನೆಟ್ ವರ್ಕ್ ಇರುವುದಿಲ್ಲ. ಕೆಲಸ ಮಾಡಿಯೂ ನೆಟ್ ವರ್ಕ್ ಇಲ್ಲದ ಕಾರಣ ಹಾಜರಾತಿ ಖಾತರಿ ಪಡಿಸಲಾಗದ ಸ್ಥಿತಿ ಇದೆ. ಈ ಪದ್ಧತಿಯನ್ನು ಕೈಬಿಡಬೇಕು, ಎಂದು ಒತ್ತಾಯಿಸಿದರು.

ಪ್ರಾಂತ ಕೃಷಿ ಕೂಲಿಕಾರರ ಸಂಘದ ಹಿರಿಯ ಮುಖಂಡರಾದ ಜಿ.ಎನ್. ನಾಗರಾಜ್ ಹಾಗೂ ನಿತ್ಯಾನಂದಸ್ವಾಮಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ದಲಿತ ಹಕ್ಕುಗಳ ಸಮಿತಿಯ ರಾಜ್ಯ ಮುಖಂಡರಾದ ಗೋಪಾಲ ಕೃಷ್ಣ ಹರಳಹಳ್ಳಿ, ಸಿಐಟಿಯು ಬೆಂಗಳೂರು ಉತ್ತರ ಜಿಲ್ಲೆಯ ಕಾರ್ಯದರ್ಶಿ ಪ್ರತಾಪ್ ಸಿಂಹ, ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾದ ಜಿ.ಸಿ. ಬಯ್ಯಾರೆಡ್ಡಿ ಮುಂತಾದವರು ಹೋರಾಟವನ್ನು ಬೆಂಬಲಿಸಿ ಮಾತನಾಡಿದರು.

ಸರ್ಕಾರದ ಕಾರ್ಮಿಕ ಇಲಾಖೆ, ಕಂದಾಯ ಇಲಾಖೆ ಮತ್ತು ಗ್ರಾಮೀಣ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಪ್ರತಿಭಟನಾ ಸ್ಥಳಕ್ಕೆ ಬಂದು ಮನವಿ ಪತ್ರ ಸ್ವೀಕರಿಸಿದರು.

ಬೇಡಿಕೆ ಪಟ್ಟಿಯಲ್ಲಿ ಇರುವ ಅಂಶಗಳು: ಕೃಷಿ ಕೂಲಿಕಾರರಿಗೆ ಮತ್ತು ಗ್ರಾಮೀಣ ಕಾರ್ಮಿಕರಿಗೆ ಕಲ್ಯಾಣ ಮಂಡಳಿ ಸ್ಥಾಪನೆ, ಕೇರಳ, ತಮಿಳುನಾಡು ಮಾದರಿಯಲ್ಲಿ ಕನಿಷ್ಠ ವೇತನ, ತುಟ್ಟಿ ಭತ್ತೆ, ಭವಿಷ್ಯನಿಧಿ, ಇಎಸ್ ಐ, ಪಿಂಚಣಿ ಮುಂತಾದ ಸೌಲಭ್ಯಗಳನ್ನು ಖಾತರಿ ಪಡಿಸುವ ಸಮಗ್ರ ಶಾಸನ ರೂಪಿಸಬೇಕು. ಅತಿವೃಷ್ಟಿಯಿಂದ ನಷ್ಟ ಅನುಭವಿಸಿದ ಮತ್ತು ಕೊರೋನಾ ಹಾವಳಿಗೆ ಬಲಿಯಾದ ರೈತರು ಮತ್ತು ಕೃಷಿ ಕೂಲಿಕಾರರ ಕುಟುಂಬಗಳಿಗೆ ಪರಿಹಾರ ವಿತರಿಸಬೇಕು. ವಸತಿ ರಹಿತ ಕೂಲಿಕಾರರಿಗೆ ಉಚಿತ ನಿವೇಸನ ಮತ್ತು ಮನೆ ಕಟ್ಟಿಕೊಳ್ಳಲು 10 ಲಕ್ಷ ರೂ ನೀಡಬೇಕು. ಸರ್ಕಾರಿ ಭೂಮಿ ಸಾಗುವಳಿ ಮಾಡುತ್ತಿರುವ ಕೂಲಿಕಾರರನ್ನು ಒಕ್ಕಲೆಬ್ಬಿಸಬಾರದು ಮತ್ತು ತಲಾ ನಾಲ್ಕು ಎಕರೆಯಂತೆ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಿ ಸಾಗುವಳಿ ಚೀಟಿ ಕೊಡಬೇಕು. ಕೇರಳ ಮಾದರಿಯಲ್ಲಿ ಕೂಲಿಕಾರರಿಗೆ ಸಬ್ಸಿಡಿ ಸಹಿತ ಬ್ಯಾಂಕ್ ಸಾಲ ನೀಡಬೇಕು. 60 ವರ್ಷ ವಯಸ್ಸಾದವರಿಗೆ ಮಾಸಿಕ 5,000 ನಿವೃತ್ತಿ ವೇತನ,ಅಸ್ಪ್ರಶ್ಯತೆ ಆಚರಿಸುವವರ ವಿರುದ್ಧ ಪೋಲೀಸರು ಸ್ವಯಂ ಪ್ರಕರಣ ದಾಖಲು ಮಾಡಬೇಕು. ವ್ಯವಸಾಯ ಮಾಡಲು ಆಶಕ್ತಿ ಹೊಂದಿರುವ ದಲಿತ ಕುಟುಂಬಗಳಿಗೆ ಮತ್ತು ದೇವದಾಸಿ ಮಹಿಳೆಯರಿಗೆ ಕನಿಷ್ಠ 2 ಎಕರೆ ಕೃಷಿ ಭೂಮಿ ನೀಡಬೇಕು ಎಂಬ ಬೇಡಿಕೆಗಳಿದ್ದವು.

ಬೆಂಗಳೂರಿನ ಸಿಐಟಿಯು ಸಂಯೋಜಿತ ಕಾರ್ಮಿಕ ಸಂಘಟನೆ ಪ್ರತಿಭಟನಾಕಾರರಿಗೆ ಮಧ್ಯಾಹ್ನದ ಊಟ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದರು. ●



ಗುಳೆ ಹೋದವರ ಸ್ಥಿತಿ ಚಿಂತಾಜನಕ:

ಸರ್ಕಾರಗಳ ಕೃಷಿ ನೀತಿಗಳಿಂದಾಗಿ ಗ್ರಾಮೀಣ ಪ್ರದೇಶದಲ್ಲಿ ಕೃಷಿ ಕೂಲಿಕಾರರಿಗೆ ಕೆಲಸ ಸಿಗದಂತಾಗಿದೆ. ಇವರು ಅನಿವಾರ್ಯವಾಗಿ ಹೊಟ್ಟೆಪಾಡಿಗಾಗಿ ಹಳ್ಳಿಗಳನ್ನು ತೊರೆದು ಮಹಿಳೆಯರು, ಮಕ್ಕಳೊಂದಿಗೆ ನಗರ, ಪಟ್ಟಣಗಳಿಗೆ ಗುಳೆ ಹೋಗುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಕೃಷಿ ಮಾಡಿ ಜೀವನ ನಡೆಸಲಾಗದೆ ಸಣ್ಣ ರೈತರೂ ಸಹ ಕೆಲಸಕ್ಕಾಗಿ ಗುಳೆ ಹೋಗುವುದು ಹೆಚ್ಚಾಗಿದೆ. ಕೃಷಿ ಕೂಲಿಕಾರರು ಇಂದು ನಗರ/ಪಟ್ಟಣಗಳಲ್ಲಿ ಅತೀ ಸಂಕಷ್ಟಗಳನ್ನು ಎದುರಿಸುತ್ತಿರುವ ಅಸಂಘಟಿತ ಕಾರ್ಮಿಕರಾಗಿ ಪರಿವರ್ತಿತರಾಗಿದ್ದಾರೆ. ಇವರು ದಿನನಿತ್ಯ ಹೊಸ ಹೊಸ ಕೂಲಿ ಕೆಲಸಗಳನ್ನು ಹುಡುಕಬೇಕಾಗಿದೆ. ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಪರಿಣಿತಿ ಬಯಸದ ಕೆಲಸಗಳಲ್ಲಿ ಹಲವರು ತೊಡಗಿಸಿಕೊಂಡಿದ್ದಾರೆ. ಇಂತಹ ಕೆಲಸಗಳಲ್ಲಿ ಮಹಿಳೆಯರೂ ತೊಡಗಿಕೊಂಡಿದ್ದಾರೆ. ಇನ್ನು ಕೆಲವು ಪುರುಷರು ಕಂಪನಿಗಳಲ್ಲಿ ಕಾವಲುಗಾರರಾಗಿ, ಶ್ರೀಮಂತರ ಮನೆ ಕಾವಲುಗಾರರಾಗಿ, ಅವರ ವಾಹನಗಳ ಚಾಲಕರಾಗಿ ದುಡಿಯುತ್ತಿದ್ದರೆ, ಮಹಿಳೆಯರು ಸಿರಿವಂತರ ಮನೆ ಕೆಲಸಗಾರರಾಗಿ, ಕಂಪನಿಗಳ ಶುಚಿತ್ವ ಮಾಡುವವರಾಗಿ ದುಡಿಯುತ್ತಿದ್ದಾರೆ. ಮನೆ ಮಂದಿಯೆಲ್ಲಾ ದುಡಿದರೂ ಜೀವನ ನಡೆಸಲಾಗದ ಸ್ಥಿತಿ ಇವರದು.

ನವ–ಉದಾರೀಕರಣ ನೀತಿಗಳನ್ನು ಒಪ್ಪಿಕೊಂಡ ನಂತರದ ದಿನಗಳಲ್ಲಿ ಹಲವು ರಾಜ್ಯಗಳಿಂದಲೂ ನಗರ/ಪಟ್ಟಣಗಳಿಗೆ ವಲಸೆ ಬರತೊಡಗಿದ್ದಾರೆ. ವಲಸೆ ಹೆಚ್ಚಿದಂತೆ ನಿರುದ್ಯೋಗಿಗಳ ಪಡೆ ಬೃಹತ್ತಾಗಿ ಬೆಳೆದು ನಿಂತಿದೆ. ವೇತನ ಎಷ್ಟು ಕಡಿಮೆಯಾದರೂ ಸರಿ, ಕೆಲಸ ಸಿಕ್ಕರೆ ಸಾಕು ಎಂಬ ಸ್ಥಿತಿಗೆ ಕಾರ್ಮಿಕರು ಬಂದಿದ್ದಾರೆ. ಇದು ಕಡಿಮೆ ಕೂಲಿ ಕೊಟ್ಟು, ತಮಗೆ ಇಷ್ಟಬಂದಂತೆ ದುಡಿಸಿಕೊಳ್ಳಲು, ಉದ್ಯಮಿಗಳಿಗೆ ಅನುಕೂಲಕರವಾಗಿದೆ. ಬಂಡವಾಳಗಾರರು ಬಯಸುವುದೂ ಕಾರ್ಮಿಕರ ಮೀಸಲು ಪಡೆಯನ್ನು ಬೆಳೆಸುವುದೇ ಅಲ್ಲವೇ? ಇಲ್ಲಿಯೂ ಕೆಲಸಕ್ಕಾಗಿ ಅಲೆಯುವ ಸ್ಥಿತಿ ನಿರ್ಮಾಣವಾಗಿದೆ. ಈ ಕಾರಣದಿಂದಾಗಿಯೇ ನಗರ/ಪಟ್ಟಣಗಳಲ್ಲೂ ನರೇಗಾ ಯೋಜನೆ ಜಾರಿಗೆ ತರಬೇಕು ಎಂದು ಸಂಘಟನೆಗಳು ಒತ್ತಾಯಿಸುತ್ತಿವೆ.

ಸಣ್ಣ ಸಣ್ಣ ಜೋಪಡಿಗಳಲ್ಲಿ ವಾಸ:

ಈ ರೀತಿ ವಲಸೆ ಹೋದ ಕುಟುಂಬಗಳ ಬದುಕು ಅಸಹನೀಯವಾಗಿದೆ. ನಗರ/ಪಟ್ಟಣಗಳಲ್ಲಿ ದುಬಾರಿ ಮನೆ ಬಾಡಿಗೆ ಕಟ್ಟಲಾಗದೆ, ಬಾಡಿಗೆ ಮನೆಗಳಿಗೆ ಮುಂಗಡ ಹಣ ಕೊಡಲಾಗದೆ, ಖಾಲಿ ಬಿದ್ದಿರುವ ಸರ್ಕಾರಿ ಅಥವಾ ಖಾಸಗಿ ಜಾಗಗಳಲ್ಲಿ ಸಣ್ಣ ಸಣ್ಣ ಜೋಪಡಿಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿರುವ ದೃಶ್ಯ ನೋಡುಗರ ಕರಳು ಹಿಂಡುವಂತ್ತಿರುತ್ತದೆ. ಇಂತಹ ಜಾಗದಲ್ಲಿ ವಾಸ ಮಾಡುವವರಿಗೆ ಶೌಚಾಲಯ ಇರುವುದಿಲ್ಲ. ಇಲ್ಲಿನ ಮಹಿಳೆಯರ ಪಾಡು ಹೇಳತೀರದು. ಇವರು ಮಲ ಮೂತ್ರ ವಿಸರ್ಜನೆಗೆ ಸೂರ್ಯ ಮರೆಯಾಗಿ ಕತ್ತಲಾಗುವುದನ್ನೇ ಕಾಯಬೇಕು. ಅಥವಾ ಗಿಡಗಳ ಪೊದೆಯನ್ನು ಹುಡುಕಿಕೊಂಡು ಹೋಗಬೇಕು. ನಿತ್ಯದ ಬಳಕೆಯ ನೀರಿಗೂ ಅಲೆದಾಟ. ಸಮೀಪದ ನಿವಾಸಿಗಳ ಬಳಿ ಕಾಡಿ, ಬೇಡಿ ನೀರು ಪಡೆಯುವ ಪರಿಸ್ಥಿತಿ ಈ ವಲಸೆ ಕಾರ್ಮಿಕರದು. ನೀರು ಸರಭರಾಜು ವ್ಯವಸ್ಥೆಯ ಖಾಸಗೀಕರಣದ ಒಂದು ಭಾಗವಾಗಿ ಸಾರ್ವಜನಿಕರಿಗೆ ನೀರು ಸರಭರಾಜು ಮಾಡುತ್ತಿದ್ದ ಬೀದಿ ಬದಿಯ ಕೊಳವೆ(ನಲ್ಲಿ)ಗಳನ್ನು ಇಲ್ಲದಂತೆ ಮಾಡಲಾಗಿದೆ. ಇಲ್ಲಿ ಸಾರ್ವಜನಿಕರ ಬಳಕೆಯ ಕೊಳವೆ ಬಾವಿಗಳು ನಾಪತ್ತೆಯಾಗಿವೆ. ಪ್ರತಿಯೊಂದು ಕುಟುಂಬವೂ ಬಳಕೆಗೆ ಮತ್ತು ಕುಡಿಯಲು ಹಣ ಕೊಟ್ಟು ನೀರು ಖರೀದಿ ಮಾಡಿ ಶೇಖರಿಸಿ ಇಟ್ಟುಕೊಳ್ಳಲೇಬೇಕು. ಇದಕ್ಕಾಗಿ ಮನೆಗಳಲ್ಲಿ ನೀರಿನ ತೊಟ್ಟಿ ಇರಲೇಬೇಕು. ಪಾಳು ಬಿದ್ದ ಜಾಗದಲ್ಲಿ ಜೋಪಡಿ ಕಟ್ಟಿಕೊಂಡಿರುವ ಮತ್ತು ಯಾವಾಗ ಅಲ್ಲಿಂದ ಜಾಗ ಖಾಲಿ ಮಾಡಿಸುತ್ತಾರೋ ಎಂಬ ಭೀತಿಯಲ್ಲಿ ಸದಾ ಕಾಲ ಇರುವ ಇವರು, ಇಂತಹ ಜಾಗದಲ್ಲಿ ನೀರು ತುಂಬಿಸಿಕೊಳ್ಳಲು ತೊಟ್ಟಿ ನಿರ್ಮಾಣ ಮಾಡಲೂ ಹಾಗದು.

ಇನ್ನೂ ಕೆಲವೆಡೆ ಜಾಗದ ಮಾಲೀಕರು ತಿಂಗಳಿಗೆ ಐದುನೂರೋ, ಸಾವಿರವೋ ಬಾಡಿಗೆ ಪಡೆದು ಸಣ್ಣ ಸಣ್ಣ ಜೋಪಡಿಗಳನ್ನು ಹಾಕಿಕೊಳ್ಳಲು ಅವಕಾಶ ಕೊಡುತ್ತಾರೆ. ಇಲ್ಲಿಯೂ ಯಾವುದೇ ಕನಿಷ್ಟ ಮೂಲಭೂತ ಸೌಕರ್ಯಗಳಿರುವುದಿಲ್ಲ.

ಮತ್ತೆ ಕೆಲವರು ಕಟ್ಟಡ ನಿರ್ಮಾಣ ಕಾಮಗಾರಿಯಲ್ಲಿ ತೊಡಗಿಕೊಂಡು ನಿರ್ಮಾಣ ಹಂತದ ಕಟ್ಟಡದಲ್ಲಿಯೇ ವಾಸ. ಅಥವಾ, ಸಿಮೆಂಟ್ ಮತ್ತು ನಿರ್ಮಾಣಕ್ಕೆ ಸಂಭಂದಿಸಿದ ಪರಿಕರಗಳನ್ನು ಇಡಲು ಕಟ್ಟಿದ ತಾತ್ಕಾಲಿಕ ಸೆಡ್ ಗಳಲ್ಲಿ ಕುಟುಂಬ ಸಮೇತರಾಗಿ ವಾಸಿಸುತ್ತಾರೆ. ಬಹುತೇಕ ಸೆಡ್ ಗಳಲ್ಲಿ ದಿನನಿತ್ಯದ ಅಗತ್ಯತೆಗಳಾದ ಮಹಿಳೆಯರು ಸ್ನಾನ ಮಾಡುವ, ಶೌಚಾಲಯದ, ಮತ್ತು ಕುಡಿಯುವ ನೀರಿನ ವ್ಯವಸ್ಥೆ ಇರುವುದಿಲ್ಲ. ಕಟ್ಟಡ ಕಾಮಗಾರಿ ಮುಗಿಯುತ್ತಿದ್ದಂತೆ ಮತ್ತೊಂದು ಪ್ರದೇಶಕ್ಕೆ ವಲಸೆ.

ಮಕ್ಕಳ ಶಿಕ್ಷಣ ಮೊಟಕು:

ಕೂಲಿ ಅರಸಿ ಗುಳೇ ಹೋದವರ ಮಕ್ಕಳ ಶಿಕ್ಷಣ ಮುಂದುವರಿಸಲಾಗದ ಸ್ಥಿತಿ ಹಲವರಿಗೆ. ತಮ್ಮ ಗ್ರಾಮದ ಶಾಲೆ ಬಿಡಿಸಿ ತಮ್ಮೊಡನೆ ಕರೆದೊಯ್ಯುವ ಅನಿವಾರ್ಯ ಸ್ಥಿತಿ. ವಲಸೆ ಬಂದ ಪ್ರದೇಶದಲ್ಲಿ ಎಷ್ಟು ಕಾಲ ಇರುತ್ತೇವೆ ಎಂಬ ಭರವಸೆಯೇ ಇರುವುದಿಲ್ಲ. ಹೀಗಾಗಿ ಬಹುತೇಕ ವಲಸಿಗರಿಗೆ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಸಾಧ್ಯವಾಗುವುದಿಲ್ಲ. ಶಿಕ್ಷಣ ಅರ್ಧದಲ್ಲೇ ಮೊಟಕು.

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಅನುಧಾನ ಕಡಿತ:

ನರೇಗಾ ಯೋಜನೆಯನ್ನು ನಾಶಮಾಡಲು ಸರ್ಕಾರ ಮುಂದಾಗಿದೆಯೇ?

ನರೇಗಾ ಯೋಜನೆಗೆ ಕೇಂದ್ರ ಸರ್ಕಾರ ಅನುಧಾನ ಕಡಿತ ಮಾಡುತ್ತಿರುವ ಈ ಸಂದರ್ಭದಲ್ಲಿ 10 ವರ್ಷಗಳ ಹಿಂದಿನ ಒಂದು ಲೇಖನ ನೆನಪಿಗೆ ಬರುತ್ತದೆ. ಇಂದು ಸಂಸದರಾಗಿರುವ ಪ್ರಾತಾಪ್ ಸಿಂಹ 2013ರಲ್ಲಿ ಕನ್ನಡ ಪ್ರಭ ಪತ್ರಿಕೆಯಲ್ಲಿ ನರೇಗಾ ಯೋಜನೆಯನ್ನು ಟೀಕಿಸಿ ಲೇಖನ ಬರೆದಿದ್ದರು. ಅವರು ಆ ಲೇಖನದಲ್ಲಿ ಹೀಗೆ ಬರೆದಿದ್ದಾರೆ. "2004ರಲ್ಲಿ ಪ್ರಧಾನಿ ಸ್ಥಾನವನ್ನು ನಿರಕರಿಸುವ ನಾಟಕವಾಡಿ, ರಾಷ್ಟ್ರೀಯ ಸಲಹಾ ಮಂಡಳಿ(ಎನ್‌ಎಸಿ) ಮೂಲಕ ಪರೋಕ್ಷವಾಗಿ ಸರ್ಕಾರದ ಕಡಿವಾನ ಕೈಗೆತ್ತಿಕೊಂಡ ಸೋನಿಯಾ ಗಾಂಧಿ ನೇತೃತ್ವದ ಈ ಸಮಿತಿಯಲ್ಲಿ ತರ್ಲೆ ಕಮ್ಯುನಿಸ್ಟರೇ ತುಂಬಿಕೊಂಡಿದ್ದಾರೆ. ಇವರ ಸಲಹೆಯ ಫಲವೇ ನರೇಗಾ ಯೋಜನೆ. ವರ್ಷಕ್ಕೆ 100 ದಿನಗಳು ಖಚಿತ ಕೆಲಸ, ದಿನವೊಂದಕ್ಕೆ 120 ಕೂಲಿ ನೀಡುವ ಈ ಯೋಜನೆಯಿಂದ ಎಂಥ ಅನಾಹುತ ಸಂಭವಿಸಿದೆಯೆಂದರೆ ಅಸ್ಸಾಂ ನ ಟೀ ಎಸ್ಟೇಟ್ ಗಳಿಂದ ಕರ್ನಾಟಕದ ಬತ್ತ ಬೆಳೆಯುವವರೆಗೂ ಕಾರ್ಮಿಕರ ಕೊರತೆ ಕಾಡುತ್ತಿದೆ. ?.. ಸರ್ಕಾರ 30 ಕೆಜಿ ಅಕ್ಕಿಯನ್ನೂ ಕೊಡುತ್ತದೆ, ನರೇಗಾವೆಂಬ ಕಳ್ಳಾಟಕ್ಕೂ 120 ರೂ ಕೊಡುತ್ತದೆ. ಹೀಗಾಗಿ ನಮ್ಮ ಜನ ಸಾರಾಯಿಗಷ್ಟೇ ಚಿಂತೆಪಡಬೇಕೇ ಹೊರತು, ಅನ್ನಕ್ಕಲ್ಲ. ಮೈ ಬಗ್ಗಿಸಿ ದುಡಿದಿದ್ದರೆ ಆರೋಗ್ಯವಾದರೂ ಸರಿಯಿರುತ್ತಿತ್ತು?."

ಇದು ಪ್ರತಾಪ್ ಸಿಂಹ ಅವರ ಅಭಿಪ್ರಾಯ ಮಾತ್ರವಲ್ಲ, ಬಿಜೆಪಿ ಮತ್ತು ಸಂಘಪರಿವಾರದ ನಿಲುವುಗಳೂ ಇದೇ ಆಗಿವೆ. ಹಾಗೆಂದು ಇಂತಹ ಜನಪರ ಯೋಜನೆಗಳನ್ನು ಏಕಾಏಕಿ ತೆಗೆಯಲಾಗದು. ಮುಕ್ತ ಆರ್ಥಿಕ ನೀತಿಗಳ ಜಾರಿಯ ಭಾಗವೂ ಆಗಿದೆ. ನಿಧಾನವಾಗಿ ಸ್ವಲ್ಪ ಸ್ವಲ್ಪವೇ ನಾಶ ಮಾಡಬೇಕು. ಇದು ಹೇಗೆಂದರೆ, ಅಡುಗೆ ಅನಿಲದ ಮೇಲಿನ ಸಬ್ಸಿಡಿಯನ್ನು ಸಂಪೂರ್ಣವಾಗಿ ತೆಗೆದು ಹಾಕಿದರಲ್ಲಾ, ಹಾಗೆ.

2005ರಲ್ಲಿ ನರೇಗಾ ಯೋಜನೆ ಜಾರಿ:

ಎಡಪಕ್ಷಗಳು ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಆಧಾರದ ಮೇಲೆ ಕೆಲವು ಷರತ್ತುಗಳೊಂದಿಗೆ 2004ರಲ್ಲಿ ಯುಪಿಎ ಒಂದರ ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ನೀಡಿದ್ದವು. ಇದರ ಫಲವೇ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (MGNREGA) ಎಲ್ಲೆಡೆ ಜಾರಿಗೆ ಬಂದಿದ್ದು. ಗ್ರಾಮೀಣ ಪ್ರದೇಶದ ಪ್ರತಿ ಮನೆಗೆ ಆರ್ಥಿಕ ವರ್ಷದಲ್ಲಿ ಕನಿಷ್ಠ 100 ದಿನಗಳ ಉದ್ಯೋಗವನ್ನು ಒದಗಿಸುವ ಮೂಲಕ, ಗ್ರಾಮೀಣ ಪ್ರದೇಶಗಳಲ್ಲಿ ಜೀವನೋಪಾಯ ಮತ್ತು ಭದ್ರತೆಯನ್ನು ಹೆಚ್ಚಿಸುವ ಗುರಿಯನ್ನು ಈ ಯೋಜನೆ ಹೊಂದಿದೆ. ಈ ಯೋಜನೆಯು ದೇಶದೆಲ್ಲೆಡೆ ಕೃಷಿ ಕೂಲಿಕಾರರ ಬದುಕಿಗೆ ಒಂದಷ್ಟು ಆಸರೆಯಾಗಿತ್ತು. (ಇದನ್ನು 200 ದಿನಗಳಿಗೆ ಹೆಚ್ಚಿಸಬೇಕು ಮತ್ತು 600 ರೂ ಕೂಲಿ ನಿಗದಿ ಮಾಡಬೇಕು ಎಂಬ ಬೇಡಿಕೆಯೂ ಇದೆ.)

ಆದರೆ ಈ ಯೋಜನೆಯನ್ನು ಸಮರ್ಪಕವಾಗಿ ಜಾರಿಗೆ ತರಲು ಸರ್ಕಾರ ಆಸಕ್ತಿ ತೋರುತ್ತಿಲ್ಲ. ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳ ಭ್ರಷ್ಟಾಚಾರ, ಅಕ್ರಮ ವ್ಯವಹಾರದಿಂದಾಗಿ, ಮಾನವರು



ಮಾಡಬೇಕಾದ ಕೆಲಗಳನ್ನು ಯಂತ್ರಗಳ ಮೂಲಕ ಮಾಡಿಸುತ್ತಾ, ಯೋಜನೆಯ ಹಣವನ್ನು ಲೂಟಿ ಮಾಡುತ್ತಿದ್ದಾರೆ. ಕೆಲಸ ಅರಸುತ್ತಾ ಅಲೆಯುತ್ತಿರುವ ಕೃಷಿ ಕೂಲಿಕಾರರಿಗೆ ಕೂಲಿ ಸಿಗದಂತೆ ಮಾಡತೊಡಗಿದ್ದಾರೆ.

ಕೃಷಿ ಕೂಲಿಕಾರರಿಗೆ ಒಂದಷ್ಟು ಆಸರೆಯಾಗಿದ್ದ ಈ ಯೋಜನೆಯನ್ನು ಮೋದಿ ಸರ್ಕಾರ ನಾಶ ಮಾಡಲು ಮುಂದಾಗಿದೆ. ಕೇಂದ್ರದಲ್ಲಿ ಬಿಜೆಪಿ ಎರಡನೆಯ ಬಾರಿಗೆ ಅಧಿಕಾರಕ್ಕೆ ಬಂದ 2019ರ ನಂತರ ನರೇಗಾ ಯೋಜನೆಗೆ ನೀಡುತ್ತಿರುವ ಅನುದಾನವನ್ನು ಕೇಂದ್ರ ಸರಕಾ ರ ಪ್ರತಿ ವರ್ಷವೂ ಕಡಿತ ಮಾಡುತ್ತಾ ಬಂದಿದೆ. ಕಳೆದ ನಾಲ್ಕು ವರ್ಷಗಳ ಬಜೆಟ್ ಗಳಲ್ಲಿನ ಹಂಚಿಕೆಯನ್ನು ನೋಡಿದಾಗ 2023ರಲ್ಲಿನ ಹಂಚಿಕೆ ಅತ್ಯಂತ ಕಡಿಮೆಯಾಗಿದೆ. ಈ ಬಜೆಟ್ ನಲ್ಲಿ ಈ ಯೋಜನೆಗೆ ಕೇವಲ 60 ಸಾವಿರ ಕೋಟಿ ರೂ ಮಾತ್ರ ಮೀಸಲಿಟ್ಟಿದೆ.

2022–23ರ ಆರ್ಥಿಕ ವರ್ಷದಲ್ಲಿ ನರೇಗಾ ಯೋಜನೆಗೆ 73,000 ಕೋಟಿ ಮೀಸಲಿಡಲಾಗಿತ್ತು. ಆದರೆ, ರಾಜ್ಯಗಳ ಬೇಡಿಕೆ ಹೆಚ್ಚಾದ್ದರಿಂದ, ಪರಿಷ್ಕೃತ ಅಂದಾಜು 89,400 ಕೋಟಿ ರೂ. ಗಳಿಗೆ ಏರಿಕೆಯಾಗಿತ್ತು.

ಎಮ್ ಜಿ ನರೇಗಾ ಯೋಜನೆಯ ಅಡಿಯಲ್ಲಿ ಕೆಲಸ ಬಯಸುವವರಿಗೆ ಆರ್ಥಿಕ ವರ್ಷದಲ್ಲಿ 200 ಮಾನವ ದಿನಗಳ ಕೆಲಸ ಕೊಡಬೇಕು. ದಿನಗೂಲಿಯನ್ನು 600 ರೂಗೆ ಹೆಚ್ಚಿಬೇಕು. ಕೆಲಸ ಕೊಡಲಾಗದ ದಿನಗಳಿಗೆ ನಿರುದ್ಯೋಗ ಭತ್ಯೆಯನ್ನು ತಪ್ಪದೆ ಕೊಡಬೇಕು. ಎಂಬ ಬೇಡಿಕೆಗಳನ್ನು ರೈತ ಮತ್ತು ಕೃಷಿ ಕೂಲಿಕಾರರ ಸಂಘಟನೆಗಳು ಇಟ್ಟಿವೆ. ಈ ಬೇಡಿಕೆಗಳಿಗಾಗಿ ಹಲವು ಹೋರಾಟಗಳನ್ನೂ ಮಾಡಿವೆ. ಇವರ ಬೇಡಿಕೆಗಳಿಗೆ ಕಿವಿಗೊಡದ ಸರಕಾರ ಅನುಧಾನ ಕಡಿತ ಮಾಡುತ್ತಾ ಕಡೆಗೊಂದು ದಿನ ಯೋಜನೆಯನ್ನೇ ನಾಶ ಮಾಡುವ ಗುರಿ ಹೊಂದಿದಂತ್ತಿದೆ. ಉದ್ಯಮಿಗಳಿಗೆ ಕಾರ್ಮಿಕರ ದೊಡ್ಡ ಮೀಸಲು ಪಡೆಯನ್ನು ಮೀಸಲಿರಿಸುವ, ಆ ಮೂಲಕ ನಿಕೃಷ್ಟ ವೇತನಕ್ಕೆ ತಮಗೆ ಇಷ್ಟಬಂದಂತೆ ಕಾರ್ಮಿಕರನ್ನು ದುಡಿಸಿಕೊಳ್ಳಲು ಅನುವು ಮಾಡಿಕೊಡುವ ಸರಕಾರದ ತಂತ್ರ ಇದರಲ್ಲಿ ಅಡಗಿದೆ ಎಂಬುದು ಸ್ಪಷ್ಟ. ಬಂಡವಾಳಗಾರರ ಪರವಾದ ಮುಕ್ತ ಆರ್ಥಿಕ ನೀತಿಗಳ ಜಾರಿಯ ಭಾಗವಾಗಿ ಇವೆಲ್ಲವೂ ನಡೆಯುತ್ತಿದೆ.

ಅಗತ್ಯವಿರುವ ಮೊತ್ತ ರೂ. 2.72 ಲಕ್ಷ ಕೋಟಿ:

2023–24 ಆರ್ಥಿಕ ವರ್ಷಕ್ಕೆ ಕನಿಷ್ಠ ರೂ. 2.72 ಲಕ್ಷ ಕೋಟಿ ಅಗತ್ಯವಿದೆ ಎಂದು ಹಲವು ಅಧ್ಯಯನಗಳ ವರದಿ ಹೇಳಿದ್ದವು. ಆದರೆ, ಸರಕಾರ ಈ ಹಿಂದಿನ ವರ್ಷ ಮೀಸಲಿಟ್ಟಿದ್ದ ಮೊತ್ತಕ್ಕಿಂತಲೂ ಕಡಿಮೆ ಮೊತ್ತವನ್ನು ಮೀಸಲಿಟ್ಟಿದೆ. ಈ ಯೋಜನೆಗೆ 2022–2023 ರ ಬಜೆಟ್ ನಲ್ಲಿ ಮೀಸಲಿಡಲಾಗಿದ್ದ 73,000 ಕೋಟಿ ಈ ಮೊತ್ತದಲ್ಲಿ ಹಿಂದಿನ ವರ್ಷದ ಬಾಕಿ ತೀರಿಸಲು 16,070 ಕೋಟಿ ರೂಪಾಯಿಗಳು.

ಕಳೆದ ಐದು ವರ್ಷಗಳಲ್ಲಿ ವಾರ್ಷಿಕ ಬಜೆಟ್ನ ಸುಮಾರು ಶೇ. 21 ರಷ್ಟು ಮೊತ್ತವನ್ನು ಅದಕ್ಕೂ ಹಿಂದಿನ ವರ್ಷಗಳು ಉಳಿಸಿದ ಬಾಕಿಗಳನ್ನು ತೆರಲು ಖರ್ಚು ಮಾಡಲಾಗಿದ್ದು, ಪ್ರಸಕ್ತ ಹಣಕಾಸು ವರ್ಷದ ಕೊನೆಯಲ್ಲಿ ಇರುವ ಬಾಕಿಗಳು ಸುಮಾರು ರೂ. 25,800 ಕೋಟಿ.

ಕೋವಿಡ್–19 ಸಾಂಕ್ರಾಮಿಕದ ಉತ್ತುಂಗದ ವರ್ಷದಲ್ಲಿ ಯೋಜನೆಯ ಮೊತ್ತ 1.11 ಲಕ್ಷ ಕೋಟಿಗೆ ತಲುಪಿತ್ತು. ಆದರೆ, ಅದರ ಮುಂದಿನ ವರ್ಷ 2021–22ರಲ್ಲಿ 98,000 ಕೋಟಿ ರೂ. ಗೆ ಇಳಿಯಿತು. 2022–23 ರಲ್ಲಿ ಇದು ಮತ್ತಷ್ಟು ಕಡಿತವಾಗಿ 73,000 ಕೋಟಿ ರೂ.ಗೆ ಇಳಿಯಿತು. ಈ ಬಾರಿ ಕೇವಲ 60,000 ಕೋಟಿ ರೂ. ಮೀಸಲಿಡಲಾಗಿದೆ.

2022–23ರ ಪರಿಷ್ಕೃತ ಅಂದಾಜಿನ 89,400 ಕೋಟಿ ರೂ.ಗಳಿಗಿಂತ ಸುಮಾರು ಶೇ. 32 ರಷ್ಟು ಹಂಚಿಕೆಯನ್ನು ಈ ಬಾರಿ ಕಡಿತಗೊಳಿಸಿದ್ದಾರೆ. 2020–21ರ 1.11 ಲಕ್ಷ ಕೋಟಿ ರೂ. ಗಳಿಗೆ ಹೋಲಿಸಿದರೆ, ಇದು ಅರ್ಧದಷ್ಟು ಕಡಿಮೆಯಾಗಿದೆ.

ದೇಶಾದ್ಯಂತ ಲಕ್ಷಾಂತರ ಕುಟುಂಬಗಳಿಗೆ ಯೋಜನೆಯು ಅತ್ಯಂತ ಮಹತ್ವದ್ದಾಗಿದೆ. 2022–23ರಲ್ಲಿ ಸುಮಾರು 5.6 ಕೋಟಿ ಕುಟುಂಬಗಳು ಈ ಯೋಜನೆಯ ಒಂದಷ್ಟು ಲಾಭ ಪಡೆದಿವೆ. ಪ್ರತಿ ಕುಟುಂಬಕ್ಕೆ 100 ದಿನಗಳ ಕೂಲಿಯನ್ನು ಲೆಕ್ಕ ಹಾಕಿದಾಗ, ಈ ಎಲ್ಲಾ ಕುಟುಂಬಗಳಿಗೆ 1.76 ಲಕ್ಷ ಕೋಟಿ ರೂಪಾಯಿ ವೆಚ್ಚವಾಗಲಿದೆ. ಅವಶ್ಯಕ ವಸ್ತುಗಳ ಬೆಲೆ ಏರಿಕೆ, ಆಡಳಿತ ಮತ್ತು ಇತರ ವೆಚ್ಚಗಳೊಂದಿಗೆ, ಈ ವೆಚ್ಚವು 2.46 ಲಕ್ಷ ಕೋಟಿ ರೂಪಾಯಿಗಳಿಗೆ ಹೆಚ್ಚಾಗಬಹುದು ಎಂದು ಅಧ್ಯಯನಗಳ ವರದಿಗಳು ಹೇಳಿವೆ. ಈ ಅಂಕಿ ಅಂಶಕ್ಕೆ 25,800 ಕೋಟಿ ರೂಪಾಯಿ ಬಾಕಿಯನ್ನು ಸೇರಿಸುವ ಮೂಲಕ ರೂ 2.72 ಲಕ್ಷ ಕೋಟಿ ಅಗತ್ಯವಿತ್ತು.

PRS ಲೆಜಿಸ್ಲೇಟಿವ್ ರಿಸರ್ಚ್ ಇತ್ತೀಚಿನ ವಿಶ್ಲೇಷಣೆಯು 2016–17 ಮತ್ತು 2020–21 ರ ನಡುವೆ, ಅದು ಒದಗಿಸಿದ ಉದ್ಯೋಗದ ದಿನಗಳ ಸರಾಸರಿ ಸಂಖ್ಯೆ ಪ್ರತಿ ಕುಟುಂಬಕ್ಕೆ ಕೇವಲ 48 ದಿನಗಳು ಮಾತ್ರ ಎಂದು ಬಹಿರಂಗಪಡಿಸಿದೆ.

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಉಳಿಯಬೇಕು:

ಮೊನ್ನೆಯ ದಿನ ದೇಶದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ 2023–24ರ ಬಜೆಟ್ ಅನ್ನು ಮಂಡಿಸುತ್ತಿದ್ದಾಗ ಭಾರತದ ಪ್ರಧಾನಿ ನರೇಂದ್ರ ಮೋದಿಯವರು ಮೇಜು ಕುಟ್ಟುವುದರಲ್ಲಿ ನಿರತರಾಗಿದ್ದರೆ. ದುಡಿಯುವ ವರ್ಗಕ್ಕೆ ಸೇರಿದ ಜನ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗಾಗಿ ಬಜೆಟ್ ಅನುದಾನ ಕಡಿತಗೊಳಿಸಿದನ್ನು ವ್ಯಾಪಕವಾಗಿ ಖಂಡಿಸುತ್ತಿದ್ದರು. ಅದೇ ಸಮಯದಲ್ಲಿ ಕೇಂದ್ರ ಹಣಕಾಸು ಕಾರ್ಯದರ್ಶಿ ಟಿ.ವಿ. ಸೋಮನಾಥನ್ ನೀಡಿದ ಹೇಳಿಕೆಯೊಂದರಲ್ಲಿ "ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ, ಯೋಜನೆಗೆ ಅನುದಾನ ಕಡಿತ ಮಾಡಿರುವ ಬಗ್ಗೆ ಯಾರು ಆತಂಕ ಪಡಬೇಕಾಗಿಲ್ಲ. MGNREGA ಬೇಡಿಕೆ ಆಧಾರಿತ ಯೋಜನೆಯಾಗಿದ್ದು ಬೇಡಿಕೆ ಹೆಚ್ಚಾದರೆ ಸರ್ಕಾರ ಖಂಡಿತವಾಗಿಯೂ ಉದ್ಯೋಗ ಖಾತ್ರಿ ಅನುದಾನವನ್ನು ಹೆಚ್ಚಿಸುವುದು."

ಕೇಂದ್ರ ಹಣಕಾಸು ಕಾರ್ಯದರ್ಶಿಗಳ ಈ ಮಾತುಗಳು ನಂಬಿಕೆಗೆ ಅರ್ಹವಾಗಿಲ್ಲ. ಗ್ರಾಮೀಣ ಕೆಲಸಗಾರರು ಈಗಾಗಲೇ MGNREGA ಕುರಿತು ತಮ್ಮ ಆಸಕ್ತಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಸರ್ಕಾರಕ್ಕೂ ಅದೇ ಬೇಕಾಗಿದೆ. ಯೋಜನೆಗಾಗಿ ಗ್ರಾಮ ಪಂಚಾಯಿತಿಗಳಿಗೆ ಬರುವ ಹಣದ ಲೂಟಿ ಆಗುತ್ತದೆ. ಇಲಾಖಾಧಿಕಾರಿಗಳು, ಗ್ರಾಮ ಪಂಚಾಯತ್ ಸದಸ್ಯರು ಸರ್ಕಾರದ ಹಣವನ್ನು ಅಂದರೆ ಜನರ ಹಣವನ್ನು ಪೋಲು ಮಾಡುತ್ತಿದ್ದಾರೆ. ಕೆಲಸಗಾರರಿಗೆ ಅವರ ಪಾಲಿನ ವೇತನ ಸರಿಯಾಗಿ ತಲುಪುದಿಲ್ಲ. ಮಾಡಿದ ಕೆಲಸದ ಅಳತೆ ಮಾಡುವುದನ್ನು ಪಾರದರ್ಶಕವಾಗಿ ಮಾಡಲಾಗುವುದಿಲ್ಲ. ಕೆಲಸ ಕೊಡಲಾಗದ ದಿನಗಳಿಗೆ ಕೊಡಬೇಕಾದ ಪರಿಹಾರ ಭತ್ಯೆ ಕೆಲಸಗಾರರಿಗೆ ಸಂದಾಯ ವಾಗುವುದಿಲ್ಲ. ಅನಗತ್ಯವಾಗಿ ಹೊಸ ಹೊಸ ನಿಯಮಗಳನ್ನು ರಚಿಸಿ ಕೆಲಸಗಾರರಿಗೆ ಕಿರುಕುಳ ಕೊಡುತ್ತಾರೆ. ಕೆಲಸಗಾರರನ್ನು ಜಾತಿ ಆಧಾರದಲ್ಲಿ ವಿಂಗಡಿಸಿ ಅವರ ಒಗ್ಗಟ್ಟನ್ನು ಮುರಿಯುತ್ತಾರೆ. ಅವರ ಸಾಮೂಹಿಕ ಚೌಕಾಸಿ ಹಕ್ಕನ್ನು ಕಿತ್ತುಕೊಳ್ಳುತ್ತಾರೆ. ಜವಾಬ್ದಾರಿಯಿಂದ ಕೆಲಸ ನಿರ್ವಹಿಸುವ ಮೇಟಿಗಳಾಗಿ ನೀಡಲಾಗುತ್ತಿದ್ದ ಪ್ರೋತ್ಸಾಹ ಧನವನ್ನು ಹಿಂಪಡೆಯಲಾಗಿದೆ. ಕೆಲಸವನ್ನು ಗುತ್ತಿಗೆ ಆಧಾರದಲ್ಲಿ ನಡೆಸಲಾಗುತ್ತಿದ್ದರೂ ಅವರು 8 ತಾಸು ಕೆಲಸದ ಸ್ಥಳದಲ್ಲಿ ಇರಬೇಕೆಂದೂ ದಿನಕ್ಕೆ ಎರಡು ಬಾರಿ ಆನ್ ಲೈನ್ ಮೂಲಕ ಹಾಜರಾತಿ ನೀಡುವಂತೆ ಒತ್ತಾಯಿಸುತ್ತಾರೆ.

ಸರ್ಕಾರ ಹಾಗೂ ಅಧಿಕಾರಿಗಳ ಈ ಕಿರುಕುಳ ಸಹಿಸಲು ಗದೆ ಕೆಲಸಗಾರರು ಉದ್ಯೋಗ ಖಾತ್ರಿ ಕೆಲಸವನ್ನು ಬಿಟ್ಟು ಬೇರೆ ಕೆಲಸ ಹುಡುಕಿಕೊಂಡು ನಗರ ಪ್ರದೇಶಕ್ಕೆ ವಲಸೆ ಹೋಗುತ್ತಾರೆ. ಹೀಗಾಗಿ ಉದ್ಯೋಗ ಖಾತಿ ಯೋಜನೆಯಲ್ಲಿ ಕೆಲಸಗಾರರ ಬೇಡಿಕೆ ಕುಸಿಯುತ್ತಿದೆ. ಇದಕ್ಕೆ ಸರ್ಕಾರವೇ ಜವಾಬ್ದಾರ. ವರ್ಷದಲ್ಲಿ 200 ಮಾನವ ದಿನಗಳ ಕೆಲಸ ಕೊಟ್ಟು ದಿನವೊಂದಕ್ಕೆ 600 ರೂ. ಕನಿಷ್ಠ ವೇತನ ನೀಡಲು ಸರ್ಕಾರ ಮುಂದಾದರೆ ಬೇಡಿಕೆ ವೃದ್ಧಿಯಾಗುತ್ತದೆ.

ಕೆಲಸ ಬಯಸುವವರಿಗೆಲ್ಲ ಕೆಲಸ ಸಿಗುವಂತಿರಬೇಕು. ಕಾರ್ಮಿಕ ಕಾನೂನುಗಳನ್ನು ಅನ್ವಯಿಸಬೇಕು. ಆಗ ಕೆಲಸಕ್ಕೆ ಬೇಡಿಕೆ ಹೆಚ್ಚಾಗಿ ದುಡಿಯುವ ಜನರ ಆದಾಯ ಹೆಚ್ಚಾಗುತ್ತದೆ. ಇಡೀ ದೇಶದ ಅಭಿವೃದ್ಧಿಯ ದಾರಿ. ಯೋಜನೆಯಲ್ಲಿ ಇರುವ ಲೋಪದೋಷಗಳನ್ನು ನಿವಾರಿಸಿ ಯೋಜನೆಯನ್ನು ಬಲಪಡಿಸುವುದಾಗಬೇಕು.

ಅಸ್ಸಾಂನಲ್ಲಿ ಬಾಲ್ಯ ವಿವಾಹದ ವಿರುದ್ಧದ ನೆಪದಲ್ಲಿ ಬಿಜೆಪಿ ಆಡಳಿತದ ಅಮಾನವೀಯ ಕಾರ್ಯಾಚರಣೆ:

ತಕ್ಷಣ ಈ ಕಾರ್ಯಾಚರಣೆ ನಿಲ್ಲಿಸುವಂತೆ ಎಡಪಕ್ಷಗಳ ಅಗ್ರಹ:

ಬಾಲ್ಯ ವಿವಾಹ ತಡೆ ಕಾಯ್ದೆ ಅಡಿಯಲ್ಲಿ ಅಸ್ಸಾಂ ಸರ್ಕಾರ 4074 ಎಫ್.ಐ.ಆರ್. ಗಳನ್ನು ದಾಖಲಿಸಲಾಗಿದೆ. ಕಾರ್ಯಾಚರಣೆಯ ಮೊದಲ ಮೂರು ದಿನಗಳಲ್ಲಿ 2441 ಜನರನ್ನು ಬಂದಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಬಾಲ್ಯ ವಿವಾಹ ಆಗಿರುವವರು, ಬಾಲ್ಯ ವಿವಾಹ ಮಾಡುತ್ತಿದ್ದವರು ಮತ್ತು ಅದಕ್ಕೆ ಪ್ರೇರಣೆ ನೀಡುತ್ತಿದ್ದವರನ್ನು ಬಂಧಿಸಲು ಅಸ್ಸಾಂ ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ. ಬಾಲ್ಯವಿವಾಹ ತಡೆಯಲು ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದಿರುವ ಸಿಎಂ, ಈ ವಿಚಾರದಲ್ಲಿ ಶೂನ್ಯ ಸಹಿಷ್ಣುತೆಯ ಮನೋಭಾವದಿಂದ ವರ್ತಿಸುವಂತೆ ಪೋಲೀಸರಿಗೆ ಸೂಚಿಸಿರುವುದಾಗಿ ಹೇಳಿಕೊಂಡಿದ್ದಾರೆ. 14 ವರ್ಷಕ್ಕಿಂತ ಕೆಳಗಿನ ಬಾಲಕಿಯನ್ನು ವಿವಾಹವಾಗುವ ಪುರುಷರ ಮೇಲೆ ಪೋಕ್ಸೋ ಪ್ರಕರಣ ದಾಖಲಿಸಲಾಗುತ್ತಿದೆ. 18 ವರ್ಷಕ್ಕಿಂತ ಕೆಳಗಿನ ಬಾಲಕಿಯರ ಮದುವೆಯಾಗಿರುವ ಪುರಷರನ್ನೂ ಬಂದಿಸಿ ಜೈಲಿಗೆ ಹಾಕಲಾಗುತ್ತಿದೆ.

ಎಡ ಪಕ್ಷಗಳ ಖಂಡನೆ:

ಅಸ್ಸಾಂ ನ ಬಿಜೆಪಿ ಸರಕಾರದ ಈ ಕಾರ್ಯಾಚರಣೆಯನ್ನು ಅಸ್ಸಾಂ ನ ಮೂರು ಎಡಪಕ್ಷಗಳು ಜಂಟಿ ಹೇಳಿಕೆಯಲ್ಲಿ ಬಲವಾಗಿ ಖಂಡಿಸಿವೆ. ಬಾಲ್ಯ ವಿವಾಹದ ಬಗ್ಗೆ ಅಸ್ಸಾಂ ಸರ್ಕಾರದ ಸರ್ವಾಧಿಕಾರಿ ಧೋರಣೆ ಸಾಮಾಜಿಕ ಸಮಸ್ಯೆಗಳನ್ನು ಉಲ್ಬಣಗೊಳಿಸುತ್ತದೆ ಎಂದಿರುವ ಎಡಪಕ್ಷಗಳು, ಅಸ್ಸಾಂ ಸರ್ಕಾರದ ಆದೇಶದ ಮೇರೆಗೆ ಬಾಲ್ಯವಿವಾಹದ ವಿರುದ್ಧ ಹೇರುತ್ತಿರುವ ದುಡುಕಿನ ಮತ್ತು ಹಠಾತ್ ಪೊಲೀಸ್ ಕ್ರಮಗಳು ಸಂವೇದನಾ ರಹಿತವಾಗಿದ್ದು, ಈ ಅಮಾನವೀಯ ಮತ್ತು ನಿರಂಕುಶ ಕಾರ್ಯಾಚರಣೆಯನ್ನು ತಕ್ಷಣ ನಿಲ್ಲಿಸುವಂತೆ ಒತ್ತಾಯಿಸಿವೆ.

ಇದು ಸಾಮಾಜಿಕ ಅನಿಷ್ಟವಾಗಿದೆ ಎಂಬುದು ನಿಜ. ಆದರೆ..

ಬಾಲ್ಯ ವಿವಾಹವು ಖಂಡಿತವಾಗಿಯೂ ಸಾಮಾಜಿಕ ಅನಿಷ್ಟವಾಗಿದೆ. ಇದನ್ನು ತಡೆಯಲು ಸೂಕ್ತ ಮತ್ತು ವಾಸ್ತವಿಕ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಎಡಪಂಥೀಯ ಪಕ್ಷಗಳು ಮತ್ತು ಸಂಘ ಸಂಸ್ಥೆಗಳು ಈ ಕುರಿತು ಜನರಲ್ಲಿ ಅರಿವು ಮೂಡಿಸುವ ಪ್ರಯತ್ನ ಮಾಡುತ್ತಿವೆ. ಆದರೆ, ಅಸ್ಸಾಂನ ಹಿಮಂತ ಬಿಸ್ವಾ ಶರ್ಮಾ ನೇತೃತ್ವದ ಬಿಜೆಪಿ ಸರಕಾರವು ಇತ್ತೀಚೆಗೆ ಬಾಲ್ಯ ವಿವಾಹ ವಿರೋಧಿ ಅಭಿಯಾನಗಳ ಹೆಸರಿನಲ್ಲಿ ಅತ್ಯಂತ ಅಮಾನವೀಯ ರೀತಿಯಲ್ಲಿ ಎರಗಿರುವುದು ರಾಜ್ಯದ ವಿವೇಕಯುತ ವಿಭಾಗಗಳು ಮತ್ತು ಚಿಂತನಾಶೀಲ ಜನರಲ್ಲಿ ಗಂಭೀರ ಕಳವಳಕ್ಕೆ ಕಾರಣವಾಗಿದೆ.

ವಾಸ್ತವವಾಗಿ, ಕಡು ಬಡತನ ಮತ್ತು ಸಾಮಾಜಿಕ-ಆರ್ಥಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆ, ಸಮಾಜಗಳಲ್ಲಿ ಚಾಲ್ತಿಯಲ್ಲಿರುವ ಮೂಢ ನಂಬಿಕೆಗಳ ವಿವಿಧ ರೂಪಗಳು, ಲಿಂಗ ತಾರತಮ್ಯಗಳು ಪುರುಷ ಪ್ರಧಾನ ವ್ಯವಸ್ಥೆ, ಆರೋಗ್ಯದ ಅರಿವಿನ ಕೊರತೆ, ಮದುವೆಗೆ ಸಂಬಂಧಿಸಿದ ಕಾನೂನು ಮತ್ತು ವಯಸ್ಸಿನ ಮಿತಿಯ ಕುರಿತು ಅರಿವಿಲ್ಲದ್ದು, ಇತ್ಯಾದಿಗಳು ಬಾಲ್ಯವಿವಾಹ ಆಚರಣೆಗೆ ಕಾರಣವಾಗಿವೆ. ಹಿಂದುಳಿದ ಸಮುದಾಯಗಳು, ಜನಾಂಗೀಯ ಗುಂಪುಗಳು ಮತ್ತು ಹಿಂದುಳಿದ ಪ್ರದೇಶಗಳ ಜನರ ನಡುವೆ ಬಾಲ್ಯ ವಿವಾಹ ಮುಂದುವರೆಯಲು ಇದೇ ಕಾರಣ.

ಬಾಲ್ಯ ವಿವಾಹದ ನಿರ್ಮೂಲನೆಗೆ ಸಾರ್ವಜನಿಕ ಶಿಕ್ಷಣ ಮತ್ತು ಆರೋಗ್ಯ ರಕ್ಷಣೆಯ ತ್ವರಿತ ವಿಸ್ತರಣೆಯ ಜೊತೆಗೆ ಬಾಲ್ಯ ವಿವಾಹ, ಮೂಢನಂಬಿಕೆಗಳು ಮತ್ತು ಕುರುಡು ನಂಬಿಕೆಗಳ ವಿರುದ್ಧ ಜಾಗೃತಿ ಅಭಿಯಾನಗಳು ಅಗತ್ಯ. ಆದರೆ ಸರಕಾರ ಸಾರ್ವಜನಿಕ ಶಿಕ್ಷಣ, ಆರೋಗ್ಯ ಇತ್ಯಾದಿ ಕ್ಷೇತ್ರಗಳಲ್ಲಿ ದಯನೀಯವಾಗಿ ವಿಫಲವಾಗಿರುವಾಗ ಬಾಲ್ಯವಿವಾಹದ ವಿರುದ್ಧ ಕಾನೂನು ಜಾರಿಗೊಳಿಸುವ ಹೆಸರಿನಲ್ಲಿ ಅತ್ಯಂತ ಕ್ರೌರ್ಯವನ್ನು ಪ್ರದರ್ಶಿಸಿದೆ. ಸಮಸ್ಯೆಯನ್ನು ಪರಿಹರಿಸುವ ಬದಲು, ಸರ್ಕಾರದ ಕ್ರಮಗಳಿಂದ ಅದು ಇನ್ನಷ್ಟು ಉಲ್ಬಣಗೊಳ್ಳುತ್ತದೆ ಮತ್ತು ಹೊಸ ಸಾಮಾಜಿಕ ಸಮಸ್ಯೆಗಳನ್ನು ಸೃಷ್ಟಿಸುತ್ತದೆ ಎಂದು ಎಡಪಕ್ಷಗಳು ಆತಂಕ ವ್ಯಕ್ತಪಡಿಸಿವೆ.

'ಅಕ್ರಮ ಗಂಡ'ಂದಿರು ಎಂದು ಬಂಧನ:

'ಬಾಲ್ಯ ವಿವಾಹ ನಿಷೇಧ ಕಾಯ್ದೆ'ಯ ವಿವಿಧ ವಿಭಾಗಗಳ ಅಡಿಯಲ್ಲಿ ಮತ್ತು ಕಟ್ಟುನಿಟ್ಟಾದ 'ಲೈಂಗಿಕ ಅಪರಾಧದಿಂದ ಮಕ್ಕಳ ರಕ್ಷಣೆ' (ಪೋಕ್ಸೊ ಕಾಯ್ದೆ, 2012) ಅಡಿಯಲ್ಲಿ ಎಂಟು ಸಾವಿರಕ್ಕೂ ಹೆಚ್ಚು ಜನರ ವಿರುದ್ಧ ಆರೋಪಗಳನ್ನು ಹೊರಿಸಲಾಗಿದೆ. ಹಿಮಂತ ಬಿಸ್ವಾ ಶರ್ಮಾ ಸರ್ಕಾರವು ಮಕ್ಕಳ ಮೇಲಿನ ಲೈಂಗಿಕ ಅಪರಾಧಗಳ ಪ್ರಕರಣಗಳನ್ನು ಅಪ್ರಾಪ್ತ ವಯಸ್ಸಿನ ಮದುವೆಗಳೊಂದಿಗೆ ಬೆರೆಸುತ್ತಿದೆ ಎಂಬುದನ್ನು ಗಮನಿಸಬಹುದು. ಈಗಾಗಲೇ 'ಅಕ್ರಮ ಗಂಡ'ಂದಿರು ಎಂದು ಎರಡು ಸಾವಿರಕ್ಕೂ ಹೆಚ್ಚು ಮಂದಿಯನ್ನು ಬಂಧಿಸಿ ಜೈಲುಗಳಲ್ಲಿ ಇರಿಸಲಾಗಿದೆ.

ವಿವಿಧ ಭಾಗಗಳಲ್ಲಿ ಮಹಿಳೆಯರಿಂದ ಪ್ರತಿಭಟನೆ:

ಅಸ್ಸಾಂ ಸರ್ಕಾರದ ಈ ದಬ್ಬಾಳಿಕೆಗಳ ವಿರುದ್ಧ ಮಹಿಳೆಯರು ಸ್ವಯಂಪ್ರೇರಿತವಾಗಿ ಅಸ್ಸಾಂನ ವಿವಿಧ ಭಾಗಗಳಲ್ಲಿ ಪ್ರತಿಭಟನಾ ಪ್ರದರ್ಶನಗಳನ್ನು ಆಯೋಜಿಸುತ್ತಿದ್ದಾರೆ. ಕೆಲವು ಸ್ಥಳಗಳಿಂದ ಆತ್ಮಹತ್ಯೆ ಮತ್ತು ಆತ್ಮಹತ್ಯೆಯ ಪ್ರಯತ್ನಗಳ ಘಟನೆಗಳು ವರದಿಯಾಗಿವೆ. ಮತ್ತೊಂದೆಡೆ, ಧುಬ್ರಿಯ ತಾಮರ್ ಹಾಟ್ ಪೊಲೀಸ್ ಠಾಣೆಯಂತಹ ಸ್ಥಳಗಳಲ್ಲಿ ಪೊಲೀಸರು ಪ್ರತಿಭಟನಾಕಾರರ ಮೇಲೆ ಲಾಠಿಪ್ರಹಾರ ಮಾಡಿದ್ದಾರೆ. ಅವರನ್ನು ಚದುರಿಸಲು ಅಶ್ರುವಾಯು ಬಳಕೆ ಮಾಡಿದ್ದಾರೆ. ಲಹರಿ ಘಾಟ್, ಮಯೋಂಗ್, ಮೊರಿಗಾಂವ್, ಇತ್ಯಾದಿಗಳಲ್ಲಿ ಪೊಲೀಸರು ಮತ್ತು ಆಕ್ರೋಶಕ್ಕೆ ಒಳಗಾದ ಜನರ ನಡುವೆ ಉದ್ವಿಗ್ನತೆ ಮತ್ತು ಗದ್ದಲಗಳು ಹೆಚ್ಚುತ್ತಿರುವುದು ಕಂಡು ಬಂದಿವೆ.

ಹಿಮಂತ ಬಿಸ್ವಾ ಶರ್ಮಾ ಸರ್ಕಾರದ ನಿರ್ದೇಶನದಂತೆ ಮಹಿಳೆಯರ ಮೇಲೆ ನಡೆಯುತ್ತಿರುವ ಕ್ರೂರ ಪೊಲೀಸ್ ದಬ್ಬಾಳಿಕೆ ಮತ್ತು ದೌರ್ಜನ್ಯಗಳಿವು. ಅಸ್ಸಾಂ ಪೊಲೀಸರು 2020 ರಿಂದ ಬಾಲ್ಯವಿವಾಹದಲ್ಲಿ ತೊಡಗಿರುವ ಅಪರಾಧಿಗಳನ್ನು ಬಂಧಿಸಿದ್ದಾರೆ ಎಂದು ಡಿಜಿಪಿ ಹೇಳಿದ್ದಾರೆ. ಇದರಲ್ಲಿ ಸಹಜವಾಗಿ ಕೆಲವು ಪ್ರಶ್ನೆಗಳು ಉದ್ಭವಿಸುತ್ತವೆ. ಬಾಲ್ಯವಿವಾಹ ನಿಷೇಧ ಕಾಯ್ದೆಯನ್ನು ಏಕೆ ಇಷ್ಟು ದೀರ್ಘಕಾಲದಿಂದ ಜಾರಿಗೆ ತರಲಿಲ್ಲ? ಅದಕ್ಕೆ ಯಾರು ಹೊಣೆ? ಅಸ್ಸಾಂನಲ್ಲಿ ಬಿಜೆಪಿ ಸುಮಾರು ಏಳು ವರ್ಷಗಳಿಂದ ಅಧಿಕಾರದಲ್ಲಿದೆ. ಬಾಲ್ಯವಿವಾಹ, ಮೂಢನಂಬಿಕೆ ಇತ್ಯಾದಿ ಸಾಮಾಜಿಕ ಅನಿಷ್ಟಗಳ ವಿರುದ್ಧ ಸರ್ಕಾರ ಎಂದಾದರೂ ಜಾಗೃತಿ ಅಭಿಯಾನ ನಡೆಸಿದೆಯೇ? ಈ ಸಂಬಂಧಿತ ಪ್ರಶ್ನೆಗಳಿಗೆ ಶರ್ಮಾ ಸರ್ಕಾರದ ಬಳಿ ಉತ್ತರವಿಲ್ಲ. ಬಿಜೆಪಿ ನೇತೃತ್ವದ ಸರ್ಕಾರದ ಏಕೈಕ ಲಕ್ಷಣವೆಂದರೆ ಸಾಮಾಜಿಕ ಗೊಂದಲಗಳು, ಅಸ್ಥಿರತೆಗಳು ಮತ್ತು ವಿಭಜನೆಗಳ ಸೃಷ್ಟಿ, ಅದರ ಜತೆಗೆ ನಿರಂಕುಶ ಆಡಳಿತ ಎಂದು ಟೀಕಿಸಿರುವ ಎಡಪಕ್ಷಗಳು, ಬಾಲ್ಯವಿವಾಹದ ವಿರುದ್ಧ ಆಂದೋಲನದ ನೆಪದಲ್ಲಿ ಪೊಲೀಸರು ನಡೆಸುತ್ತಿರುವ ಕ್ರಮಗಳನ್ನು ಕೂಡಲೇ ನಿಲ್ಲಿಸಬೇಕೆಂದು ಒತ್ತಾಯಿಸಿದ್ದಾರೆ. ಬಾಲ್ಯವಿವಾಹಗಳಂತಹ ಸಾಮಾಜಿಕ ಅನಿಷ್ಟಗಳನ್ನು ನಿರ್ಮೂಲನೆ ಮಾಡುವ ದೃಷ್ಟಿಯಿಂದ ಪಕ್ಷಗಳು ಚೆನ್ನಾಗಿ ಪರಿಶೀಲಿಸಿದ ಮತ್ತು ಕಾರ್ಯಸಾಧ್ಯ ಕ್ರಮಗಳನ್ನು ಬಯಸುತ್ತವೆ. ಈ ದುಷ್ಟ ಆಚರಣೆಯನ್ನು ಬೇರು ಸಮೇತ ಕಿತ್ತೆಸೆಯಲು ಮೂರ್ತ ಯೋಜನೆಗಳನ್ನು ರೂಪಿಸಲು ಸರ್ಕಾರ ಮಹಿಳಾ ಸಂಘಟನೆಗಳು, ಸ್ವಯಂಸೇವಾ ಸಂಸ್ಥೆಗಳು ಮತ್ತು ರಾಜಕೀಯ ಪಕ್ಷಗಳಿಂದ ಅಭಿಪ್ರಾಯಗಳನ್ನು ಪಡೆದುಕೊಳ್ಳಬೇಕು ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಸುಪ್ರಕಾಶ್ ತಾಲೂಕ್ದಾರ್, ಸಿಪಿಐ ರಾಜ್ಯ ಕಾರ್ಯದರ್ಶಿ ಕನಕ್ ಗೊಗೋಯ್ ಮತ್ತು ಸಿಪಿಐ(ಎಂಎಲ್)-ಲಿಬರೇಶನ್ ರಾಜ್ಯ ಕಾರ್ಯದರ್ಶಿ ಬಿಬೇಕ್ ದಾಸ್ ಅವರ ಈ ಜಂಟಿ ಹೇಳಿಕೆಯಲ್ಲಿ ಒತ್ತಾಯಿಸಲಾಗಿದೆ.

ರೈತರು ಮತ್ತು ಕೃಷಿ ಕೂಲಿಕಾರರಿಂದ ದೇಶದ ಹಲವೆಡೆ ಬಜೆಟ್ ವಿರುದ್ಧ ಕರಾಳ ದಿನಾಚರಣೆ

ರೈತ ವಿರೋಧಿ, ಕಾರ್ಮಿಕ ವಿರೋಧಿ ಕೇಂದ್ರ ಬಜೆಟನ್ನು ಪ್ರತಿಭಟಿಸಲು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ (ಎಐಎಡಬ್ಲ್ಯುಯು)ಗಳ ಜಂಟಿಕರೆಯ ಮೇರೆಗೆ ರೈತರು ಮತ್ತು ಕೃಷಿ ಕೂಲಿಕಾರರು ದೇಶಾದ್ಯಂತ 'ಕರಾಳ ದಿನ' ವನ್ನು ಆಚರಿಸಿದರು. ಫೆಬ್ರುವರಿ 9 ರಂದು ನಡೆದ ಪ್ರತಿಭಟನೆಯಲ್ಲಿ 300 ಜಿಲ್ಲೆಗಳ 12,000 ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಬಜೆಟ್ ಪ್ರತಿಗಳನ್ನು ಸುಟ್ಟು ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ತಮಿಳುನಾಡಿನಲ್ಲಿ ಫೆಬ್ರವರಿ 11 ರಂದು ಮತ್ತು ಕೇರಳದಲ್ಲಿ ಫೆಬ್ರವರಿ 13 ಕರಾಳ ದಿನವನ್ನು ಆಚರಿಸಲಾಯಿತು. ಕೆಲವು ಗ್ರಾಮಗಳಲ್ಲಿ ಪ್ರಧಾನಿಯವರ ಪ್ರತಿಕೃತಿಗಳನ್ನು ದಹಿಸಲಾಯಿತು. ಸಾರ್ವಜನಿಕ ಸಭೆಗಳಲ್ಲಿ ರೈತರು ಮತ್ತು ಕಾರ್ಮಿಕರು ಬೃಹತ್ ಪ್ರಮಾಣದಲ್ಲಿ ಭಾಗವಹಿಸಿದ್ದರು. ಇದು ಕಾರ್ಪೊರೇಟ್ ಪರವಾದ ನೀತಿಗಳ ವಿರುದ್ಧ ಉಗ್ರ ಹೋರಾಟ ನಡೆಸಲಾಗುವುದು ಎಂದು ಕೇಂದ್ರ ಸರ್ಕಾರಕ್ಕೆ ನೀಡಿರುವ ತೀವ್ರ ಎಚ್ಚರಿಕೆಯಾಗಿದೆ ಎಂದು ಎರಡೂ ಸಂಘಟನೆಯ ಮುಖಂಡರು ಹೇಳಿದ್ದಾರೆ.

ಕೃಷಿ ಮತ್ತು ಸಾಮಾಜಿಕ ಕ್ಷೇತ್ರಗಳಿಗೆ ಬಜೆಟ್ ಹಂಚಿಕೆಯಲ್ಲಿ ಭಾರಿ ಕಡಿತವು ರೈತ ಮತ್ತು ಗ್ರಾಮೀಣ ಶ್ರಮಜೀವಿಗಳ ನೋವನ್ನು ತೀವ್ರಗೊಳಿಸುತ್ತದೆ. ಕೃಷಿಗಾಗಿ ಬಜೆಟ್ ಅಂದಾಜು 2022-23 ರಲ್ಲಿ ರೂ. 1,24,000 ಕೋಟಿಗಳಿಂದ ಈ ವರ್ಷ ರೂ. 1,15,531 ಕೋಟಿಗಳಿಗೆ ಗಣನೀಯವಾಗಿ ಕಡಿಮೆಯಾಗಿದೆ. ಅದೇ ರೀತಿ, ಮನರೇಗಕ್ಕೆ ಹಂಚಿಕೆಯನ್ನು 2022-23 ರ ಪರಿಷ್ಕೃತ ಅಂದಾಜಿನಲ್ಲಿ 89,000 ಕೋಟಿಗಳಿಂದ ಈ ವರ್ಷ ಕೇವಲ 60,000 ಕೋಟಿಗಳಿಗೆ ಕಡಿತಗೊಳಿಸಲಾಗಿದೆ. ಪರಿಷ್ಕೃತ ಅಂದಾಜಿನಲ್ಲಿ 2022-23ರಲ್ಲಿ 2,25,000 ಕೋಟಿ ರೂಪಾಯಿಗಳಿಂದ ಈ ವರ್ಷ 1,75,000 ಕೋಟಿ ರೂಪಾಯಿಗಳಿಗೆ ರಸಗೊಬ್ಬರ ಸಬ್ಸಿಡಿಯಲ್ಲಿ ತೀವ್ರ ಕಡಿತ ಮಾಡಲಾಗಿದೆ. 2022-23 ಪರಿಷ್ಕೃತ ಅಂದಾಜಿನಲ್ಲಿ 1,500 ಕೋಟಿ ರೂ.ಗಳಷ್ಟಿದ್ದ ಮಾರುಕಟ್ಟೆ ಮಧ್ಯಸ್ಥಿಕೆ ಮತ್ತು ಬೆಲೆ ಬೆಂಬಲ ಯೋಜನೆಗೆ 2023-24ರ ಬಜೆಟ್ ಅಂದಾಜಿನಲ್ಲಿ ಯಾವುದೇ ಉಲ್ಲೇಖವಿಲ್ಲ.

ಬಿಜೆಪಿ ನೀತಿಗಳು ಜನರ ಅಭಿವೃದ್ಧಿಗಾಗಿ ಅಲ್ಲ, ಕಾರ್ಪೊರೇಟ್ ಶಕ್ತಿಗಳ ಅಭಿವೃದ್ಧಿಗಾಗಿ ಟೊಂಕಕಟ್ಟಿವೆ. ಪ್ರಸ್ತುತ ಮಂಡಿಸಿದ ಬಜೆಟಿನಲ್ಲಿ ಇದು ಸ್ಪಷ್ಟವಾಗಿ ಕಾಣುತ್ತಿದೆ. ಈ ಬಜೆಟ್ ದೇಶದ ಬಡಜನರ ಮೇಲೆ ವಿಶೇಷವಾಗಿ ರೈತರು ಮತ್ತು ಕಾರ್ಮಿಕ ವರ್ಗ ಮತ್ತು ಸಣ್ಣ ಉತ್ಪಾದಕರ ಮೇಲೆ ಅವಿರತ ದಾಳಿಯಾಗಿದೆ. ಉತ್ಪಾದಕ ವರ್ಗಗಳಿಗೆ ಆದಾಯ ಮತ್ತು ಉದ್ಯೋಗವನ್ನು ಹೆಚ್ಚಿಸಲು ಮತ್ತು ಆ ಮೂಲಕ ಜನರ ಖರೀದಿ ಸಾಮರ್ಥ್ಯವನ್ನು ವಿಸ್ತರಿಸುವುದನ್ನು ಖಚಿತಪಡಿಸಲು ಅಗತ್ಯವಿರುವ ಸಾಮಾಜಿಕ ವಲಯದ ವೆಚ್ಚವನ್ನು ಸಾಮಾಜಿಕ ವಾಸ್ತವತೆಯ ಯಾವುದೇ ಅರಿವಿಲ್ಲದೆ ಕಡಿತಗೊಳಿಸಲಾಗಿದೆ. ಮೋದಿಯವರ 8 ವರ್ಷಗಳ ಆಡಳಿತದಲ್ಲಿ, ಜಾಗತಿಕ ಬಡತನ ಸೂಚ್ಯಂಕದಲ್ಲಿ ಭಾರತದ ಸ್ಥಾನವು 55 ನೇ ಸ್ಥಾನದಿಂದ 107 ನೇ ಸ್ಥಾನಕ್ಕೆ ಕುಸಿದಿದೆ. ಇಂತಹ ಸನ್ನಿವೇಶದಲ್ಲಿ ಮನರೇಗ, ಆಹಾರ ಸಬ್ಸಿಡಿ, ರಸಗೊಬ್ಬರ ಸಬ್ಸಿಡಿ, ವಿಮೆ, ನೀರಾವರಿ, ಕೃಷಿ, ಕಾರ್ಮಿಕ ಮತ್ತು ಇತರ ಎಲ್ಲಾ ಸಾಮಾಜಿಕ ಕ್ಷೇತ್ರಗಳಿಗೆ ಹಂಚಿಕೆಯಲ್ಲಿ ವ್ಯಾಪಕ ಕಡಿತಗಳನ್ನು ಮಾಡಲಾಗಿದೆ. 2023ರ ವೇಳೆಗೆ ರೈತರ ಆದಾಯವನ್ನು ದ್ವಿಗುಣಗೊಳಿಸುವ ತನ್ನದೇ ಆಶ್ವಾಸನೆಗೆ ಪ್ರಧಾನಿಗಳು ನಗ್ನ ವಿಶ್ವಾಸಘಾತ ಎಸಗಿದ್ದಾರೆ. ಭಾರತದ 81 ಕೋಟಿ ಜನರಿಗೆ 2 ಮತ್ತು 3 ರೂಪಾಯಿಗಳ ಸಬ್ಸಿಡಿ ದರದಲ್ಲಿ ಅಕ್ಕಿ ಮತ್ತು ಗೋಧಿ ವಿತರಣೆಯನ್ನು ನಿಲ್ಲಿಸಲಾಗಿದೆ. ಕಾನೂನುಬದ್ಧವಾಗಿ ಖಾತರಿಪಡಿಸಿದ ಸಿ2+50% ಸೂತ್ರದಂತೆ ಕನಿಷ್ಠ ಬೆಂಬಲ ಬೆಲೆ, ಬಡ ಮತ್ತು ಮಧ್ಯಮ ರೈತ ಹಾಗೂ ಕೃಷಿ ಕೂಲಿಕಾರರ ಸಮಗ್ರ ಸಾಲ ಮನ್ನಾ ಮಾಡಲು ಬಜೆಟ್‌ನಲ್ಲಿ ಯಾವುದೇ ಕ್ರಮಗಳಿಲ್ಲ. ಮನರೇಗ ಅಡಿಯಲ್ಲಿ ಕನಿಷ್ಠ 600 ರೂ. ದಿನಗೂಲಿಯಲ್ಲಿ 200 ಕೆಲಸದ ದಿನಗಳನ್ನು ನೀಡಬೇಕೆಂಬ ಬೇಡಿಕೆಯನ್ನು ತಿರಸ್ಕರಿಸಲಾಗಿದೆ.

ನವ-ಉದಾರವಾದಿ ನೀತಿಗಳು ಜಗತ್ತಿನಾದ್ಯಂತ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಆರ್ಥಿಕ ಹಿಂಜರಿತ ಸಂಭವಿಸುವಂತೆ ಮಾಡಿವೆ. 2023ರಲ್ಲಿ ವಿಶ್ವ ಆರ್ಥಿಕತೆಯು ಮತ್ತಷ್ಟು ನಿಧಾನಗೊಳ್ಳಲಿದೆ ಎಂದು ಐಎಂಎಫ್

ಪುಟ 14 ಕ್ಕೆ

ಅರ್ಥವ್ಯವಸ್ಥೆಯ ಮೂಲ ಸಮಸ್ಯೆಯನ್ನೇ ನಿರ್ಲಕ್ಷಿಸಿದ 2023–24ರ ಬಜೆಟ್

ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವಲ್ಲಿ ವಿಫಲತೆ

ಈ ವರ್ಷದ ಬಜೆಟ್ ಎರಡು ಅರ್ಥಗಳಲ್ಲಿ ದೃಷ್ಟಿದೋಷದಿಂದ ಕೂಡಿರುವುದು ಕಂಡು ಬರುತ್ತದೆ–ಒಂದು, ತೀವ್ರವಾಗಿ ಹೆಚ್ಚುತ್ತಿರುವ ಆರ್ಥಿಕ ಅಸಮಾನತೆಗಳ ಕಾಲಮಾನದಲ್ಲಿ ಸರ್ಕಾರದ ಆದಾಯವನ್ನು ಹೆಚ್ಚಿಸಿಕೊಳ್ಳುವ ಅಗತ್ಯದ ಬಗ್ಗೆ, ಮತ್ತು ಎರಡನೆಯದಾಗಿ, ದುಡಿಯುವ ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಬಲ್ಲ ಬೃಹತ್ ಸಾಮಾಜಿಕ ವೆಚ್ಚಗಳನ್ನು ಕೈಗೊಳ್ಳುವ ಅಗತ್ಯದ ಬಗ್ಗೆ ಅದು ತೋರಿರುವ ಸಂಪೂರ್ಣ ಉದಾಸೀನತೆ. ಇವಕ್ಕೆ ಬದಲಾಗಿ, ಬಂಡವಾಳ ವೆಚ್ಚಗಳ ಹೆಚ್ಚಳದಲ್ಲಿ ಉದ್ಯೋಗ ಸೃಷ್ಟಿಯ ಪರಿಣಾಮವು ಕಡಿಮೆಯಿದ್ದರೂ ಅದರ ಮೇಲೆಯೇ ಅದು ಒತ್ತು ನೀಡುತ್ತದೆ. ಈ ದೃಷ್ಟಿದೋಷ ಆಶ್ಚರ್ಯಕರವೆನಿಸಿದರೂ, ಮೂಲಸೌಕರ್ಯ ವಲಯವು ಅವರ "ಬಂಟ–ಬಂಡವಾಳಶಾಹಿ" (crony capitalists)ಗಳ ವಿಶೇಷ ಆಸಕ್ತಿಯ ವಲಯ ಎಂಬುದನ್ನು ನೆನಪಿಸಿಕೊಂಡರೆ, ಅದರ ಮೇಲಿನ ವೆಚ್ಚಗಳನ್ನು ಹೆಚ್ಚಿಸುವುದು "ಆಪ್ತರಿಗೆ" ಸಹಾಯ ಮಾಡುವ ಒಂದು ಮಾರ್ಗ ಕೂಡ ಆಗಿರುವುದರಿಂದ, ತನ್ನ ಬಂಟ ಬಂಡವಾಳಶಾಹಿಗಳ ಹಿತಾಸಕ್ತಿಗಳಿಗೇ ಪ್ರಾಧಾನ್ಯತೆ ನೀಡುವ ಒಂದು ಸರಕಾರ ದುಡಿಯುವ ಜನರ ಹಿತಾಸಕ್ತಿಗಳ ಮಾತಿರಲಿ, ದೇಶದ ಒಟ್ಟಾರೆ ಆರ್ಥಿಕ ಹಿತಾಸಕ್ತಿಗಳನ್ನಾದರೂ ಅದಕ್ಕಿಂತ ಮಿಗಿಲಾಗಿ ಪರಿಗಣಿಸಬೇಕು ಎಂದು ನಿರೀಕ್ಷಿಸಲು ಸಾಧ್ಯವೇ?

ಪ್ರೊ. ಪ್ರಭಾತ್ ಪಟ್ನಾಯಕ್ **ಅನು:ಕೆ.ಎಂ. ನಾಗರಾಜ್**

ಭಾರತದ ಇಂದಿನ ಅರ್ಥವ್ಯವಸ್ಥೆಯ ಎದ್ದುಕಾಣುವ ಲಕ್ಷಣವೆಂದರೆ, ನೈಜ ಬಳಕೆ ವೆಚ್ಚಗಳು ನಿಧಾನಗೊಂಡಿರುವುದು. ಉದಾಹರಣೆಗೆ, 2019–20 ಮತ್ತು 2022–23ರ ನಡುವೆ ನೈಜ ಬಳಕೆಯ ತಲಾ ವೆಚ್ಚದ ಬೆಳವಣಿಗೆಯು ಶೇ. 5ಕ್ಕಿಂತಲೂ ಕಡಿಮೆ ಇತ್ತು. ಇದು ಜಿಡಿಪಿಯ ಬೆಳವಣಿಗೆಯ ದರಕ್ಕಿಂತಲೂ ಕಡಿಮೆ ಇತ್ತು. ವಿಷಯವನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ, ಕೋವಿಡ್–19ರ ನಂತರ ಅರ್ಥವ್ಯವಸ್ಥೆಯಲ್ಲಿ ಕಂಡು ಬಂದ ಚೇತರಿಕೆಯು ಬಳಕೆಯ ಮೂಲಕ ಉಂಟಾದುದಕ್ಕಿಂತಲೂ ಹೆಚ್ಚಾಗಿ ಹೂಡಿಕೆಯನ್ನೇ ಆಧರಿಸಿತ್ತು. ಈ ಚೇತರಿಕೆಯಲ್ಲಿ ಎರಡು ಸಮಸ್ಯೆಗಳಿವೆ ಎಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ: ಮೊದಲನೆಯದು, ಈ ಚೇತರಿಕೆಯು ಬಹಳ ದಿನ ಉಳಿಯುವಂತದ್ದಲ್ಲ; ಉತ್ಪಾದನಾ ಸಾಮರ್ಥ್ಯವು ಪೂರ್ಣವಾಗಿ ಬಳಕೆಯಾಗದೇ ರಾಶಿ ಬೀಳುವಂತಾಗುತ್ತದೆ, ಮೂಲಸೌಕರ್ಯಗಳು ಸಮರ್ಪಕವಾಗಿ ಬಳಕೆಯಾಗದೇ ಉಳಿಯುತ್ತದೆ. ಅದರಿಂದಾಗಿ ಅವುಗಳಿಗಾಗಿ ಪಡೆದ ಬೃಹತ್ ಮೊತ್ತದ ಬ್ಯಾಂಕ್ ಸಾಲಗಳ ವಸೂಲಿಗೆ ಅಡ್ಡಿಯುಂಟಾಗುತ್ತದೆ. ಆದ್ದರಿಂದ ಇಂತಹ ಮರುಪಾವತಿಯಾಗದ ಸಾಲಗಳ ಪ್ರಮಾಣ ಬೃಹದಾಕಾರವಾಗಿ ಬೆಳೆಯುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಬ್ಯಾಂಕುಗಳು ಭಾರೀ ನಷ್ಟ ಅನುಭವಿಸುತ್ತವೆ ಮಾತ್ರವಲ್ಲ, ಇಡೀ ಹಣಕಾಸು ವ್ಯವಸ್ಥೆಯ ಸ್ಥಿರತೆಯನ್ನು ಕಾಪಾಡಿಕೊಳ್ಳುವುದೇ ಒಂದು ಬಹು ದೊಡ್ಡ ಸಮಸ್ಯೆಯಾಗುತ್ತದೆ. ಎರಡನೆಯದು, ಜನಸಾಮಾನ್ಯರ ಸ್ಥಿತಿ–ಗತಿಗಳ ಸುಧಾರಣೆಯೇ ಜಿಡಿಪಿಯ ಮೂಲ ಉದ್ದೇಶವಾಗಿರುವಾಗ, ಜನರ ಬಳಕೆಯ ಮಟ್ಟವು ನಿಶ್ಚಲವಾಗಿದ್ದರೆ, ಜಿಡಿಪಿಯ ಬೆಳವಣಿಗೆಗೆ ಅರ್ಥವೇ ಇರುವುದಿಲ್ಲ.

ಆದ್ದರಿಂದ ಅರ್ಥವ್ಯವಸ್ಥೆಯಲ್ಲಿ ಬಳಕೆಯನ್ನು ಉತ್ತೇಜಿಸುವುದೇ 2023–24ರ ಬಜೆಟ್ ಮುಂದಿದ್ದ ಮುಖ್ಯವಾದ ಕೆಲಸವಾಗಿತ್ತು.. ಅದಕ್ಕಾಗಿ ಎಲ್ಲಕ್ಕಿಂತ ಮಿಗಿಲಾಗಿ ಸಾಮಾಜಿಕ ವಲಯದ ಖರ್ಚುಗಳನ್ನು ಹೆಚ್ಚಿಸಬೇಕಿತ್ತು: ಹಸಿವಿನಿಂದ ತತ್ತರಿಸುತ್ತಿರುವ ದೇಶದಲ್ಲಿ ಆಹಾರ ಧಾನ್ಯಗಳ ದಾಸ್ತಾನುಗಳು ಎಫ್‌ಸಿಐ (ಆಹಾರ ನಿಗಮ) ನಲ್ಲಿ ಬಳಕೆಯಾಗದೆ ಉಳಿದಿರುವ ಕಾರಣವೆಂದರೆ, ಆರೋಗ್ಯ ರಕ್ಷಣೆ, ವಸತಿ, ಶಿಕ್ಷಣ ಮತ್ತು ಇತರ ತುರ್ತು ಅಗತ್ಯ ಸೇವೆಗಳಿಗಾಗಿ ಜನರು ಅತಿ ಹೆಚ್ಚು ಹಣ ಖರ್ಚುಮಾಡಿದ ನಂತರ ಅವರ ಕೈಯಲ್ಲಿ ಖರೀದಿ ಶಕ್ತಿ ಉಳಿದಿರುವುದಿಲ್ಲ. ಆದ್ದರಿಂದ, ಸಾಮಾಜಿಕ ವಲಯದ ಖರ್ಚುಗಳನ್ನು ಅವಶ್ಯವಾಗಿ ಹೆಚ್ಚಿಸಬೇಕಿತ್ತು. ಆದರೆ ಬಜೆಟ್ ಅದನ್ನೇ ನಿರ್ಲಕ್ಷಿಸಿದೆ. ಸರ್ಕಾರವು ಮಾಡಿರುವುದು ಏನೆಂದರೆ, ಬಂಡವಾಳ ವೆಚ್ಚಗಳನ್ನು ಮತ್ತಷ್ಟು ಹೆಚ್ಚಿಸುವ ಸಲುವಾಗಿ ಸಂಪನ್ಮೂಲಗಳನ್ನು ಒದಗಿಸಿಕೊಳ್ಳಲು ಅದು ಸಾಮಾಜಿಕ ವಲಯದ ಮೇಲೆ ಮಾಡುವ ಖರ್ಚುಗಳನ್ನು ಕಡಿತಗೊಳಿಸಿದೆ. ಇಂತಹ ಕಡಿತಗಳ ಪೈಕಿ ಆಘಾತಕಾರಿಯಾದ ಒಂದು ಉದಾಹರಣೆಯೆಂದರೆ, ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ(ಮನರೇಗ)ಗಾಗಿ ಮಾಡುವ ವೆಚ್ಚಗಳ ಕಡಿತವೇ. ಈ ಯೋಜನೆಗಾಗಿ ಒಂದು ದಶಕದ ಹಿಂದೆ 112,000 ಕೋಟಿ ರೂ.ಗಳನ್ನು ಖರ್ಚುಮಾಡಲಾಗುತ್ತಿತ್ತು. ಈ ವರ್ಷ ಅದನ್ನು 60,000 ಕೋಟಿ ರೂಪಾಯಿಗಳಿಗೆ ಇಳಿಸಲಾಗಿದೆ. ಅಂದರೆ, ಅರ್ಧದಷ್ಟು ಹಣವನ್ನು ಕಾಲಕ್ರಮೇಣ ಕಡಿತ ಮಾಡಲಾಗಿದೆ. ಈ ಯೋಜನೆಯಲ್ಲಿ ಕೆಲಸ ಮಾಡಿದ ಬಗ್ಗೆ ಪುರಾವೆಯನ್ನು ಮೊಬೈಲ್ ಆಪ್ ಮೂಲಕ ಸಲ್ಲಿಸಬೇಕಾಗುತ್ತದೆ. ಅದಕ್ಕೆ ಇಂಟರ್ನೆಟ್ ಸಂಪರ್ಕದ ಅಗತ್ಯವಿರುವುದರಿಂದ ಮತ್ತು ಈಗ ಗ್ರಾಮೀಣ ಭಾರತದ ಹೆಚ್ಚಿನ ಭಾಗಗಳಲ್ಲಿ ಇಂಟರ್ನೆಟ್ ಸಂಪರ್ಕವೇ ಇಲ್ಲದುದರಿಂದ, ಈ ಹೊಸ ಬದಲಾವಣೆಯಿಂದ ಹೊರಹೊಮ್ಮುವ ಒಂದು ಅನಿವಾರ್ಯ ತೀರ್ಮಾನವೆಂದರೆ, ಈ ಯೋಜನೆಯನ್ನು ಸಂಪೂರ್ಣವಾಗಿ ಕೊನೆಗೊಳಿಸಲು ಸರ್ಕಾರ ಬಯಸುತ್ತದೆ!

81 ಕೋಟಿ ಜನರಿಗೆ ತಿಂಗಳಿಗೆ 5 ಕೆಜಿ ಉಚಿತ ಆಹಾರ ಧಾನ್ಯಗಳನ್ನು ಒದಗಿಸುವುದನ್ನು ಸರ್ಕಾರವು ತನ್ನ "ಸಾಧನೆ" ಎಂದು ನಗಾರಿ ಬಾರಿಸುತ್ತದೆಯಾದರೂ, 2022–23ರ ಪರಿಷ್ಕೃತ ಅಂದಾಜುಗಳಿಗೆ ಹೋಲಿಸಿದರೆ ಆಹಾರ ಸಬ್ಸಿಡಿಯಲ್ಲಿ ಶೇ. 31ರಷ್ಟು ಕಡಿತ ಕಂಡುಬರುತ್ತದೆ. ಅಂತೆಯೇ, ಗ್ರಾಮೀಣಾಭಿವೃದ್ಧಿಗಾಗಿ ನಿಗದಿಪಡಿಸುವ ಮೊತ್ತದಲ್ಲಿ ಕಡಿತ ಮಾಡಲಾಗಿದೆ. ಶಿಕ್ಷಣ ಮತ್ತು ಆರೋಗ್ಯ ವಲಯಗಳಿಗೆ ಸ್ವಲ್ಪ ಹೆಚ್ಚು ಹಣವನ್ನು ನಿಗದಿಪಡಿಸಲಾಗಿದೆ. ಆದರೆ, ಹಣದುಬ್ಬರವನ್ನು ಗಣನೆಗೆ ತೆಗೆದುಕೊಂಡಾಗ ಈ ವಲಯಗಳ ಖರ್ಚುಗಳೂ ಕುಸಿತವನ್ನು ಕಾಣುತ್ತವೆ.

ಸಾಮಾಜಿಕ ವಲಯಗಳಿಗೆ ಕಡಿತ ಆಶ್ಚರ್ಯಕರವೇನಲ್ಲ

ಸರ್ಕಾರದ ಬಳಕೆ–ವಿರೋಧಿ ನಿಲುವು ಮತ್ತು ಆ ಮೂಲಕವಾಗಿ ಕಾಣುವ ಬಡವರ–ವಿರೋಧಿ ನಿಲುವು ಆಶ್ಚರ್ಯಕರವೇನಲ್ಲ. 2023–24ರ ಬಜೆಟ್‌ನಲ್ಲಿ ಕಾಣುವ ಗಮನಾರ್ಹವಾದ ಒಂದು ಅಂಶವೆಂದರೆ, ರಾಜ್ಯಗಳಿಗೆ ಮಾಡುತ್ತಿದ್ದ ಹಣಕಾಸಿನ ವರ್ಗಾವಣೆಯೂ ಸೇರಿದಂತೆ ಸರ್ಕಾರದ ವೆಚ್ಚಗಳ ಬೆಳವಣಿಗೆಯು ಜಿಡಿಪಿಯ ಬೆಳವಣಿಗೆಯ ದರಕ್ಕಿಂತಲೂ ಕಡಿಮೆಯಾಗುವ ನಿರೀಕ್ಷೆಯಿದೆ. ರಾಜ್ಯಗಳ ಪಾಲು 2022–23ರಲ್ಲಿ (ಪರಿಷ್ಕೃತ) ಶೇ. 15.3ರಿಂದ ಶೇ. 14.9ಕ್ಕೆ ಇಳಿಯುವ ನಿರೀಕ್ಷೆಯಿದೆ. ಈ ಇಳಿಕೆಯು, ವಿತ್ತೀಯ ಕೊರತೆಯ ಅನುಪಾತವು ಶೇ. 6.4ರಿಂದ ಶೇ. 5.9ಕ್ಕೆ ಇಳಿದಿರುವ ಅಂಶದೊಂದಿಗೆ ತಾಳೆಯಾಗುತ್ತದೆ.

ಬಳಕೆಯನ್ನು ಹಾಳತಗೊಳಿಸುವ ಕೇಂದ್ರದ ಕೃಪಣತನವನ್ನು ರಾಜ್ಯ ಸರ್ಕಾರಗಳಿಗೆ ಅದು ಮಾಡುವ ಹಣಕಾಸಿನ ವರ್ಗಾವಣೆಗಳ ಕುಸಿತದಲ್ಲೂ ಕಾಣಬಹುದು. 2021–22ರಲ್ಲಿ ರಾಜ್ಯಗಳಿಗೆ ಮಾಡಿದ ವರ್ಗಾವಣೆಯು 460,575 ಕೋಟಿ ರೂ.ಗಳಷ್ಟಿತ್ತು. ಇದು 2022–23ರಲ್ಲಿ 367,204 ಕೋಟಿಗೆ ಇಳಿಯಿತು. ಪರಿಷ್ಕೃತ ಅಂದಾಜಿನ ಪ್ರಕಾರ, ಈ ವರ್ಷ ಅದನ್ನು 307,204 ಕೋಟಿಗೆ ಇಳಿಸಲಾಗಿದೆ. ಪ್ರಸ್ತುತ ಬಜೆಟ್‌ನಲ್ಲಿ ಕೇವಲ 359,470 ಕೋಟಿ ರೂ.ಗಳನ್ನು ಒದಗಿಸಲಾಗಿದೆ.





2022–23ರಲ್ಲಿ ಕೊರತೆಯಾಗಿದ್ದ ಮೊತ್ತವನ್ನು ಈ ವರ್ಷ ತುಂಬಿಕೊಡಬೇಕಾಗಿತ್ತು. ಅದರ ಬದಲು, ಕಳೆದ ವರ್ಷದ ಬಜೆಟ್ ಅಂದಾಜಿಗಿಂತಲೂ ಕಡಿಮೆ ಹಣವನ್ನು ಒದಗಿಸಲಾಗಿದೆ. ಸಮಾಜ ಕಲ್ಯಾಣ ವೆಚ್ಚಗಳ ವಿಷಯದಲ್ಲಿ ರಾಜ್ಯ ಸರ್ಕಾರಗಳು ಹೆಚ್ಚಿನ ಜವಾಬ್ದಾರಿ ಹೊಂದಿರುವುದರಿಂದ, ಈ ವಿಷಯದಲ್ಲಿ ಸ್ವತಃ ಕೃಪಣನಾಗಿರುವ ಕೇಂದ್ರವು ಸಂಪನ್ಮೂಲಗಳನ್ನು ಉದ್ದೇಶಪೂರ್ವಕವಾಗಿ ಕೇಂದ್ರೀಕರಿಸಿಕೊಳ್ಳುವ ಮೂಲಕ ರಾಜ್ಯ ಸರ್ಕಾರಗಳನ್ನೂ ಜಿಪುಣತನಕ್ಕಿಳಿಯುವ ಒತ್ತಾಯಕ್ಕೆ ಒಳಪಡಿಸಿದೆ. ಇಂತಹ ಒತ್ತಾಯವು ದೇಶದ ಒಕ್ಕೂಟ ಸಂರಚನೆಯನ್ನು ದುರ್ಬಲಗೊಳಿಸುತ್ತದೆ.

ಬಂಡವಾಳ ವೆಚ್ಚ ಏರಿಕೆ ಕಡಿಮೆ ಪರಿಣಾಮಕಾರಿ

ಜಿಡಿಪಿಗೆ ಹೋಲಿಸಿದರೆ ಕಡಿಮೆ ಅನುಪಾತದ ಕೇಂದ್ರದ ವೆಚ್ಚಗಳೊಳಗೆ, ಬಂಡವಾಳ ವೆಚ್ಚಗಳು ತೀವ್ರವಾಗಿ ಏರಿಕೆಯಾಗಿವೆ. ಬಂಡವಾಳ ವೆಚ್ಚಗಳನ್ನು 7.5 ಲಕ್ಷ ಕೋಟಿ ರೂ.ಗಳಿಂದ 10 ಲಕ್ಷ ಕೋಟಿ ರೂ.ಗಳಿಗೆ ಏರಿಸಿದ ಬಗ್ಗೆ ಹಣಕಾಸು ಸಚಿವರು ತಮ್ಮ ಭಾಷಣದಲ್ಲಿ ಬಹಳವಾಗಿ ಹೇಳಿಕೊಂಡಿದ್ದಾರೆ. ಈ ಏರಿಕೆಯು, ಭಾರತವನ್ನು ಪ್ರಸ್ತುತ ಬಾಧಿಸುತ್ತಿರುವ ನಿರುದ್ಯೋಗದ ಪಿಡುಗಿಗೆ ರಾಮಬಾಣವಾಗಿದೆ ಎಂದಿದ್ದಾರೆ. ಆದರೆ, ಅವರು ನಾಲ್ಕು ಮುಖ್ಯವಾದ ಅಂಶಗಳನ್ನು ಮರೆಮಾಚಿದ್ದಾರೆ: ಮೊದಲನೆಯದು, ಅದೇ ಪ್ರಮಾಣದ ಹಣವನ್ನು ಸಾಮಾಜಿಕ ವಲಯಗಳಗಾಗಿ ಖರ್ಚು ಮಾಡಿದರೆ, ಕನಿಷ್ಠ ಅದೇ ಪ್ರಮಾಣದ ಉದ್ಯೋಗಗಳು ಸೃಷ್ಟಿಯಾಗುತ್ತವೆ. ಎರಡನೆಯದು, ಈ ಹಣವನ್ನು ಸಾಮಾಜಿಕ ವಲಯಗಳಿಗೆ ಖರ್ಚು ಮಾಡಿದ್ದರೆ ದುಡಿಯುವ ಜನರಿಗೆ ನೇರವಾಗಿ ಪ್ರಯೋಜನವಾಗುತ್ತಿತ್ತು – ಅವರ ನಿಜ ವೇತನಗಳು ಕುಸಿದಿವೆ ಎಂಬುದನ್ನು ಹಿಂದಿನ ದಿನ ಸಂಸತ್ತಿನಲ್ಲಿ ಮಂಡಿಸಲಾದ ಆರ್ಥಿಕ ಸಮೀಕ್ಷೆಯಲ್ಲಿ ಒಪ್ಪಿಕೊಳ್ಳಲಾಗಿತ್ತು. ಮೂರನೆಯದು, ದುಡಿಯುವ ಜನರ ಕೈಯಲ್ಲಿ ಕೊಳ್ಳುವ ಶಕ್ತಿಯನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ (ಅಂದರೆ, ಸಾಮಾಜಿಕ ವಲಯದ ಮೇಲೆ ಮಾಡುವ ಹೆಚ್ಚಿನ ವೆಚ್ಚಗಳ ಮೂಲಕ) ಹೆಚ್ಚಿಸಿದಾಗ ಉಂಟಾಗುವ ವೆಚ್ಚಗಳು ಹೊಂದಿರುವ ಗುಣಕ ಪರಿಣಾಮಗಳು ಸಾರ್ವಜನಿಕ ಬಂಡವಾಳ ವೆಚ್ಚಗಳು ಉಂಟುಮಾಡುವುದಕ್ಕಿಂತಲೂ ಹೆಚ್ಚು ಪರಿಣಾಮಕಾರಿಯಾಗುತ್ತವೆ. ಆದ್ದರಿಂದ, ಬಂಡವಾಳ ವೆಚ್ಚಗಳಾಗಿ ಮಾಡುವ ಅದೇ ಮೊತ್ತದ ಖರ್ಚುಗಳನ್ನು ಸಾಮಾಜಿಕ ವಲಯದ ಮೇಲೆ ಮಾಡಿದಾಗ, ನಿರುದ್ಯೋಗದ ಮೇಲೆ ಸಾಮಾಜಿಕ ವಲಯದ ಖರ್ಚುಗಳು ಬೀರುವ ಪರಿಣಾಮವು ಬಹಳವಾಗಿರುತ್ತದೆ. ನಾಲ್ಕನೆಯದು, ದುಡಿಯುವ ಜನರ ಬಳಕೆ ಖರ್ಚುಗಳಿಗೆ ಉತ್ತೇಜನ ನೀಡಿದಾಗ ಸೃಷ್ಟಿಯಾಗುವ ಸಂದರ್ಭಕ್ಕಿಂತ ಭಿನ್ನವಾಗಿ, ಬಂಡವಾಳ ವೆಚ್ಚಗಳ ಒಂದು ಬಹು ದೊಡ್ಡ ಪಾಲು ವಿದೇಶಗಳಿಗೆ ಬಂಡವಾಳ ಸರಕುಗಳ ಆಮದಿನ ರೂಪದಲ್ಲಿ "ಸೋರಿಕೆಯಾಗುತ್ತದೆ". ಈ ಅಂಶವು, ಈ ಎರಡು ವಿಧಾನಗಳ ವೆಚ್ಚಗಳು ಅಸಮಾನ ಉದ್ಯೋಗ ಪರಿಣಾಮಗಳನ್ನು ಹೊಂದಿವೆ ಎಂಬುದನ್ನು ಮತ್ತಷ್ಟು ಪುಷ್ಟೀಕರಿಸುತ್ತದೆ.

ನವ ಉದಾರವಾದಿ ಆಳ್ವಿಕೆಯ ಇತ್ತೀಚಿನ

ಪುಟ 14 ಕ್ಕೆ

–ಜಿ.ಎನ್.ನ

ಬಂಟ್ವಾಳದಲ್ಲಿ ಕಮ್ಯುನಿಸ್ಟ್ ಚಳುವಳಿಯ ಪರಂಪರೆ ಮತ್ತೆ ಮರುಕಳಿಸಲಿದೆ – ಕೆ.ಯಾದವ ಶೆಟ್ಟಿ

'ಸ್ವಾತಂತ್ರ್ಯ ಚಳುವಳಿಯ ಕಾಲಘಟ್ಟದಲ್ಲಿ ರೈತ ಕಾರ್ಮಿಕರ ಹೋರಾಟ ಬಂಟ್ವಾಳದಲ್ಲಿ ಪ್ರಭಾವಶಾಲಿಯಾಗಿದ್ದು ದುಡಿಯುವ ವರ್ಗದ ಆಶಾ ಕಿರಣವಾಗಿ ಮೂಡಿಬಂದಿತ್ತು. ಬಳಿಕ ಭೂ ಸುಧಾರಣೆ ಕಾನೂನಿನ ಜಾರಿಗಾಗಿ ನಡೆದ ಸಮರಶೀಲ ಹೋರಾಟ ಬಂಟ್ವಾಳದಲ್ಲಿ ತನ್ನದೇ ಛಾಪನ್ನು ಮೂಡಿಸಿತು. ವಿವಿಧ ವಿಭಾಗದ ಕಾರ್ಮಿಕರಿಗೆ ನ್ಯಾಯ ಒದಗಿಸುವಲ್ಲಿಯೂ ಕಮ್ಯುನಿಸ್ಟರ ಪಾತ್ರವಿದೆ. ಒಟ್ಟಿನಲ್ಲಿ ಸಮಾಜದ ಅಭಿವೃದ್ಧಿಯಲ್ಲಿ ಕೆಂಬಾವುಟದ ಪಾತ್ರವಿದ್ದು, ಅಂತಹ ಕಮ್ಯುನಿಸ್ಟ್ ಚಳುವಳಿಯ ಪರಂಪರೆಯನ್ನು ಮತ್ತೆ ಮರುಕಳಿಸುವಂತಾಗಲು ದುಡಿಯುವ ವರ್ಗದ ಚಟುವಟಿಕೆಗಳು ಬಂಟ್ವಾಳ ತಾಲೂಕಿನಾದ್ಯಂತ ವಿಸ್ತಾರವಾಗಿ ಬೆಳೆಯಬೇಕು. ಅಂತಹ ಚಟುವಟಿಕೆಗಳಿಗೆ ಕೇಂದ್ರ ಸ್ಥಳವಾಗಿ ಸಿಪಿಐ(ಎಂ) ಕಚೇರಿ ಕಾರ್ಯ ನಿರ್ವಹಿಸಬೇಕು ಎಂದು ಸಿಪಿಐ(ಎಂ) ದ.ಕ. ಜಿಲ್ಲಾ ಕಾರ್ಯದರ್ಶಿ ಕೆ. ಯಾದವ ಶೆಟ್ಟಿಯವರು ಆಶಯ ವ್ಯಕ್ತಪಡಿಸಿದರು.

ಅವರು ಬಿಸಿ ರೋಡ್ ನಲ್ಲಿ ನೂತನ ಪಕ್ಷದ ಬಂಟ್ವಾಳ ತಾಲೂಕು ಕಚೇರಿಯನ್ನು ಉದ್ಘಾಟಿಸಿ ಮಾತನಾಡಿದರು.



ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜೆ ಬಾಲಕೃಷ್ಣ ಶೆಟ್ಟಿ ಹಾಗೂ ಸುಕುಮಾರ್ ರವರು ಮಾತನಾಡುತ್ತಾ 'ಜನಸಾಮಾನ್ಯರ ಬದುಕಿನ ಬಗ್ಗೆ ಸದಾ ಚಿಂತಿಸಿ ಜನಪರ ಹೋರಾಟಗಳನ್ನು ಸಂಘಟಿಸಿ ಪ್ರಜಾಪ್ರಭುತ್ವದ ಆಶಯಗಳನ್ನು ಈಡೇರಿಸಲು, ದೇಶದ ಸೌಹಾರ್ದತಾ ಪರಂಪರೆಯನ್ನು ಉಳಿಸಲು ಶ್ರಮಿಸುತ್ತಿರುವ ಸಿಪಿಎಂ ಮಾತ್ರವೇ ದೇಶಕ್ಕೆ ಭವಿಷ್ಯ' ಎಂದು ಹೇಳಿದರು.

ಸಭೆಯ ಅಧ್ಯಕ್ಷತೆ ವಹಿಸಿದ ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಡಾ. ಕೃಷ್ಣಪ್ಪ ಕೊಂಚಾಡಿಯವರು ಮಾತನಾಡುತ್ತಾ, 'ಸಮಸ್ತ ಮಾನವ ಕುಲದ ಏಳಿಗೆಗಾಗಿ ಶ್ರಮಿಸುವ ಕಮ್ಯುನಿಸ್ಟ್ ಸಿದ್ಧಾಂತದಿಂದ ಮಾತ್ರವೇ ಶೋಷಿತ ಸಮುದಾಯದ ದೀನ ದಲಿತರ ಉದ್ಧಾರ ಮಾಡಲು ಸಾಧ್ಯ. ದೇಶದ ಆಳುವ ವರ್ಗ ಕೋಮುವಾದ–ಕಾರ್ಪೊರೇಟ್ ಮಿಶ್ರಣದಿಂದ ದೇಶದ ಸಂಪತ್ತನ್ನು ದೋಚುತ್ತಿದೆ. ಅಂತಹ ವಂಚಕರಿಂದ ದೇಶವನ್ನು ಉಳಿಸಬೇಕಾದರೆ ಕಮ್ಯುನಿಸ್ಟ್ ಚಳುವಳಿಯನ್ನು ವಿಸ್ತಾರವಾಗಿ ಬೆಳೆಸುವುದೊಂದೇ ದಾರಿ' ಎಂದು ಪ್ರತಿಪಾದಿಸಿದರು.

ಪಕ್ಷದ ಬಂಟ್ವಾಳ ತಾಲೂಕು ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಪಕ್ಷದ ಹಿರಿಯ ನಾಯಕರಾದ ಬಿ ವಾಸು ಗಟ್ಟಿ, ಸಂಜೀವ ಬಂಗೇರ, ಮೋನಪ್ಪ ಸಪಲ್ಯ, ನಾರಾಯಣ ಬಡಕಬೈಲ್ ಉಪಸ್ಥಿತರಿದ್ದರು. ಜಿಲ್ಲೆಯ ಕಾರ್ಮಿಕ ಮುಖಂಡರಾದ ಬಿ ಎಂ ಭಟ್ ರವರು ಶುಭಕೋರಿ ಮಾತನಾಡಿದರು.

ಸಮಾರಂಭದಲ್ಲಿ ಪಕ್ಷದ ಹಿರಿಯ ನಾಯಕರಾದ ಸುಂದರ ಶೆಟ್ಟಿ ಮೂಡಬಿದ್ರಿ, ಬಂಟ್ವಾಳ ತಾಲೂಕು ನಾಯಕರಾದ ಉದಯ ಕುಮಾರ್, ಜನಾರ್ಧನ, ಲೋಲಾಕ್ಷಿ, ಚಂದ್ರ ಪೂಜಾರಿ, ಯುವಜನ ನಾಯಕರಾದ ಅಮೀರ್, ಅಮನ್, ಕಾರ್ಮಿಕ ನಾಯಕರಾದ ವಿಮಲ, ನಾರಾಯಣ ಮುಂತಾದವರು ಹಾಜರಿದ್ದರು.

ರೈತರು ಮತ್ತು ಕೃಷಿ ಕೂಲಿಕಾರರಿಂದ ದೇಶದ ಹಲವೆಡೆ ಬಜೆಟ್ ವಿರುದ್ಧ ಕರಾಳ ದಿನಾಚರಣೆ..... ಪುಟ 12 ರಿಂದ

ಗಮನಿಸಿದೆ. ಭಾರತದ ಜನರ ಮೇಲೆ ವಿಶ್ವ ಬಂಡವಾಳಶಾಹಿ ವ್ಯವಸ್ಥೆಯ ಬಿಕ್ಕಟ್ಟು ಬೀರಲಿರುವ ಪರಿಣಾಮವನ್ನು ಕೇಂದ್ರ ಬಜೆಟ್ ಪರಿಗಣನೆಗೆ ತೆಗೆದುಕೊಂಡಿಲ್ಲ, ಭಾರತದ ಅರ್ಥ ವ್ಯವಸ್ಥೆಯನ್ನು ರಕ್ಷಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ಅದು ವಿಫಲವಾಗಿದೆ.

ಮತ್ತೊಂದೆಡೆ, ಶ್ರೀಮಂತ ವರ್ಗಗಳಿಗೆ ತೆರಿಗೆ ವಿನಾಯಿತಿಗಳನ್ನು ನೀಡಲಾಗಿದೆ. ಸಾರ್ವಜನಿಕ ಆಸ್ತಿಗಳ ಖಾಸಗೀಕರಣ ಮತ್ತು ಸಾಲ ಸೌಲಭ್ಯದ ಮೂಲಕ ಈ ವರ್ಗಕ್ಕೆ ಭಾರಿ ಲಾಭ ಗಳಿಸಲು ಹೆಚ್ಚಿನ ಮಾರ್ಗಗಳನ್ನು ಒದಗಿಸಲಾಗಿದೆ. ಕೃಷಿ ಸಾಲದ ಸಿಂಹಪಾಲು ಕೃಷಿ–ವ್ಯಾಪಾರಿಗಳಿಗೆ ಹೋಗುತ್ತದೆ. ಆಕ್ಸ್‌ಫ್ಯಾಮ್ ವರದಿಗಳ ಪ್ರಕಾರ ಜನಸಂಖ್ಯೆಯ ಅಗ್ರ ಶೇ. 10 ಮಂದಿ ಭಾರತದಲ್ಲಿ ಶೇ. 74 ಸಂಪತ್ತನ್ನು ಹೊಂದಿದ್ದಾರೆ, ಕೇಂದ್ರ ಸರ್ಕಾರವು ಅವರಿಗೆ ತೆರಿಗೆ ವಿಧಿಸಲು ಸಿದ್ಧವಾಗಿಲ್ಲ.

ಭಾರತದಲ್ಲಿ ಕಾರ್ಪೊರೇಟ್ ತೆರಿಗೆ ದರಗಳು ಹೆಚ್ಚಿವೆ ಎಂಬುದು ಸುಳ್ಳು. ಲಭ್ಯವಿರುವ ಮಾಹಿತಿಯ ಪ್ರಕಾರ, ಭಾರತದಲ್ಲಿ ಕಾರ್ಪೊರೇಟ್ ತೆರಿಗೆ ಮತ್ತು ಸಂಪತ್ತು ತೆರಿಗೆಗಳು ಕ್ರಮವಾಗಿ ಶೇಕಡಾ 15, 22 ಮತ್ತು 30ರ ವ್ಯಾಪ್ತಿಯಲ್ಲಿವೆ. ಈ ತೆರಿಗೆಗಳು ಇಟಲಿಯಲ್ಲಿ ಈ ತೆರಿಗೆ ದರಗಳು ಶೇಕಡಾ 23, 27 ಮತ್ತು 47, ಜಪಾನಿನಲ್ಲಿ ಶೇಕಡಾ 15, 29.74 ಮತ್ತು 55, ಕ್ಯೂಬಾದಲ್ಲಿ ಶೇಕಡಾ 15, 30 ಮತ್ತು 50, ಚೀನಾದಲ್ಲಿ ಕ್ರಮವಾಗಿ ಶೇಕಡಾ 0, 25 ಮತ್ತು 45.

ಬಿಜೆಪಿ ನೇತೃತ್ವದ ಮೋದಿ ಸರ್ಕಾರವು ಶ್ರೀಮಂತರ ಮೇಲೆ ತೆರಿಗೆ ವಿಧಿಸಲು ಸಿದ್ಧವಿಲ್ಲ, ಬದಲಿಗೆ ಕನಿಷ್ಠಕೂಲಿ ಮತ್ತು ಕನಿಷ್ಠ ಬೆಂಬಲ ಬೆಲೆಯನ್ನು ನಿರಾಕರಿಸುವ ಮೂಲಕ ರೈತರು ದಿವಾಳಿಯಾಗುವ, ತಮ್ಮ ಶ್ರಮವನ್ನು ಮಾರಿ ಬದುಕಬೇಕಾದ ಮಟ್ಟಕ್ಕೆ ಇಳಿಸುವ ಕ್ರೂರ ಪ್ರಕ್ರಿಯೆಗೆ ಅನುಕೂಲ ಕಲ್ಪಿಸಿಕೊಡುತ್ತಿದೆ. ಬಿಜೆಪಿ ನೀತಿಗಳು ಜನರ ಅಭಿವೃದ್ಧಿಗಾಗಿ ಅಲ್ಲ. ಕಾರ್ಪೊರೇಟ್ ಶಕ್ತಿಗಳ ಅಭಿವೃದ್ಧಿಗಾಗಿ ಟೊಂಕ ಕಟ್ಟಿ ನಿಂತಿವೆ. ಸರಕಾರದ ಈ ನೀತಿಗಳ ವಿರುದ್ದ ದೊಡ್ಡ ಮಟ್ಟದ ಚಳುವಳಿಯ ಅಗತ್ಯವಿದೆ ಎಂದು ಮುಖಂಡರು ಹೇಳಿದ್ದಾರೆ.

ಅರ್ಥವ್ಯವಸ್ಥೆಯ ಮೂಲ ಸಮಸ್ಯೆಯನ್ನೇ ನಿರ್ಲಕ್ಷಿಸಿದ 2023–24ರ ಬಜೆಟ್..... ಪುಟ 13 ರಿಂದ

ವರ್ಷಗಳಲ್ಲಿ ಬಂಡವಾಳ ವೆಚ್ಚದ ಯಂತ್ರಗಳ, ಉಪಕರಣಗಳ ಆಮದುಗಳ ಮೇಲೆ ಅವಲಂಬನೆ ಹೆಚ್ಚಾಗಿದೆ. ಇದು, ಇತ್ತೀಚೆಗೆ ನಾವು ನೋಡುತ್ತಿರುವ ಹೂಡಿಕೆ–ಆಧಾರಿತ ಚೇತರಿಕೆಯ ಹೊರತಾಗಿಯೂ, ದೇಶೀಯ (ಬಂಡವಾಳ ವೆಚ್ಚದ) ಯಂತ್ರ, ಉಪಕರಣಗಳ ವಲಯ ಬೆಳವಣಿಗೆ ಕಾಣದಿರಲು ಮುಖ್ಯವಾದ ಕಾರಣವಾಗಿದೆ. ದೇಶೀಯ ಬಂಡವಾಳ ಸರಕುಗಳ ಉತ್ಪಾದನಾ ವಲಯಕ್ಕೆ ಬೆಂಬಲವಿಲ್ಲದ ಪರಿಸ್ಥಿತಿಯಲ್ಲಿ, ಬೃಹತ್ ಬಂಡವಾಳ ವೆಚ್ಚಗಳು ದೇಶದಲ್ಲಿ ಉದ್ಯೋಗಗಳನ್ನು ಗಮನಾರ್ಹ ಪ್ರಮಾಣದಲ್ಲಿ ಸೃಷ್ಟಿಸುತ್ತವೆ ಎಂದು ನಿರೀಕ್ಷಿಸುವುದು ಕೇವಲ ಒಂದು ಭ್ರಮೆಯಾಗುತ್ತದೆ. ಆಮದುಗಳನ್ನು ಕಡಿಮೆ ಮಾಡುವ ಮೂಲಕ ದೇಶೀಯ ಉತ್ಪಾದನೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಳ್ಳುವುದರ ಬದಲು, ಬಜೆಟ್, ಅನೇಕ ರೀತಿಯ ಆಮದುಗಳ ಮೇಲೆ ಕಸ್ಟಮ್ಸ್ ಸುಂಕವನ್ನು ಕಡಿಮೆ ಮಾಡಿದೆ. ಈ ಪರಿಸ್ಥಿತಿಯಲ್ಲಿ, ಬಂಡವಾಳ ವೆಚ್ಚಗಳನ್ನು ಹೆಚ್ಚಿಸುವ ಪ್ರಸ್ತಾಪವು ಉದ್ಯೋಗಗಳನ್ನು ಗಮನಾರ್ಹ ಪ್ರಮಾಣದಲ್ಲಿ ಹೆಚ್ಚಿಸುತ್ತದೆ ಎಂದು ಹೇಳುವುದು ವಿತಂಡವಾದವಾಗುತ್ತದೆ.

ಅದಕ್ಕಿಂತಲೂ ಹೆಚ್ಚಾಗಿ, ಬೃಹತ್ ಬಂಡವಾಳ ವೆಚ್ಚಗಳು ಅಥವಾ ಬೃಹತ್ ಸಾಮಾಜಿಕ ವೆಚ್ಚಗಳ ಮೂಲಕ ಖರ್ಚು ಮಾಡುವ ಈ ಎರಡು ವಿಧಾನಗಳ ನಡುವೆ, ಮೊದಲನೆಯದು ಹೆಚ್ಚು ಆಮದು–ಕೇಂದ್ರಿತವಾಗಿರುವುದರಿಂದ, ದೇಶವು ಸಾಗುತ್ತಿರುವ ಪಾವತಿ ಶೇಷದ ಸಮಸ್ಯೆಯನ್ನು ಮತ್ತಷ್ಟು ಹದಗೆಡಿಸುತ್ತದೆ. ರೂಪಾಯಿಯ ಭಾರಿ ಅಪಮೌಲ್ಯದ ಹೊರತಾಗಿಯೂ, ವಿಶ್ವ ಆರ್ಥಿಕ ಹಿಂಜರಿತದಿಂದಾಗಿ ಭಾರತದ ರಫ್ತು ಬೆಳವಣಿಗೆಯು ಕುಂಠಿತಗೊಂಡಿದೆ ಮತ್ತು ಮಾಹಿತಿ ಲಭ್ಯವಿರುವ ಇತ್ತೀಚಿನ ತ್ರೈಮಾಸಿಕದಲ್ಲಿ ಚಾಲ್ತಿ ಖಾತೆ ಕೊರತೆಯು ಜಿಡಿಪಿಯ ಶೇ. 4ಕ್ಕಿಂತಲೂ ಹೆಚ್ಚಿಗೆ ಇದೆ. ಬಂಡವಾಳ ವೆಚ್ಚಗಳನ್ನು ಹೆಚ್ಚಿಸುವ ಬದಲು ಸಾಮಾಜಿಕ ವೆಚ್ಚಗಳನ್ನು ಹೆಚ್ಚಿಸಿದ್ದರೆ ಸರ್ಕಾರವು ಒಂದೇ ಕಲ್ಲಿನಿಂದ ಕನಿಷ್ಠ ಮೂರು ಹಕ್ಕಿಗಳನ್ನು ಕೊಲ್ಲಬಹುದಿತ್ತು: ಅದು ಜನರ ಸ್ಥಿತಿ–ಗತಿಗಳನ್ನು ನೇರವಾಗಿ ಸುಧಾರಿಸುತ್ತಿತ್ತು; ಅದು ಉದ್ಯೋಗಗಳನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸೃಷ್ಟಿಸುತ್ತಿತ್ತು; ಮತ್ತು, ಅದು ಪಾವತಿ ಶೇಷದ ಪ್ರಸ್ತುತ ಕೊರತೆಯನ್ನು ನಿಯಂತ್ರಣದಲ್ಲಿಡುತ್ತಿತ್ತು. ಇದಕ್ಕೆ ಬದಲಾಗಿ, ಬಜೆಟ್ ಅತಿ ಕೆಟ್ಟದಾದ ಆಯ್ಕೆಯನ್ನು ಆರಿಸಿಕೊಂಡಿದೆ.

ಸರ್ಕಾರದ ಆದಾಯವನ್ನು ಹೆಚ್ಚಿಸುವ ಗಂಭೀರ ಕ್ರಮಗಳಿಲ್ಲ

ಇಲ್ಲಿಯವರೆಗೆ ನಾನು ಸರ್ಕಾರದ ಮುಂದಿದ್ದ ಎರಡು ಆಯ್ಕೆಗಳನ್ನು ಮಾತ್ರ ಹೋಲಿಕೆ ಮಾಡಿದ್ದೇನೆ. ಅದು ಕೆಟ್ಟದನ್ನು ಆರಿಸಿಕೊಂಡಿದೆ ಎಂದು ವಾದಿಸಿದ್ದೇನೆ. ಆದರೆ, ಸರ್ಕಾರವು ಈ ಎರಡು ಆಯ್ಕೆಗಳಿಗೆ ಮಾತ್ರ ಸೀಮಿತಗೊಂಡಿಲ್ಲ. ಸರ್ಕಾರದ ಅಂದಾಜಿನ ಪ್ರಕಾರವೇ, ಜಿಡಿಪಿಯೊಂದಿಗೆ ಸರ್ಕಾರದ ಆದಾಯದ ಅನುಪಾತವು ಪ್ರಸಕ್ತ ಹಣಕಾಸು ವರ್ಷಕ್ಕೆ ಹೋಲಿಸಿದರೆ ಮುಂದಿನ ವರ್ಷವೂ ಬದಲಾಗದಿರುವ ಸಾಧ್ಯತೆಯಿದೆ. ಆದಾಯ ಮತ್ತು ಸಂಪತ್ತಿನ ಅಸಮಾನತೆಯಲ್ಲಿ ಭಾರಿ ಹೆಚ್ಚಳ ಕಂಡುಬಂದಿರುವ ಸಂಗತಿಯು ಎಲ್ಲರಿಗೂ ತಿಳಿದಿದೆ. ಹೆಚ್ಚುತ್ತಿರುವ ಅಸಮಾನತೆಯ ಈ ಕಾಲಘಟ್ಟದಲ್ಲಿ, ಸಂಪತ್ತಿನ ತೆರಿಗೆ ಇಲ್ಲದ ಸಂದರ್ಭದಲ್ಲೂ, ಜಿಡಿಪಿಯೊಂದಿಗೆ ತೆರಿಗೆ ಆದಾಯದ ಅನುಪಾತವು ಅನಿವಾರ್ಯವಾಗಿ ಹೆಚ್ಚಳವನ್ನು ತೋರಿಸುವಂತಿರಬೇಕು; ಶ್ರೀಮಂತರ ಸಂಪತ್ತಿನ ಮೇಲೆ ತೆರಿಗೆ ವಿಧಿಸುವುದು ಅಥವಾ ಅವರಿಂದ ಬೇರೆ ಯಾವ ರೀತಿಯಲ್ಲಾದರೂ ಸರಿಯೇ ಆದಾಯವನ್ನು ಸಂಗ್ರಹಿಸುವ ಬಗ್ಗೆ ಒಂದು ಸ್ಪಷ್ಟತೆ ಇರಬೇಕಾಗುತ್ತದೆ. ಆದರೆ, ಈ ಬಜೆಟ್‌ನಲ್ಲಿರುವ ಗಮನಾರ್ಹವಾದ ಸಂಗತಿಯೆಂದರೆ, ಸರ್ಕಾರದ ಆದಾಯವನ್ನು ಹೆಚ್ಚಿಸುವ ಗಂಭೀರ ಕ್ರಮಗಳು ಇಲ್ಲದಿರುವುದು..

ವೇತನ ಪಡೆಯುವ ಕೆಲವು ನಿರ್ದಿಷ್ಟ ವಿಭಾಗಗಳಿಗೆ ಆದಾಯ ತೆರಿಗೆ ವಿನಾಯಿತಿ ನೀಡಲಾಗಿದೆ. ಆದರೆ, ಎರಡು ಅರ್ಥಗಳಲ್ಲಿ ಸರ್ಕಾರದ ದೃಷ್ಟಿದೋಷವು ಆಶ್ಚರ್ಯಕರವಾಗಿ ಕಾಣುತ್ತದೆ: ಒಂದು, ತೀವ್ರವಾಗಿ ಹೆಚ್ಚುತ್ತಿರುವ ಆದಾಯ ಮತ್ತು ಸಂಪತ್ತಿನ ಅಸಮಾನತೆಗಳ ಕಾಲಮಾನದಲ್ಲಿ ಜಿಡಿಪಿಯ ಅನುಪಾತವಾಗಿ ಸರ್ಕಾರದ ಆದಾಯವನ್ನು ಹೆಚ್ಚಿಸಿಕೊಳ್ಳುವ ಅಗತ್ಯದ ಬಗ್ಗೆ ಅದು ತೋರಿದ ಸಂಪೂರ್ಣ ಉದಾಸೀನತೆ; ಮತ್ತು ಎರಡನೆಯದಾಗಿ, ದುಡಿಯುವ ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಬಲ್ಲ ಬೃಹತ್ ಸಾಮಾಜಿಕ ವೆಚ್ಚಗಳನ್ನು ಕೈಗೊಳ್ಳುವ ಅಗತ್ಯದ ಬಗ್ಗೆ ಅದು ತೋರಿದ ಸಂಪೂರ್ಣ ಉದಾಸೀನತೆ. ಈ ಕ್ರಮಗಳಿಗೆ ಬದಲಾಗಿ, ಬಂಡವಾಳ ವೆಚ್ಚಗಳ ಮೇಲೆ ಅದು ಒತ್ತು ನೀಡುತ್ತದೆ – ಅದರ ಉದ್ಯೋಗ ಸೃಷ್ಟಿಯ ಪರಿಣಾಮವು ಹೆಚ್ಚಾಗಿ ವಿದೇಶಗಳಿಗೆ ಸೋರಿಕೆಯಾಗುತ್ತದೆಯಾದರೂ.

ಈ ಬಜೆಟ್ ದೃಷ್ಟಿದೋಷದಿಂದ ಕೂಡಿದೆ ಎಂದು ಭಾವಿಸುವುದು, ಅದನ್ನು ನಾನು ಈಗಾಗಲೇ ಹೇಳಿದ್ದೇನೆ, ಬಹುಶಃ ಮುಖ್ಯವಾದ ಅಂಶವನ್ನೇ ಮರೆತುಬಿಟ್ಟಂತಾಗುತ್ತದೆ. ಮೂಲಸೌಕರ್ಯ ವಲಯವು "ಬಂಟ ಬಂಡವಾಳಶಾಹಿಗಳು" (crony capitalists) ವಿಶೇಷ ಆಸಕ್ತಿಯನ್ನು ಹೊಂದಿರುವ ವಲಯವಾಗಿದೆ. ಹಾಗಾಗಿ, ಮೂಲಸೌಕರ್ಯಗಳ ಮೇಲಿನ ವೆಚ್ಚಗಳು "ಆಪ್ತರಿಗೆ" ಸಹಾಯ ಮಾಡುವ ಒಂದು ಮಾರ್ಗವಷ್ಟೇ. ಈ ನಿರ್ದಿಷ್ಟ ಸರ್ಕಾರವು, ಅದರ ಹಿಂದಿನ ಸಾಧನೆಯ ಆಧಾರದ ಮೇಲೆ ಹೇಳುವುದಾದರೆ, ದುಡಿಯುವ ಜನರ ಹಿತಾಸಕ್ತಿಗಳ ಮಾತಿರಲಿ, ದೇಶದ ಒಟ್ಟಾರೆ ಆರ್ಥಿಕ ಹಿತಾಸಕ್ತಿಗಳನ್ನು ತನ್ನ ಬಂಟ ಬಂಡವಾಳಶಾಹಿಗಳ ಹಿತಾಸಕ್ತಿಗಳಿಗಿಂತ ಮಿಗಿಲಾಗಿ ಪರಿಗಣಿಸುತ್ತದೆ ಎಂದು ನಿರೀಕ್ಷಿಸಲಾಗದು.

ಭಯ, ಭಯ, ಭಯ.. .. ..ಕಮ್ಯುನಿಸಮ್ ಎಂದರೇ ಭಯ. ಕಮ್ಯುನಿಸ್ಟ್ ಸರ್ಕಾರವೆಂದರೆ ಭಯ...!!!

"ಭಾರತದ ಒಂದು ರಾಜ್ಯ ಕೇರಳದಲ್ಲಿ ಕಮ್ಯುನಿಸ್ಟ್ ಪಕ್ಷ ಚುನಾವಣೆಯ ಮೂಲಕ ಅಧಿಕಾರ ಪಡೆದಿದೆಯಂತೆ" ಇದು 1957ರ ಏಪ್ರಿಲ್ 5 ರಂದು ಇಎಂಎಸ್ ನಂಬೂದ್ರಿಪಾದ್ ನಾಯಕತ್ವದಲ್ಲಿ ಕಮ್ಯುನಿಸ್ಟ್ ಪಕ್ಷ ಅಧಿಕಾರ ವಹಿಸಿಕೊಂಡ ನಂತರದಲ್ಲಿ ವಿಶ್ವಾದ್ಯಂತ ದೊಡ್ಡ ಸುದ್ದಿ. ಒಂದು ಕಡೆ ಮಹದಾಶ್ಚರ್ಯದ ಜೊತೆಗೆ ಸಂತೋಷ. ಮತ್ತೊಂದು ಕಡೆ ಆಶ್ಚರ್ಯದ ಜೊತೆಗೆ ಆಘಾತ, ಭಯ.

ಅಮೇರಿಕ, ಯುರೋಪುಗಳ ಕಾರ್ಪೊರೇಟ್ ಪ್ರಭುಗಳಿಗೆ ಆಶ್ಚರ್ಯವಾಗುವುದು ಸಹಜ. ಆದರೆ ಆಘಾತ, ಭಯ, ಆತಂಕಗಳು ಉಂಟಾದವು. ಅಷ್ಟೇ ಅಲ್ಲ ಕ್ಯಾಥೋಲಿಕ್ ಚರ್ಚ್‌ನ ಪೋಪರೂ ಸೇರಿದಂತೆ ಕೇರಳದ ಧರ್ಮಾಧಿಕಾರಿಗಳಿಗೆ, ಭಾರತದಲ್ಲಿ ಅಂದು ಆಳುತ್ತಿದ್ದ ಕಾಂಗ್ರೆಸ್‌ನ ನಾಯಕರಿಗೆ, ಕೇರಳದ ಪ್ಲಾಂಟೇಷನ್ ಒಡೆಯರಿಗೆ, ದೊಡ್ಡ ದೊಡ್ಡ ಭೂಮಾಲಿಕರಿಗೆ, ಖಾಸಗಿ ಶಿಕ್ಷಣ ಸಂಸ್ಥೆಗಳ ಒಡೆಯರಿಗೆ ಇವರಿಗೆಲ್ಲ ಭಯ ಆತಂಕಗಳು ಉಂಟಾದವು. ಇದೆಲ್ಲದರ ಫಲವಾಗಿ ಪ್ರಜಾಪ್ರಭುತ್ವ ತತ್ವಗಳಿಗೆ ಅತ್ಯಂತ ಬದ್ಧರೆಂದು ಸಾರಿಕೊಳ್ಳುತ್ತಿದ್ದ ಪ್ರಧಾನಿ ನೆಹರೂ ಅತ್ಯಂತ ಪ್ರಜಾಪ್ರಭುತ್ವ ಬದ್ಧವಾಗಿ ಆಯ್ಕೆಯಾದ ಭಾರತದ ಮೊದಲ ಕಾಂಗ್ರೆಸ್ಸೇತರ ಸರ್ಕಾರವನ್ನು ವಜಾ ಮಾಡಿದರು. ಈಇಡೀ ಪ್ರಕ್ರಿಯೆಯ ಚಿತ್ರಣವನ್ನು ಈ ಪುಸ್ತಕದ ಲೇಖಕರೂ ಸಂಶೋಧಕರೂ ಆಗಿರುವ ಡಾ.ಪಿ.ಎಂ.ಸಲೀಂ ಸಂಶೋಧಕರು ಈ ಪುಸ್ತಕದಲ್ಲಿ ವಿವರವಾಗಿ ಮಂಡಿಸಿದ್ದಾರೆ.

ಕಾಂಗ್ರೆಸ್‌ನ ಈ ಭಯ ಜೊತೆಗೆ ಕ್ಯಾಥೊಲಿಕ್ ಧರ್ಮಾಧಿಕಾರಿಗಳಿಗೆ ಕಮ್ಯುನಿಸಮ್ ಬಗ್ಗೆ ಇರುವ ಭಯ ಮತ್ತು ದ್ವೇಷ ಜೊತೆಗೆ ಅನೇಕ ಸ್ಥಳೀಯ, ರಾಷ್ಟ್ರೀಯ, ಅಂತರರಾಷ್ಟ್ರೀಯ ಶಕ್ತಿಗಳು ಜೊತೆಗೂಡಿ ಕೇರಳದ ಕಮ್ಯುನಿಸ್ಟ್ ಸರ್ಕಾರವನ್ನು ಕಿತ್ತೊಗೆಯಲು ಇನ್ನಿಲ್ಲದ ಪ್ರಯತ್ನ ನಡೆಸಿದವು. ಕೃತಿಯಲ್ಲಿ ಈ ಪ್ರಕ್ರಿಯೆಗಳನ್ನು ವಸ್ತು ನಿಷ್ಟವಾಗಿ ವಿವರಿಸಲಾಗಿದೆ ಮತ್ತು ವಿಶ್ಲೇಷಿಸಲಾಗಿದೆ. ಕೃತಿಕಾರರಾದ ಪಿ.ಎಂ. ಸಲೀಂರವರು ತಮ್ಮ ಪಿಎಚ್‌ಡಿ ಪದವಿಗಾಗಿ ನಡೆಸಿದ ಸಂಶೋಧನೆಯ ಫಲ ಈ ಕೃತಿ. ಇಂದಿನ ಹಲವು ವಿಶ್ವ ವಿದ್ಯಾಲಯಗಳ ಪಿಎಚ್‌ಡಿ ಪ್ರಬಂಧಗಳ ದುಸ್ಥಿತಿ, ಅವುಗಳಲ್ಲಿ ಎದ್ದು ಕಾಣುವ ಕೊರತೆಗಳಿಂದ ಮುಕ್ತವಾದ ಸಂಶೋಧನೆಯಾಗಿದೆ. ಶ್ರಮ ಪೂರಿತವಾದ ಆಕರಗಳ ಅಧ್ಯಯನ, ವಸ್ತು ನಿಷ್ಟ ವಿಶ್ಲೇಷಣೆಯಿಂದ ಈ ಸಂಶೋಧನೆ ಬಹಳ ಉಪಯುಕ್ತವಾದ ಕೃತಿಯಾಗಿದೆ.

ವಿಶ್ವ ಮಟ್ಟದ ಪವಿತ್ರ ಕೂಟ ಕೇರಳದಲ್ಲಿ ಪವಿತ್ರ ಕೂಟ ಕಟ್ಟಿದ ಬಗೆ ಮತ್ತದರ ಕಾರ್ಯದ ಬಗ್ಗೆ ಪುಸ್ತಕದಲ್ಲಿ ವಿವರವಾಗಿ ಚಿತ್ರಿಸಲಾಗಿದೆ. ಈ ಕೂಟ ಕಟ್ಟುವ ಕ್ರಿಯೆಯಲ್ಲಿ ಪ್ರಧಾನ ಪಾತ್ರ ವಹಿಸಿದ್ದು ಕ್ಯಾಥೊಲಿಕ್ ಚರ್ಚ್ ಮತ್ತು ಕಾಂಗ್ರೆಸ್ ಎಂಬುದನ್ನು ವಿವರಿಸಿದೆ. ಕಮ್ಯುನಿಸ್ಟ್ ಸರ್ಕಾರವನ್ನು ಕಿತ್ತೊಗೆದ ಎರಡು ದಶಕಗಳ ನಂತರ ಬೆಳಕಿಗೆ ಬಂದದ್ದು ಅಮೇರಿಕದ ಸರ್ಕಾರದ ಪಾತ್ರ. 1957–59ರ ಕೇರಳ ಕಮ್ಯುನಿಸ್ಟ್ ಸರ್ಕಾರದ ಅವಧಿಯಲ್ಲಿ ರಾಯಭಾರಿಯಾಗಿದ್ದ ಎಲ್ಸ್ವರ್ತ್ ಬಂಕರ್ ಎಂಬುವರು ನಂತರ ಮೆತ್ತಗೆ ವಿಡಿಯೋ ಒಂದರಲ್ಲಿ ಬಾಯಿ ಬಿಡುತ್ತಾರೆ, ಹೌದು ತಾನೇ ಈ ದಂಗೆಗೆ ದುಡ್ಡು ಕೊಟ್ಟಿದ್ದೇನೆಂದು.

1959 ರ ಕೇರಳದ ಮೊದಲ ಕಮ್ಯುನಿಸ್ಟ್ ಸರ್ಕಾರದ ವಜಾ ನಂತರ ಅಮೆರಿಕದ ಸರ್ಕಾರ ಮತ್ತು ಕಾರ್ಪೊರೇಟ್ ಗಳು ಹಾಗೂ ಕ್ಯಾಥೊಲಿಕ್ಕರು ಭಾರತದಲ್ಲಿ ಕಮ್ಯುನಿಸ್ಟರನ್ನು ಅಡಗಿಸಿ ಬಿಟ್ಟೆವು ಎಂಬ ಸಾಧನೆಯ ಹರುಷ ತುಂಬಿ ತುಳುಕಿತ್ತೇನೋ ಗೊತ್ತಿಲ್ಲ. ಆದರೆ ಮುಂದೇನಾಯಿತು?

ಕೇರಳದ ಚುನಾವಣಾ ರಂಗದಲ್ಲಿ ಎರಡನೇ ಬಾರಿಗೆ ಎಲ್.ಡಿ.ಎಫ್ ಮತ್ತೆ ಜಯ ಗಳಿಸಿದ್ದು ಮತ್ತೊಂದು ದಾಖಲೆ.

ಆದರೆ ಭಾರತದ ರಾಜಕೀಯ ಜನಪರತೆಗೆ ಅತ್ಯಂತ ಪ್ರತಿಕೂಲವಾಗಿದೆ. ಕೇಂದ್ರ ಸರ್ಕಾರ ಸರ್ವಾಧಿಕಾರಿ ಆರೆಸ್ಸೆಸ್– ಬಿಜೆಪಿಯ ಹಿಡಿತಕ್ಕೆ ಸಿಕ್ಕಿದೆ. ಅದು ರಾಜ್ಯಪಾಲರೂ ಸೇರಿದಂತೆ ತನ್ನ ಅಧೀನದ ಎಲ್ಲ ಸಂಸ್ಥೆಗಳನ್ನು ಬಳಸಿ ಕೇರಳ ಸರ್ಕಾರವನ್ನು ದಿನಂಪ್ರತಿ ಹಲವು ತೆರನಾಗಿ ಕಾಡತೊಡಗಿದೆ. ಆರೆಸ್ಸೆಸ್– ಬಿಜೆಪಿಯ ಕೋಮು ದ್ವೇಷ, ಹಿಂಸಾ ರಾಜಕಾರಣ ಕೇರಳದಲ್ಲಿ ಮುಸ್ಲಿಂ, ಕ್ರಿಶ್ಚಿಯನ್ ಸಮುದಾಯಕ್ಕೆ ಭಯವನ್ನುಂಟು ಮಾಡಿದೆ. ಇದು ಎಡಪಂಥೀಯ ಸರ್ಕಾರಕ್ಕೆ ಮತ್ತು ರಾಜಕಾರಣಕ್ಕೆ ದೊಡ್ಡ ಸವಾಲುಗಳನ್ನು ಒಡ್ಡಿದೆ.

ಹೊಸ ಪರಿಸ್ಥಿತಿಯಲ್ಲಿ ಹೊಸ ಪವಿತ್ರ ಕೂಟ ರಚನೆಯಾಗಿದೆ. ಮತ್ತಷ್ಟು ಬಲವಾಗಿ ಕ್ರಿಶ್ಚಿಯನ್, ಮುಸ್ಲಿಂ ಧಾರ್ಮಿಕ ಶಕ್ತಿಗಳು, ಜಾತಿವಾದಿ ಸಂಘಟನೆಗಳು. ಇವುಗಳ ಜೊತೆಗೆ ಜೊತೆಗೆ ಹಿಂದೂ ಧಾರ್ಮಿಕ ದುರುಪಯೋಗ ಹೊಸತಾಗಿ ಸೇರಿದೆ. ದೇಶದ ಎರಡು ಮುಖ್ಯ ಕಾರ್ಪೊರೇಟ್ ಪರ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್ ಕಮ್ಯುನಿಸ್ಟ್ ನೇತೃತ್ವದ ಎಲ್.ಡಿ.ಎಫ್ ವಿರುದ್ಧ ಜೊತೆಗೂಡಿವೆ.

ಹೀಗೆ ಕಮ್ಯುನಿಸ್ಟರನ್ನು ಕಂಡರೆ ಬೃಹತ್ ಕಾರ್ಪೊರೇಟ್ ಗಳಿಗಿರುವ ಭಯ ಅವರ ಸರಕಾರಗಳು ಮತ್ತು ಅವರ ನಿಯಂತ್ರಣದ ಮಾಧ್ಯಮ, ಬೌದ್ಧಿಕ ಸಂಸ್ಥೆಗಳು, ದೇಶದ ಒಳಗಿನ ಗುತ್ತೇದಾರಿ ಕಾರ್ಪೊರೇಟ್ ಗಳ ಪಕ್ಷಗಳು ಕೂಡಾ ತಮ್ಮೆಲ್ಲ ಶಕ್ತಿ, ಸಾಮರ್ಥ್ಯವನ್ನು ವಿನಿಯೋಗಿಸಿ ಕಮ್ಯುನಿಸ್ಟ್ ಸರ್ಕಾರಗಳನ್ನು ಬೆಳೆಯಲು ಬಿಡದಂತೆ, ಗೆಲ್ಲಲಾಗದಂತೆ ಪ್ರಯತ್ನಗಳನ್ನು ನಡೆಸುತ್ತಿವೆ. ಕೇರಳದ ಶೋಷಕ ಶಕ್ತಿಗಳಿಗೆ ಅಪಾರ ಬಲ ತುಂಬುತ್ತವೆ. ಹೀಗೆ ಎಲ್ಲ ದಿಕ್ಕುಗಳಿಂದಲೂ ಕಮ್ಯುನಿಸ್ಟ್ ಸರ್ಕಾರವನ್ನು ಮುತ್ತುವ ಪವಿತ್ರ ಕೂಟಗಳು ಹೊಸ ಸನ್ನಿವೇಶಗಳಲ್ಲಿ ಹೊಸ ಹೊಸದಾಗಿ ರಚನೆಯಾಗುತ್ತಲೇ ಇವೆ. ವರ್ಗ ಸಂಘರ್ಷ ನಿರಂತರವಾಗಿದೆ.

'ಇ.ಎಂ.ಎಸ್ ಸರಕಾರ ವಜಾವ್ರೂ, ವಿಮೋಚನ ಸಮರವೆಂಬ ಪಿತೂರಿಯೂ'.... ಪುಟ 16 ರಿಂದ

ತಲುಪಿಸಲು ವಿಶೇಷ ತುರ್ತು ಇದೆ. ಇದಕ್ಕಾಗಿ ಈ ಪುಸ್ತಕವನ್ನು ಕಾ. ಕೆ. ಪ್ರಭಾಕರನ್ ಅನುವಾದಿಸಿದ್ದು ಕ್ರಿಯಾ ಮಾಧ್ಯಮ ಅದನ್ನು **'ಇ.ಎಂ.ಎಸ್ ಸರಕಾರದ ವಜಾವ್ರೂ, ವಿಮೋಚನ ಸಮರವೆಂಬ ಪಿತೂರಿಯೂ'** ಎಂಬ ತಲೆಬರಹದೊಂದಿಗೆ ಪ್ರಕಟಿಸಿದೆ. ಈ ಪುಸ್ತಕವು **ಕಾ.ಜಿ.ಎನ್.ನಾಗರಾಜ್ ಅವರ ಮೌಲಿಕ ಮುನ್ನುಡಿಯನ್ನು** ಸಹ ಒಳಗೊಂಡಿದೆ.

ಈ ಪುಸ್ತಕವನ್ನು ಫೆಬ್ರುವರಿ 20 ರಂದು ಕಾಸರಗೋಡಿನ ಕುಂಬಳೆಯಲ್ಲಿ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಬಿಡುಗಡೆ ಮಾಡಲಿದ್ದಾರೆ ಈ ಸಂದರ್ಭದಲ್ಲಿ ಈ ಪುಸ್ತಕಕ್ಕೆ ಕಾ.ಜಿ.ಎನ್.ನಾಗರಾಜ್ ಅವರ ಮೌಲಿಕ ಮುನ್ನುಡಿಯ ಆಯ್ದ ಭಾಗಗಳು.

'ಪಠಾಣ್' ಯಶಸ್ಸು #BoycottBollywood ಗ್ಯಾಂಗಿನ ಸೋಲಿನ ಸೂಚನೆಯೇ?.......... ಪುಟ 16 ರಿಂದ

ಬಾಯ್ಕಾಟ್ ಗ್ಯಾಂಗಿನ ಸಾಮಾನ್ಯ ಸೂತ್ರ. ಇದನ್ನು ಎಲ್ಲ ಹಿಂದೂಗಳ ಸಾಮಾನ್ಯ ತಿಳಿವಳಿಕೆ ಮಾಡಲು ಪ್ರಯತ್ನಿಸುತ್ತಿತ್ತು. 'ಪಠಾಣ್' ನ ಮುಖ್ಯ ಪಾತ್ರ ಮುಸ್ಲಿಂ ಅಪ್ರತಿಮ ದೇಶಭಕ್ತ.. ಅವನು ನೆರೆಯ 'ವೈರಿ ದೇಶ'ದ ವಿರುದ್ಧ ದೇಶದ ಹಿತಾಸಕ್ತಿಗಾಗಿ ಹೋರಾಡುತ್ತಾನೆ. ಇದು ಬಾಯ್ಕಾಟ್ ಗ್ಯಾಂಗಿಗೆ ತೀರಾ ಅಪಥ್ಯ. ಆದರೆ ಫಿಲಂ ನೋಡುಗರು ಅದನ್ನು ಸಂತೋಷದಿಂದಲೇ ಸ್ವೀಕರಿಸಿ ಬಾಯ್ಕಾಟ್ ಗ್ಯಾಂಗಿನ ಸೂತ್ರವನ್ನು ತಿರಸ್ಕರಿಸಲಿಲ್ಲವೇ?

* ಯಾವುದೇ ಫಿಲಂ ನ ಮುಖ್ಯ ಪಾತ್ರ ಮುಸ್ಲಿಂ ಆಗಿರಬಾರದು. ಅಥವಾ ಮುಸ್ಲಿಂ ಸಮುದಾಯದ ಸಮಸ್ಯೆಗಳನ್ನು ತೋರಿಸುವಂಥದು ಆಗಿರಬಾರದು. 'ಪಠಾಣ್' ಮುಖ್ಯ ಪಾತ್ರ ಮುಸ್ಲಿಂ. ಇಡೀ ಫಿಲಂ ಅವನ ಸುತ್ತ ಗಿರಕಿ ಹೊಡೆಯುತ್ತದೆ. ಮಾತ್ರವಲ್ಲದೆ ಆ ಪಾತ್ರ ವಹಿಸಿದ ಮುಖ್ಯ ಕಲಾವಿದನೂ ಮುಸ್ಲಿಂ. ಬಾಯ್ಕಾಟ್ ಗ್ಯಾಂಗಿಗೆ ಆಕ್ರೋಶಕ್ಕೆ ಕಾರಣವಾಗುವ ಈ ಸೂತ್ರವನ್ನೂ ಫಿಲಂ ನೋಡುಗರು ತಿಪ್ಪೆಗೆಸೆದಿಲ್ಲವೇ?

ಬಾಯ್ಕಾಟ್ ಗ್ಯಾಂಗ್ ಕಳೆದ ಕೆಲವು ವರ್ಷಗಳಲ್ಲಿ ಕೆಲವು ರೀತಿಯ ಫಿಲಂ ಗಳು, ಕಲಾವಿದರ ವಿರುದ್ಧ ಮಾತ್ರವಲ್ಲ, ಇಡೀ ಬಾಲಿವುಡ್ ವಿರುದ್ಧ ತಿರುಗಿ ಬಿದ್ದಿತ್ತು. ಈ ಕೆಳಗಿನ ತನ್ನ ಕೆಲವು ಅನಿಸಿಕೆಗಳನ್ನು ಎಲ್ಲರ ತಿಳಿವಳಿಕೆ ಮಾಡಲು ಪ್ರಯತ್ನಿಸುತ್ತಿತ್ತು. ಇಲ್ಲೂ ಮುಸ್ಲಿಮರು ಗುರಿಯಾಗಿದ್ದರೂ ಇಡೀ ಬಾಲಿವುಡ್ ನ್ನು ಗುರಿ ಮಾಡಲು ಆರಂಭಿಸಿತ್ತು. ಸುಶಾಂತ್ ಸಿಂಗ್ ಸಾವಿಗೆ ರಿಯಾ ಚಕ್ರವರ್ತಿ ಕಾರಣವೆಂಬ ದೊಡ್ಡ ಮಾಧ್ಯಮ ಪ್ರಚಾರದ ಹಿಂದೆ ಇಡೀ ಬಾಲಿವುಡ್ ಡ್ರಗ್ಸ್, ಕುಡಿತ, ಅನೈತಿಕ ವ್ಯವಹಾರಗಳ ಕೂಪವೆಂದು ಚಿತ್ರಿಸುವ ಪ್ರಯತ್ನವಿತ್ತು. ಆದ್ದರಿಂದ ಕೆಲವು ಫಿಲಂಗಳ, ಕಲಾವಿದರ ಬಾಯ್ಕಾಟ್ ಕ್ರಮೇಣ 'ಬಾಯ್ಕಾಟ್ ಬಾಲಿವುಡ್' ಆಗಿಬಿಟ್ಟಿತ್ತು. ಈ ಕೆಳಗಿನ ಅನಿಸಿಕೆಗಳಿಗೂ 'ಪಠಾಣ್' ಬಲವಾದ ಏಟು ಕೊಟ್ಟಿದೆ.

* ಬಾಲಿವುಡ್ ನಲ್ಲಿ ಮುಸ್ಲಿಮ್ ಕಲಾವಿದರ, ನಿರ್ದೇಶಕರ, ಬರಹಗಾರರ, ಹಾಡುಗಳ, ಉರ್ದು ಭಾಷೆಯ ಅಧಿಪತ್ಯವಿದೆ. ಅವರು ಫಿಲಂ ಉದ್ಯಮದಲ್ಲಿನ 'ಹಿಂದೂ'ಗಳನ್ನು ದಮನಿಸುತ್ತಾರೆ. 'ಭಾಷಾ–ಜಿಹಾದ್' ಮಾಡುತ್ತಾರೆ. ಅವರು ಫಿಲಂ ನಲ್ಲಿ ಹಿಂದೂ–ವಿರೋಧಿ ಅಜೆಂಡಾಗಳು ಇರುತ್ತವೆ. ಆದ್ದರಿಂದ ಇಂತಹವರ ಅಧಿಪತ್ಯವನ್ನು ಸೋಲಿಸಲು ಅವರ ಫಿಲಂಗಳನ್ನು ಸೋಲಿಸಬೇಕು. ಬಾಯ್ಕಾಟ್ ಬಾಲಿವುಡ್ ಗ್ಯಾಂಗಿನ ಪ್ರಕಾರ ಇದು ಶಾರುಖ್ ಖಾನ್ ಮತ್ತು 'ಪಠಾಣ್' ಗೆ ತೀರಾ ಒಪ್ಪುವಂತಹ ಸಹಜವಾದ ತಿಳಿವಳಿಕೆ. ಅದನ್ನೂ 'ಪಠಾಣ್' ನೋಡುಗರು ತಿರಸ್ಕರಿಸಿದ್ದಾರೆ.
* ಇಂತಹ ಮುಸ್ಲಿಂ ಕಲಾವಿದರ ಫಿಲಂ ಗಳು ಮಾತ್ರವಲ್ಲ, ವೈಯಕ್ತಿಕವಾಗಿಯೂ ಅವರು ದ್ವೇಷಕ್ಕೆ ಅರ್ಹರು. ಶಾರುಖ್ ಖಾನ್ ವಿರುದ್ಧ ಕಳೆದ ಕೆಲವು ವರ್ಷಗಳ ಪ್ರಚಾರದಿಂದ ಆತನ ವಿರುದ್ಧ ದ್ವೇಷ ಬಲವಾಗಿ ಬೇರೂರಿದೆ ಎಂಬ ಬಾಯ್ಕಾಟ್ ಗ್ಯಾಂಗಿನ ಹಿಗ್ಗಿಗೆ 'ಪಠಾಣ್' ನೋಡುಗರು ತಣ್ಣೀರೆರಚಿದ್ದಾರೆ.

ಇದರರ್ಥ ಪಠಾಣ್ ಒಳ್ಳೆಯ ಚಿತ್ರವೆಂದೇನಲ್ಲ. ಇದು ಬಾಲಿವುಡ್ ನ ಸಾಮಾನ್ಯ 'ದೇಶಭಕ್ತ' ಫಿಲಂ ನ ದಾಟಿಯಲ್ಲಿಯೇ ಇದೆ. ಇಲ್ಲಿನ ದೇಶಪ್ರೇಮ ಜನಪರ ಪ್ರಗತಿಪರ ಮೌಲ್ಯಗಳನ್ನು ಒಳಗೊಂಡಿಲ್ಲ. ಬದಲಾಗಿ ನೆರೆಯ ದೇಶದ ವಿರುದ್ಧ ದ್ವೇಷದ ಮೇಲೆ ಆಧಾರಿತವಾದದ್ದು. ನೆರೆಯ ದೇಶದ ಪಿತೂರಿಯನ್ನು ಸೋಲಿಸುವ ಮುಖ್ಯ ಪಾತ್ರವಾದ ಬೇಹುಗಾರನ ಸಾಹಸ–ಥ್ರಿಲ್ಲರ್.

ಒಂದು ಫಿಲಂ ನ ಅಥವಾ ಮುಖ್ಯ ಕಲಾವಿದ/ನಿರ್ದೇಶಕನ ನಿಜವಾದ ಜನಪ್ರಿಯತೆಯನ್ನು ಅದರ ಕಮರ್ಶಿಯಲ್ ಯಶಸ್ಸಿನಿಂದ ಮಾತ್ರ ಅಳೆಯಬಹುದೇ? ಬಾಯ್ಕಾಟ್ ಪ್ರಚಾರ ಮಾಧ್ಯಮ, ಸಾಮಾಜಿಕ ಮಾಧ್ಯಮ ಗಳಲ್ಲಿ ಅಲೆಗಳನ್ನು ಎಬ್ಬಿಸಿದರೂ ಎಷ್ಟರ ಮಟ್ಟಿಗೆ ಜನ ಫಿಲಂ ನೋಡುವುದರ ಮೇಲೆ ಅಥವಾ ಅದರ ಕುರಿತು ಧೋರಣೆಯ ಮೇಲೆ ಪ್ರಭಾವ ಬೀರುತ್ತವೆ ಎಂದು ಖಚಿತವಾಗಿ ಹೇಳಲು ಸಾಕಷ್ಟು ನಿಖರ ಮಾಹಿತಿಯಿಲ್ಲ ಎನ್ನುತ್ತಾರೆ ಫಿಲಂ ಉದ್ಯಮದಲ್ಲಿ ತೊಡಗಿರುವವರೂ, ಅದರ ವಿಶ್ಲೇಷಕರೂ. 'ಪದ್ಮಾವತ್', 'ಬ್ರಹ್ಮಾಸ್ತ್ರ', 'ಪಠಾಣ್' ಗಳು ಅದರ ವಿರುದ್ಧ ಬಾಯ್ಕಾಟ್ ಚಳುವಳಿಯನ್ನು ಧಿಕ್ಕರಿಸಿ ಯಶಸ್ಸು ಗಳಿಸಿವೆಯೇ? ಅಥವಾ ಬಾಯ್ಕಾಟ್ ಅಪಪ್ರಚಾರವೇ ಅವುಗಳಿಗೆ ಭಾರೀ ಪ್ರಚಾರದ ಸಾಧನವಾದವೇ? ಅಥವಾ ಬಾಯ್ಕಾಟ್ ನ ಯಾವುದೇ ಪರಿಣಾಮವಿಲ್ಲದೆ ಅವುಗಳ ಜನಪ್ರಿಯ ಅಂಶಗಳಿಂದಾಗಿ ಯಶಸ್ಸು ಕಂಡವೇ? ಅದೇ ರೀತಿ ಲಾಲ್ ಸಿಂಗ್ ಚಡ್ಡಾ, ಲಿಪ್ ಸ್ಟಿಕ್ ಅಂಡರ್ ಬುರ್ಖಾ, ಶಂಶೇರಾ ಗಳು ಸೋತದ್ದು ಅಥವಾ ಅಷ್ಟೇನು ಕಮರ್ಶಿಯಲ್ ಯಶಸ್ಸು ಕಾಣದ್ದು ಬಾಯ್ಕಾಟ್ ಅಪಪ್ರಚಾರದಿಂದಾಗಿಯೇ? ಅಥವಾ ಅವುಗಳ ಜನಪ್ರಿಯ ಅಂಶಗಳ ಕೊರತೆ ಕಾರಣವೇ? ಇವ್ಯಾವುದಕ್ಕೂ ಖಚಿತವಾದ ಉತ್ತರಗಳಿಲ್ಲ. ಹಾಗೆ ನೋಡಿದರೆ ಲಾಲ್ ಸಿಂಗ್ ಚಡ್ಡಾ, ಲಿಪ್ ಸ್ಟಿಕ್ ಅಂಡರ್ ಬುರ್ಖಾ,– ಇವು, 'ಪದ್ಮಾವತ್', ಪಠಾಣ್ ಗಳಗಿಂತ ಉತ್ತಮ ಫಿಲಂಗಳು.

ಆದರೂ ಬಾಯ್ಕಾಟ್ ಬಾಲಿವುಡ್' ಗ್ಯಾಂಗಿನ ಮೇಲೆ ಹೇಳಿದ ದಾಂಧಲೆಗಳ ಮತ್ತು ದೇಶದ ಒಟ್ಟಾರೆ ಗಂಭೀರ ಕೋಮುವಾದೀಕರಣದ ರಾಜಕೀಯ–ಸಾಂಸ್ಕೃತಿಕ ಹಿನ್ನೆಲೆಯಲ್ಲಿ 'ಪಠಾಣ್' ಯಶಸ್ಸು ಬಾಲಿವುಡ್' ಗ್ಯಾಂಗಿನ ಮೇಲೊಂದು ಗಮನಾರ್ಹ ಪ್ರತಿದಾಳಿಯಂತೂ ಖಂಡಿತ. ಆದರೆ ಅದನ್ನು ಬಾಯ್ಕಾಟ್ ಬಾಲಿವುಡ್' ಗ್ಯಾಂಗಿನ ಸೋಲು ಎನ್ನಬಹುದೇ? ಅಲ್ಲವಾದರೆ, ಇದರರ್ಥ ಬಾಯ್ಕಾಟ್ ಬಾಲಿವುಡ್' ಗ್ಯಾಂಗ್ ಯಾವುದೇ ವ್ಯತಿರಿಕ್ತ ಸಾಂಸ್ಕೃತಿಕ ಪರಿಣಾಮ ಬೀರುತ್ತಿಲ್ಲ, ಅಷ್ಟರ ಮಟ್ಟಿಗೆ ಅಪಾಯಕಾರಿಯಲ್ಲ ಎನ್ನಬಹುದೇ?

(ಭಾಗ–2 ರಲ್ಲಿ ಮುಂದುವರೆಯುವುದು)

NEW No. MAG(3)/NPP/205/2021-2022
JANASHAKTHI KANNADA VARA PATRIKE FEBRUARY 13-19, 2023 Price: Rs. 10/- Date of Publication: 10 FEBRUARY 2023 RNI No. KARKAN /2006/17926 Posted on 15-02-2023
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2



‘ಪಠಾಣ್’ ಯಶಸ್ಸು #BoycottBollywood ಗ್ಯಾಂಗಿನ ಸೋಲಿನ ಸೂಚನೆಯೇ?

ಭಾಗ 1

ವಸಂತರಾಜ ಎನ್.ಕೆ.

ಶಾರುಖ್ ಖಾನ್ ಅವರ ಇತ್ತೀಚಿನ ಫಿಲಂ ‘ಪಠಾಣ್’ ಅನಿರೀಕ್ಷಿತ ಅಭೂತಪೂರ್ವ ಕಮರ್ಶಿಯಲ್ ಯಶಸ್ಸು ಕಂಡಿದೆ. ಕಳೆದ ಎರಡು ವರ್ಷಗಳಲ್ಲಿ ನಡೆಯುತ್ತಿರುವ #BoycottBollywood (ಬಾಯ್ಕಾಟ್ ಬಾಲಿವುಡ್) ಗ್ಯಾಂಗಿಗೆ ಇದು ದೊಡ್ಡ ಸೋಲು ಎನ್ನಲಾಗುತ್ತಿದೆ. ಇದು ನಿಜವೇ? ಇದನ್ನು ಎರಡು ಭಾಗಗಳಲ್ಲಿ ವಿಶ್ಲೇಷಿಸಲಾಗಿದೆ. ಬಾಯ್ಕಾಟ್ ಬಾಲಿವುಡ್’ ಗ್ಯಾಂಗಿನ ಮೇಲೆ ಹೇಳಿದ ದಾಂಧಲೆಗಳ ಮತ್ತು ದೇಶದ ಒಟ್ಟಾರೆ ಗಂಭೀರ ಕೋಮುವಾದೀಕರಣದ ರಾಜಕೀಯ–ಸಾಂಸ್ಕೃತಿಕ ಹಿನ್ನೆಲೆಯಲ್ಲಿ ‘ಪಠಾಣ್’ ಯಶಸ್ಸು ಬಾಲಿವುಡ್’ ಗ್ಯಾಂಗಿನ ಮೇಲೊಂದು ಗಮನಾರ್ಹ ಪ್ರತಿದಾಳಿಯಂತೂ ಖಂಡಿತ. ಆದರೆ ಅದನ್ನು ಸೋಲು ಎನ್ನಬಹುದೇ? ಎಂಬ ಪ್ರಶ್ನೆಯನ್ನು ಭಾಗ 1 ಪರಿಶೀಲಿಸುತ್ತದೆ.

ಭಾಗ 2 ರಲ್ಲಿ ಫಿಲಂ ಗೆ ಸಂಬಂಧಿಸಿದಂತೆ ಸಂಘ ಗ್ಯಾಂಗಿನ ಸಾಂಸ್ಕೃತಿಕ ರಾಜಕಾರಣದ ಮೂರು ಕಾರ್ಯಾಚರಣೆಗಳ ನ್ನು ಗುರುತಿಸಿ, ಅವುಗಳ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ಈ ಪ್ರಶ್ನೆಯನ್ನು ಉತ್ತರಿಸಲು ಪ್ರಯತ್ನಿಸಲಾಗಿದೆ.

ಶಾರುಖ್ ಖಾನ್ ಅವರ ಇತ್ತೀಚಿನ ಫಿಲಂ ‘ಪಠಾಣ್’ ಅನಿರೀಕ್ಷಿತ ಅಭೂತಪೂರ್ವ ಕಮರ್ಶಿಯಲ್ ಯಶಸ್ಸು ಕಂಡಿದೆ. ಫಿಲಂ ನ ‘ಬೇಶರಂ ರಂಗ್’ ಹಾಡು ರಿಲೀಸ್ ಆಗುತ್ತಿದ್ದಂತೆ ಪಠಾಣ್’ ಫಿಲಂ ವಿರುದ್ಧ ಸಾಮಾಜಿಕ ಮಾಧ್ಯಮಗಳಲ್ಲಿ ಬಾಯ್ಕಾಟ್ ಪ್ರಚಾರ ಆರಂಭವಾಗಿತ್ತು. ಹಾಡಿನಲ್ಲಿ ಭಾರತೀಯ ಸಂಸ್ಕೃತಿಯನ್ನು ಅವಮಾನಿಸುವ ಅಶ್ಲೀಲ ನೃತ್ಯ ಮತ್ತು ಹಿರೋಯಿನ್ ದೀಪಿಕಾ ಪಡುಕೋಣೆ ಉಟ್ಟ ಕೇಸರಿ ಬಿಕಿನಿ ‘ಹಿಂದೂಗಳ ಧಾರ್ಮಿಕ ಭಾವನೆಗೆ ಘಾಸಿ ಮಾಡಿದೆ’ ಎಂಬ ಕಾರಣವನ್ನು ಬಾಯ್ಕಾಟ್ ಗೆ ಕೊಡಲಾಗಿತ್ತು. ಬಾಯ್ಕಾಟ್ ಪ್ರಚಾರದ ಭರಾಟೆ ಎಷ್ಟು ಜೋರಾಗಿತ್ತೆಂದರೆ ‘ಪಠಾಣ್’ ಫಿಲಂ ತಂಡ ಸಾಮಾನ್ಯವಾಗಿ ಫಿಲಂ ನ ರಿಲೀಸ್ ಮೊದಲು ಮಾಮೂಲಿಯಾಗಿ ಮಾಡುವ ಮಾಧ್ಯಮ ಪ್ರಚಾರವನ್ನು ಕೈ ಬಿಟ್ಟಿತ್ತು. ಹಲವು ಕಡೆ ಫಿಲಂ ನ ಪ್ರದರ್ಶನ ಮಾಡಲು ಬಿಡುವುದಿಲ್ಲವೆಂಬ ಬೆದರಿಕೆ ಬಂತು. ಹಲವು ಬಿಜೆಪಿ ಮಂತ್ರಿಗಳು, ಶಾಸಕರು, ಇತರ ಸಂಘ ಪರಿವಾರದ ನಾಯಕರು ಫಿಲಂ ವಿರುದ್ಧ ತೀವ್ರ ಟೀಕೆಗಳನ್ನು ಮಾಡಿ ಬಾಯ್ಕಾಟ್ ಗೆ ದನಿಗೂಡಿಸಿದರು, ಹಿಂಸಾತ್ಮಕ ಬೆದರಿಕೆಗೆ ಕುಮ್ಮಕ್ಕು ಕೊಟ್ಟರು. ಹಲವು ಕಡೆ ರಿಲೀಸ್ ದಿನ ಹಿಂಸಾತ್ಮಕ ದಾಳಿಯೂ ನಡೆಯಿತು. ಇಂತಹ ಪರಿಸ್ಥಿತಿಯಲ್ಲಿ ಜನವರಿ 25ರಂದು ರಿಲೀಸ್ ಆದ ಪಠಾಣ್’ ಯಶಸ್ಸು ಹಲವು ರೀತಿಗಳಲ್ಲಿ ಗಮನಾರ್ಹವೆಂದು ಹೇಳಲಾಗುತ್ತಿದೆ.



ಮೊದಲ ದಿನವೇ ‘ಪಠಾಣ್’ 100 ಕೋಟಿ ಸಂಪಾದಿಸಿ ಬಾಯ್ಕಾಟ್ ಗ್ಯಾಂಗಿನ ಬಾಯಿ ಮುಚ್ಚಿಸಿತ್ತು. 16ನೇ ದಿನದ ಹೊತ್ತಿಗೆ (ಫೆ.10) 887 ಕೋಟಿ ರೂ. ಸಂಪಾದಿಸಿದ್ದು 453 ಕೋಟಿ ರೂ. ಲಾಭ ಗಳಿಸಿದೆಯೆಂದು ವರದಿಯಾಗಿದೆ. ಅದು ಕೆಜಿಎಫ್ – ಚಾಪ್ಟರ್ 2 ಲಾಭವನ್ನು ಮೀರಿಸಿದೆ. ಮೊದಲ ಸ್ಥಾನದಲ್ಲಿರುವ ಬಾಹುಬಲಿ–2 ನ ಲಾಭ ಗಳಿಕೆಯನ್ನೂ ಮೀರಬಹುದು ಎಂಬ ಅಂದಾಜಿದೆ. ‘ಬಾಲಿವುಡ್ ನ ಫಿಲಂ ಗಳು ಕಳೆದ ಎರಡು ವರ್ಷಗಳಲ್ಲಿ ಸತತವಾಗಿ ಭಾರೀ ಯಶಸ್ಸು ಕಾಣದೆ ಹೆಚ್ಚಿನವು ಗೋತಾ ಹೊಡೆಯುತ್ತಿದ್ದ ಹಿನ್ನೆಲೆಯಲ್ಲಿ ಮತ್ತು ಇತರ ಪ್ರಾದೇಶಿಕ ಅಥವಾ ಬಾಲಿವುಡ್ ನ ಹೊರಗಿನ ಬಹುಭಾಷಿ ಫಿಲಂಗಳು ಯಶಸ್ಸು ಕಾಣುತ್ತಿದ್ದ ಹಿನ್ನೆಲೆಯಲ್ಲಿ ಬಾಲಿವುಡ್ ಕತೆ ಮುಗಿಯಿತು ಎಂದು ನಂಬಿಕೆ ಹಬ್ಬಲಾರಂಭಿಸಿತ್ತು. ‘ಪಠಾಣ್’ ಯಶಸ್ಸು ಈ ನಂಬಿಕೆಗೆ ಸಹ ಏಟು ಕೊಟ್ಟಿದೆ. ಕಳೆದ ಎರಡು ವರ್ಷಗಳಲ್ಲಿ ನಡೆಯುತ್ತಿರುವ #BoycottBollywood (ಬಾಯ್ಕಾಟ್ ಬಾಲಿವುಡ್) ಗ್ಯಾಂಗಿಗೆ ಇದು ದೊಡ್ಡ ಸೋಲು ಎನ್ನಲಾಗುತ್ತಿದೆ. ಈ ಬಾಯ್ಕಾಟ್ ಗ್ಯಾಂಗ್ ಹಿಂದೆ ಸಂಘ ಪರಿವಾರದ ಸಂಘಟಿತ ಶಕ್ತಿ, ಬಿಜೆಪಿ ಸರಕಾರಗಳ ಬಲ, ಒತ್ತಾಸೆ ಕುಮ್ಮಕ್ಕುಗಳು ಇರುವುದರಿಂದ ಅದು ಅವರ ಸೋಲು ಸಹ ಎನ್ನಲಾಗುತ್ತಿದೆ. ಇದು ನಿಜವೇ?

ಬಾಲಿವುಡ್ ನ ಮೂರು ಖಾನ್ ಗಳಲ್ಲಿ ನಂಬರ್ 1 ಆದ ಶಾರುಖ್ ಖಾನ್ ಬೆನ್ನ ಹಿಂದೆ ‘ಬಾಯ್ಕಾಟ್ ಗ್ಯಾಂಗ್ ಬಹಳ ಹಿಂದಿನಿಂದಲೇ ಬಿದ್ದಿತ್ತು. 2010ರಲ್ಲಿ ಐಪಿಲ್ ನಲ್ಲಿ ಪಾಕ್ ಆಟಗಾರರಿಗೂ ಅವಕಾಶ ಕೊಡಬೇಕು ಎಂಬ ಅವರ ಹೇಳಿಕೆಗೆ ಪ್ರತಿಯಾಗಿ, ಶಿವಸೇನೆ ಅವರ ‘ಮೈ ನೇಮ್ ಈಸ್ ಖಾನ್’ ಫಿಲಂ ಬಾಯ್ಕಾಟ್ ಗೆ ಕರೆ ನೀಡಿತ್ತು. 2015ರಲ್ಲಿ ದೇಶದಲ್ಲಿ ಬೆಳೆಯುತ್ತಿರುವ ‘ಅಸಹನೆ’ ವಿರುದ್ಧ ಶಾರುಖ್ ದನಿಯೆತ್ತಿದಾಗ ಮತ್ತೆ ಬಾಯ್ಕಾಟ್ ಗ್ಯಾಂಗ್ ಸಕ್ರಿಯವಾಗಿತ್ತು. ಶಾರುಖ್ ಖಾನ್ ಮಗ ಆರ್ಯನ್ ಖಾನ್ ನನ್ನು ‘ಡ್ರಗ್ ಪಾರ್ಟಿ’ಯಲ್ಲಿ ಭಾಗವಹಿಸಿದ್ದ ಮತ್ತು ಡ್ರಗ್ಸ್ ಇದ್ದ ಆಪಾದನೆಯ ಮೇಲೆ ಯಾವುದೇ ಪುರಾವೆ ಇಲ್ಲದಿದ್ದರೂ ಬಂಧಿಸಿ ಒಂದು ತಿಂಗಳ ಕಾಲ ಜೈಲಿನಲ್ಲಿ ಇಡಲಾಯ್ತು. ಇದು ಶಾರುಖ್ ಖಾನ್ ಗೆ ಕಿರುಕುಳ ಕೊಡುವುದರಲ್ಲಿ ಬಾಯ್ಕಾಟ್ ಗ್ಯಾಂಗ್ ಮತ್ತು ಬಿಜೆಪಿ ಸರಕಾರಗಳ ಶ್ರಮವಿಭಜನೆ ಮತ್ತು ಸಂಯೋಜನೆಯನ್ನು ತೋರಿಸಿತು.


ಇದೇ ರೀತಿಯ ‘ಟ್ರೀಟ್ ಮೆಂಟ’ನ್ನು ಆಮೀರ್ ಖಾನ್ ಗೂ ಕೊಡಲಾಗಿತ್ತು. ಅವರ ‘ಪಿಕೆ’ ಮತ್ತು ಇತ್ತೀಚಿನ ‘ಲಾಲ್ ಸಿಂಗ್ ಚಡ್ಡಾ’ ನ ಹಿಂದೆಯೂ ಬಾಯ್ಕಾಟ್ ಗ್ಯಾಂಗ್ ಬಿದ್ದಿತ್ತು. ಸಂಜಯ್ ಲೀಲಾ ಬನ್ಸಾಲಿ ಅವರ ‘ಪದ್ಮಾವತ್’ ವಿರುದ್ಧ 2016 ರಲ್ಲಿ ಆರಂಭವಾದ ಬಾಯ್ಕಾಟ್ ಚಳುವಳಿ ಕಳೆದ ಎರಡು ವರ್ಷಗಳಲ್ಲಿ ತಾರಕಕ್ಕೇರಿವೆ. ಗಂಗೂಬಾಯಿ ಕಾಥಿಯಾವಾಡಿ, ಲಿಪ್ ಸ್ಟಿಕ್ ಅಂಡರ್ ಬುರ್ಖಾ, ಶಂಶೇರಾ, ಸಡಕ್ 2, ವಿಕ್ರಂ ವೇದಾ, ಬ್ರಹ್ಮಾಸ್ತ್ರ, ಇವೆಲ್ಲ ಯಾವ ರೀತಿಯ ಫಿಲಂಗಳು ಬಾಯ್ಕಾಟ್ ಗೆ ‘ಅರ್ಹವಾಗುತ್ತವೆ’ ಎಂಬುದನ್ನು ಸ್ಪಷ್ಟ ಪಡಿಸಿದ್ದವು. 2022 ಅಂತೂ ಬಾಯ್ಕಾಟ್ ಬಾಲಿವುಡ್ ಗ್ಯಾಂಗಿಗೆ ಹಬ್ಬದ ವರ್ಷವಾಗಿತ್ತು. ಈ ಎಲ್ಲ ಬಾಯ್ಕಾಟ್ ಗಳನ್ನು ಒಟ್ಟಿಗೆ ತೆಗೆದುಕೊಂಡು ನೋಡಿದರೆ ಯಾವುದೇ ಫಿಲಂ ನ್ನು ಬಾಯ್ಕಾಟ್ ಗೆ ‘ಅರ್ಹವಾಗಿಸುವ’ ಕೆಲವು ಸಾಮಾನ್ಯ ಲಕ್ಷಣಗಳು ಕಂಡು ಬರುತ್ತವೆ. ಅವುಗಳಲ್ಲಿ ಹಲವು ‘ಪಠಾಣ್’ ನಲ್ಲಿ ಇದ್ದೂ ಶಾರುಖ್ ಖಾನ್ ಬಾಯ್ಕಾಟ್ ಗ್ಯಾಂಗಿನ ವಿಶೇಷ ಗುರಿಯಾಗಿದ್ದೂ ಅದು ಯಶಸ್ಸು ಕಂಡಿದ್ದು ಗಮನಾರ್ಹವಂತೂ ನಿಜ.

* ಹಿಂದೂಗಳು ಮಾತ್ರ ದೇಶಭಕ್ತರಾಗಲು ಸಾಧ್ಯ. ಮುಸ್ಲಿಮರು ದೇಶಭಕ್ತರಾಗಲು ಸಾಧ್ಯವಿಲ್ಲ, ಮಾತ್ರವಲ್ಲ ದೇಶದ್ರೋಹಿಗಳಾಗಿರುತ್ತಾರೆ ಎಂಬುದು ಪುಟ 15 ಕ್ಕೆ

‘ಇ.ಎಂ.ಎಸ್ ಸರಕಾರ ವಜಾವ್ಯೂ, ವಿಮೋಚನ ಸಮರವೆಂಬ ಪಿತೂರಿಯೂ’ ಫೆ.20 ರಂದು ಕುಂಬಳೆಯಲ್ಲಿ ಪಿಣರಾಯಿ ಅವರಿಂದ ಪುಸ್ತಕ ಬಿಡುಗಡೆ

1957ರಲ್ಲಿ ಕೇರಳದಲ್ಲಿ, ಭಾರತದಲ್ಲಿ ಹಾಗೂ ಜಗತ್ತಿನಲ್ಲೇ ಮೊದಲ ಚುನಾಯಿತವಾದ ಕಮ್ಯುನಿಸ್ಟ್ ಸರಕಾರವು ದೇಶದ ಯಾಕೆ ಜಾಗತಿಕ ಕಮ್ಯುನಿಸ್ಟ್ ಚಳುವಳಿಯಲ್ಲೇ ಒಂದು ಚಾರಿತ್ರಿಕ ಮೈಲಿಗಲ್ಲು. ಇ.ಎಂ. ಎಸ್.ನಂಬೂದ್ರಿಪಾದ್ ನಾಯಕತ್ವದ ಈ ಸರಕಾರದ ವಿರುದ್ಧ ‘ವಿಮೋಚನ ಸಮರಂ’ ಎಂಬ ಚಳುವಳಿ ನಡೆಸಿ, ಅದನ್ನು ನೆಪ ಮಾಡಿಕೊಂಡು 1959ರಲ್ಲಿ ಕೇಂದ್ರ ಸರಕಾರ ಅದನ್ನು ವಜಾ ಮಾಡಿದ್ದು ದೇಶಧ ಚರಿತ್ರೆಯಲ್ಲೇ ಒಂದು ನಾಚಿಕೆಗೇಡಿನ ಕೃತ್ಯ. ‘ವಿಮೋಚನ ಸಮರಂ’ನಲ್ಲಿ ಕಾಂಗ್ರೆಸ್ ಮತ್ತಿತರ ವಿರೋಧ ಪಕ್ಷಗಳ, ಜಾತಿ ಸಂಘಟನೆಗಳ, ಚರ್ಚ್ ಮಸೀದಿ ಮುಂತಾದ ಧಾರ್ಮಿಕ ಸಂಘಟನೆಗಳ, ಅಮರಿಕ ಮುಂತಾದ ದೇಶಗಳ ಸರಕಾರಗಳ, ಅವುಗಳಿಂದ ಪ್ರಾಯೋಜಿತವಾದ ಅಂತರ್ರಾಷ್ಟ್ರೀಯ ಸಂಘಟನೆಗಳ (ಅ)‘ಪವಿತ್ರ ಕೂಟ’ದ ವ್ಯವಸ್ಥಿತ ಜಂಟಿ ಪಿತೂರಿ 60 ವರ್ಷಗಳ ನಂತರ ಈಗ ಅಷ್ಟಾಗಿ ಗೊತ್ತಿಲ್ಲದ ಚರಿತ್ರೆಗೆ ಸೇರಿದೆ. **ಡಾ.ಪಿ.ಎಂ.ಸಲೀಂ** ಅವರ ಪಿ.ಎಚ್.ಡಿ ಮಹಾಪ್ರಬಂಧ ಮತ್ತು ಮಲಯಾಳಂ ನಲ್ಲಿ ಅದರ ಮೇಲೆ ಆಧಾರಿತ **‘ಕಮ್ಯುನಿಸ್ಟ್ ಭರಣವುಂ ವಿಮೋಚನ ಸಮರವುಂ’** ಪುಸ್ತಕದಲ್ಲಿ ಪುರಾವೆಗಳೊಂದಿಗೆ ಪ್ರಕಟಿತವಾದ ಅದರ ಅಗಾಧ ವಿವರಗಳು ದಂಗು ಬಡಿಸುವಂಥದ್ದು ಮಾತ್ರವಲ್ಲ, ಚರಿತ್ರೆಯನ್ನು ಮತ್ತೆ ನೆನಪಿಸುವಂಥದ್ದು. ಈಗಿನ ಮತ್ತು ಮುಂದಿನ ಪೀಳಿಗೆಗಳಿಗೆ ಇದು ತಿಳಿಯಬೇಕಾದ್ದು ಅಗತ್ಯ.

ಕೇರಳ ಎಲ್.ಡಿ.ಎಫ್ ಸರಕಾರದ ವಿರುದ್ಧ ಈಗ ಹೊಸ ಪಿತೂರಿ ನಡೆಯುತ್ತಿರುವ ಸಂದರ್ಭದಲ್ಲಿ ಇದನ್ನು ಎಲ್ಲರಿಗೂ ಪುಟ 15 ಕ್ಕೆ



JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027 Editor : **NITYANANDASWAMI**